ಬೀದರ • ಕಲಬುರಗಿ • ಯಾದಗಿರಿ • ರಾಯಚೂರು • ಕೊಪ್ಪಳ • ಬಳ್ಳಾರಿ • ಬಾಗಲಕೋಟೆ • ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Registration No. BDR/054/2024-2026 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper ಸಂಪಾದಕರು: ರಮೇಶರೆಡ್ಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 338 | PAGE- ಪುಟ 8 | ಬುಧವಾರ 08.01.2025 ಬೀದರ | RNI NO:KARKAN/2011/48371 | RS.ಬೆಲೆ 2/-

# ಗುತ್ತಿಗೆದಾರರ ಬಿಲ್ ಬಾಕಿ ಉಳಿಯಲು

## ಬಿಜೆಪಿ ಕಾರಣ, ಗ್ಯಾರಂಟಿಯಲ್ಲ: ಜಾರಕಿಹೊಳಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 07 : ಬಿಜೆಪಿ ಸರ್ಕಾರದ ಕೊನೆಯ ಎರಡು ವರ್ಷಗಳ ಅಧಿಕಾರವಧಿಯಲ್ಲಿ ಆರ್ಥಿಕ ನೆರವಿಲ್ಲದೆ ಕಾಮಗಾರಿ ಮಾಡಿರುವುದೇ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರ ಬಿಲ್ ಬಾಕಿ ಉಳಿಯಲು ಕಾರಣವೇ ಹೊರತು ಗ್ಯಾರಂಟಿ ಯೋಜನೆಗಳ ಜಾರಿಯಿಂದಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಗುತ್ತಿಗೆದಾರರ ಬಿಲ್ ಬಾಕಿ ಸಮಸ್ಯೆ ಪ್ರತಿ ಜಿಲ್ಲೆಗಳಲ್ಲಿಯೂ ಇದೆ. ಅವರು ಕೆಲಸ ಮಾಡಿದ್ದು, ಬಿಲ್ ಪಾವತಿಸಬೇಕಿರುವುದು ನಿಜ. ಈ ಸಮಸ್ಯೆಗೆ ಮೂಲ ಕಾರಣವನ್ನು ಯಾರು ಹೇಳುತ್ತಿಲ್ಲ. ಹಣಕಾಸು ಇಲಾಖೆ ಯಾವ ಇಲಾಖೆಗೆ ಎಷ್ಟು ಹಂಚಿಕೆಯಾಗಿದೆ, ಅಷ್ಟನ್ನೇ ನೀಡುತ್ತದೆ. ಆದರೆ, ಬಿಜೆಪಿ ಸರ್ಕಾರದ ಇದ್ದಾಗ ಅನುದಾನ ಇಲ್ಲದೆ ಕೆಲಸಗಳನ್ನು ಮಾಡಲಾಗಿದೆ. ಬಿಜೆಪಿ



ಮಾಡಿದ ಆ ಎಡವಟ್ಟಿನಿಂದ ಬಿಲ್ ಸಮಸ್ಯೆ ಸೃಷ್ಟಿಯಾಗಿದೆ ಎಂದು ಆರೋಪಿಸಿದರು.

ಲೋಕೋಪಯೋಗಿ ಇಲಾಖೆಯದ್ದೆ 14 ಸಾವಿರ ಕೋಟಿ ರೂ. ವ್ಯತ್ಯಾಸ ಇದ್ದು, ಇದಕ್ಕೆ ಯಾವುದೇ ಅನುದಾನ ಇಲ್ಲ. ಹೀಗಾಗಿ ಮುಂದೆ ಹೆಚ್ಚುವರಿ ಹಣ ಕೇಳುತ್ತಾ ಕೇಳುತ್ತಾ, ಅದನ್ನು ಸರಿದೂಗಿಸಬೇಕಾದ ಅನಿವಾರ್ಯತೆಯಿದೆ. ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಘೋಷಿಸಲಾಗಿದ್ದು, ಗ್ಯಾರಂಟಿಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ತಿಳಿಸಿದರು.


ಕಾಂಗ್ರೆಸ್ಸಿನದ್ದು 60 ಪರ್ಸೆಂಟ್ ಸರ್ಕಾರ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಆರೋಪಕ್ಕೆ ಗಾಳಿಯಲ್ಲಿ ಗುಂಡು ಹೊಡೆದಂತೆ. ಎಚ್‌ಡಿಕೆ ಅಷ್ಟೆ ಅಲ್ಲದೆ ಬಹಳಷ್ಟು ಜನ ಆರೋಪ ಮಾಡುತ್ತಿದ್ದಾರೆ. ಬಿಜೆಪಿಯದ್ದು 40 ಪರ್ಸೆಂಟ್ ಸರ್ಕಾರ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಯ್ಯ ಆರೋಪಿಸಿ, ಪ್ರಧಾನಿಗೆ ಪತ್ರ ಬರೆದಿದ್ದರು. ಈಗ ಕುಮಾರಸ್ವಾಮಿ ಬಳಿ ದಾಖಲೆಗಳಿದ್ದರೆ ಮೊದಲು ಸಿಎಂಗೆ ನೀಡಲಿ ಎಂದು ಸಚಿವ ಜಾರಕಿಹೋಳಿ ತಿರುಗೇಟು ನೀಡಿದರು.

ಆತ್ಮಹತ್ಯೆ ಮಾಡಿಕೊಂಡಿರುವ ಸಚಿನ್ ಪಾಂಚಾಳ್ ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರಿಲ್ಲ.

(2ನೇ ಪುಟ ನೋಡಿ)

# ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ

## ಅತಿ ವಿಜೃಂಭಣೆಯಿಂದ ಆಚರಿಸಲು ನಿರ್ಧಾರ





ಶ್ರೀ ವೀರಭದ್ರೇಶ್ವರ ದೇವರ ಮಹಿಮೆ ಅಪಾರವಿದೆ. ದೇವರ ಹತ್ತಿರ ಯಾರೊಬ್ಬರ ಅಧಿಕಾರ. ಆಸ್ತಿ.ಅಂತಸ್ತು ನಡೆಯುವುದಿಲ್ಲ. ದೇವರಿಗೆ ಪ್ರತಿಯೊಬ್ಬರು ತಲೆ ಬಗ್ಗಿ ನಡೆಯಬೆಕು.

ಮಾಜಿ ಸಚಿವ ರಾಜಶೇಖರ ಪಾಟೀಲ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಜ.7:ಗ್ರಾಮ ದೇವರಾದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸಲಾಗುವುದು. ಜಾತ್ರೆಗೆ ಪ್ರತಿಯೊಬ್ಬರು ಸಹಕರಿಸಬೇಕೆಂದು ಮಾಜಿ ಸಚಿವ ರಾಜಶೇಖರ ಪಾಟೀಲ ಹೇಳಿದರು.

ಜಾತ್ರಾ ಮಹೋತ್ಸವದ ಪೂರ್ವಸಿದ್ಧತಾ ಸಭೆಯನ್ನುದ್ದೇಶಿಸಿ ಮಾತನಾಡಿ, ಈಗಾಗಲೇ ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ಕೆ ರೂ. 6.50 ಕೋಟಿ ಕಾಮಗಾರಿಗೆ ಅನುಮೊದನೆ ದೊರಕಿದೆ. ಅತಿ ಶೀಘ್ರವಾಗಿ ಕಾಮಗಾರಿಗೆ ಚಾಲನೆ ನೀಡಲಾಗುವುದೆಂದರು.

ಕಲ್ಯಾಣ ಕರ್ನಾಟಕ ಭಾಗದ ಒಡೆಯನಾದ ಶ್ರೀ ವೀರಭದ್ರಸ್ವಾಮಿ ದೇವರ ಜಾತ್ರೆ ಒಡೆದು ಹೋಗಿರುವ ಮನಸ್ಸುಗಳ ಒಟ್ಟುಗೂಡಿಸುವ ಕೆಲಸ ಮಾಡುತ್ತದೆ ಎಂದು ಹಿರೇಮಠ ಸಂಸ್ಥಾನದ ಶ್ರೀ ರೇಣುಕ ವೀರ ಗಂಗಾಧರ ಶಿವಾಚಾರ್ಯರು ಹೇಳಿದರು.

ಪಟ್ಟಣದ ದಿ. ಬಸವರಾಜ ಪಾಟೀಲ್ ಕಲ್ಯಾಣ ಮಂಟಪದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಸಹಾಯಕ ಆಯುಕ್ತರು ತಹಸೀಲ್ದಾರ, ಪುರಸಭೆ, ಜೆಸ್ಕಾಂ, ಪೋಲೀಸ್ ಇಲಾಖೆ, ಅಲಂಕಾರ, ಅಗ್ನಿಕುಂಡ, ಮಳಿಗೆ ಸಮಿತಿಗಳು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಭಾಗವಹಿಸಿದ್ದ ಪೂರ್ವಭಾವಿ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು ಕಲ್ಯಾಣ ಕರ್ನಾಟಕ ಭಾಗದ ಐತಿಹಾಸಿಕ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಸಂಭ್ರಮ ಸಡಗರದಿಂದ ಆಚರಿಸಲು ಸಕಲ ಸಿದ್ಧತೆ ದೇವಸ್ಥಾನ ಆಡಳಿತ ಮಂಡಳಿ ಜತೆಗೆ ಜನಪ್ರತಿನಿಧಿಗಳು, ಪಟ್ಟಣದ ಉದ್ಯಮಿಗಳು, ಸ್ಥಾನಿಯ ಸಂಸ್ಥೆಗಳ ಸಹಕಾರವು ಇದ್ದಾಗ ಮಾತ್ರ 18 ದಿನಗಳ ಕಾಲ ವೈಭವ ಪೂರ್ಣವಾಗಿ ಐತಿಹಾಸಿಕ ಜಾತ್ರೆಯ ಯಶಸ್ವಿಯಾಗಿ ಮಾಡಲು ಸಾಧ್ಯ ಎಂದರು.

ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ್ ಮಾತನಾಡಿ, 2026ಕ್ಕೆ ನಮ್ಮ ಪರಿವಾರದಿಂದಲೂ ಜೀವಂತ ಆನೆಯ ಮೇಲೆ ಶ್ರೀ ವೀರಭದ್ರಸ್ವಾಮಿಯ ಮೆರವಣಿಗೆ ನಡೆಸಲಾಗುವುದು. ಜತೆಗೆ ಕೋವಿಡ್ ಹೆಮ್ಮಾರಿಯ ರೋಗಲಕ್ಷಣವನ್ನು ಹೊಂದಿರುವ ಎಚ್‌ಎಂಪಿವಿ ವೈರಸ್ ಕುರಿತು ಮುನ್ನೆಚ್ಚರಿಕೆ ವಹಿಸಿ ಪ್ರತಿಯೊಬ್ಬರು ಮಾಸ್ಕ ಧರಿಸಬೇಕು. ಪಟ್ಟಣದಾದ್ಯಂತ ಹೆಚ್ಚು ಹೆಚ್ಚು ಆರೋಗ್ಯ ತಪಾಸಣಾ ಕೇಂದ್ರಗಳು ಜಾತ್ರೆ ಮುಗಿಯುವವರೆಗೆ ಸ್ಥಾಪಿಸುವಂತೆ ಸೂಚಿಸಿದರು.

ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಮಾತನಾಡಿ, ಜಾತ್ರಾಮಹೋತ್ಸವಕ್ಕೆ ವಿವಿಧ ಇಲಾಖೆಯ ಅಧಿಕಾರಿಗಳು ತಮಗೆ ನೀಡಿದ ಜವಾಬ್ದಾರಿ ಅಚ್ಚುಕಟ್ಟಾಗಿ ನಿಭಾಯಿಸಬೇಕು. ಜತೆಗೆ ಪುರಸಭೆಯಿಂದ

(2ನೇ ಪುಟ ನೋಡಿ)

# ಕಲಬುರಗಿ- ಬೀದರ್ ಜಿಲ್ಲೆಗಳ ಬಹುಗ್ರಾಮ ಕುಡಿಯುವ ನೀರು ಯೋಜನೆ

## ಅನುಮೋದನೆಗಾಗಿ ಕೇಂದ್ರ ಸಚಿವರ ಭೇಟಿಯಾದ ಸಚಿವ ಪ್ರಿಯಾಂಕ್ ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.7:ಜಲಜೀವನ ಮಿಷನ್ ಯೋಜನೆ ಅಡಿಯಲ್ಲಿ ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಅನುಮೋದನೆ ನೀಡುವಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಅವರಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ





ಸಚಿವರಾದ ಪ್ರಿಯಾಂಕ್ ಖರ್ಗೆ ಕೋರಿದ್ದಾರೆ.

ಜಲಶಕ್ತಿ ಸಚಿವಾಲಯದಲ್ಲಿ ನಡೆದ ಸಭೆಯಲ್ಲಿ ಯೋಜನೆಯ ಮಹತ್ವದ ಕುರಿತು ಕೇಂದ್ರ ಸಚಿವರಿಗೆ ಮನವರಿಕೆ ಮಾಡಿದ ಖರ್ಗೆ, ಎರಡು ಜಿಲ್ಲೆಗಳ 1,672 ಜನವಸತಿಗಳ ಸುಮಾರು 31.67 ಲಕ್ಷ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಗುರಿ ಹೊಂದಲಾಗಿದೆ. ಈ ಯೋಜನೆಯ ಮೂಲಕ ಕಲಬುರಗಿ ಜಿಲ್ಲೆಯ 3,95,858 ಹಾಗೂ ಬೀದರ್ ಜಿಲ್ಲೆಯ 1,74,838 ಮನೆಗಳಿಗೆ ನಳಗಳ ಮೂಲಕ ನಿರಂತರ ಕುಡಿಯುವ ನೀರು ಒದಗಿಸಬಹುದಾಗಿದೆ ಎಂದರು.

ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳು ಅಭಿವೃದ್ದಿಗೆ ಸಹಕಾರಿಯಾಗುವ ಅಂಶಗಳನ್ನು ಹೊಂದಿವೆ. ಆದರೆ ಜನರಿಗೆ

(2ನೇ ಪುಟ ನೋಡಿ)

# ಅಂಬೇಡ್ಕರ್ ಭಾವಚಿತ್ರಕ್ಕೆ

## ಕಿಡಿಗೇಡಿಗಳಿಂದ ಪುನಃ ಅವಮಾನ





ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 07 : ಜಿಲ್ಲೆಯ ಜನವಾಡಾ ಪೊಲೀಸ್ ಠಾಣೆ-ಯ ವ್ಯಾಪ್ತಿಯಲ್ಲಿ ಬರುವ ವಿಳಾಸಪುರ್ ಗ್ರಾಮದಲ್ಲಿ ಮತ್ತೊಮ್ಮೆ ಬ್ಯಾನರಲ್ಲಿರುವ ಅಂಬೇಡ್ಕರ್ ಭಾವಚಿತ್ರಕ್ಕೆ ಸೆಗಣಿ ಬಳಿದು ಅವಮಾನ ಮಾಡಲಾಗಿದೆ.

(2ನೇ ಪುಟ ನೋಡಿ)



ಹುಮನಾಬಾದ :ಪಟ್ಟಣದ ಮಾಜಿ ಸಚಿವ ರಾಜಶೇಖರ ಬಿ ಪಾಟೀಲ್ ರ ಗೃಹ ಕಛೇರಿಗೆ ಆಗಮಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮಾಜಿ ಸಚಿವ ರಾಜಶೇಖರ ಪಾಟೀಲ್‌ರು ಆತ್ಮೀಯಾಗಿ ಬರಮಾಡಿಕೊಂಡು ಸನ್ಮಾನಿಸಿ ಕ್ಷೇತ್ರದ ಅಭಿವೃದ್ಧಿ ಕುರಿತು ಚರ್ಚಿಸಿದರು.ಈ ಸಂದರ್ಭದಲ್ಲಿ ಪಕ್ಷದ ಮುಖಂಡರು,ಗಣ್ಯರು,ಕಾರ್ಯಕರ್ತರು ಉಪಸ್ಥಿತರಿದ್ದರು.

# ವೈದ್ಯಕೀಯ ಪದವಿ ಇಲ್ಲದೇ ವೈದ್ಯವೃತ್ತಿ ಮಾಡುತ್ತಿದ್ದ 6 ಜನರಿಗೆ

## 1 ಲಕ್ಷ ರೂ. ದಂಡ, ಒಬ್ಬರ ವಿರುದ್ಧ ಎಫ್‌ಐಆರ್ : ಡಿಸಿ ಮಿಶ್ರಾ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.07:ಜಿಲ್ಲೆಯಲ್ಲಿ ವೈದ್ಯಕೀಯ ಪದವಿ ವೃತ್ತಿ ಪಡೆಯದೇ ವೈದ್ಯಕೀಯ ಸೇವೆ ನೀಡುವ ನಕಲಿ ವೈದ್ಯರ ವಿರುದ್ಧ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007ರಡಿ ದಂಡ ವಿಧಿಸುವ, ಅಗತ್ಯವೆನಿಸಿದಲ್ಲಿ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ ಕಾನೂನಾತ್ಮಕ ಕ್ರಮ ಜರುಗಿಸಬೇಕು ಎಂದು ಕೆಪಿಎಮ್‌ಇ ಕಾಯ್ದೆಯ ಅಧ್ಯಕ್ಷರು ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸೂಚಿಸಿದರು.

ಮಂಗಳವಾರದಂದು ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಏರ್ಪಡಿಸಿದ್ದ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಕೆಪಿಎಮ್‌ಇ ಕಾಯ್ದೆ ನೋಂದಣಿ ಮತ್ತು ಕುಂದು ಕೊರತೆಗಳ ಪರಿಹಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಯಾರಾದರು ಅಧೀಕೃತ ವೈದ್ಯಕೀಯ ಪದವಿ ಪಡೆಯದೇ ವೈದ್ಯ ವೃತ್ತಿ ಮಾಡುವವರ ಮನೆ, ಮಳಿಗೆ, ಇತರೆ ಯಾವುದೇ ರೀತಿಯ ಕಟ್ಟಡಗಳಿಗೆ ಆರೋಗ್ಯಾಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಬೇಕು. ಅಂತಹವರಿಗೆ ಬಾಡಿಗೆ ಕಟ್ಟಡ

(2ನೇ ಪುಟ ನೋಡಿ)

# ಭಾರತೀಯ ಹಬ್ಬಗಳು

## ದೇಶದ ಏಕತೆಯ ಅಸ್ಮಿತೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ, ಜ.7- ಭಾರತೀಯ ಹಬ್ಬಗಳು ದೇಶದ ಏಕತೆಯ ಅಸ್ಮಿತೆ. ಸಂಕ್ರಾಂತಿ ಪ್ರಕೃತಿಯ ಆವರ್ತಕ ಲಯ, ಜೀವನ ಮತ್ತು ಸಮೃದ್ಧಿಯ ನವೀಕರಣದಲ್ಲಿ ಸಾಮೂಹಿಕ ಏಕತೆಯನ್ನು ಸೂಚಿಸುತ್ತದೆ

(2ನೇ ಪುಟ ನೋಡಿ)

# ಒಂದನೇ ಪುಟದಿಂದ

## 6 ಜನರಿಗೆ 1 ಲಕ್ಷ ರೂ. ದಂಡ, ಒಬ್ಬರ ವಿರುದ್ಧ ಎಫ್‌ಐಆರ್ : ಡಿಸಿ ಮಿಶ್ರಾ

ನೀಡಿದ್ದಲ್ಲಿ ಕಟ್ಟಡ ಮಾಲೀಕರ ವಿರುದ್ಧ ಕೆಪಿಎಮ್‌ಇ ಕಾಯ್ದೆಯಡಿ ಕಾನೂನಾತ್ಮಕ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ಅಧಿಕೃತ ವೈದ್ಯಕೀಯ ಪದವಿ ಪಡೆದ ವೈದ್ಯರ ಬಳಿ ತಪಾಸಣೆ ಮಾಡಿಸಲು ಸೂಚಿಸಬೇಕು. ಇದರಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ಗಂಭೀರ ಪರಿಣಾಮಗಳನ್ನು ತಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಅನಧೀಕೃತವಾಗಿ ವೈದ್ಯ ವೃತ್ತಿ ಮಾಡುತ್ತಿರುವವರು ಕಂಡುಬಂದಲ್ಲಿ ಅವರ ವೈದ್ಯಕೀಯ ಪದವಿಯ ಮಾಹಿತಿ ಹೊಂದಿ ಚಿಕಿತ್ಸೆ ಪಡೆಯಬೇಕು. ನಕಲಿ ವೈದ್ಯರು ಎಂದು ಕಂಡುಬಂದರೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಅಥವಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯಕ್ಕೆ ದೂರು ನೀಡಿದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಬಳ್ಳಾರಿ ತಾಲ್ಲೂಕಿನ ಜಾಲಿಬೆಂಚಿ ಗ್ರಾಮದಲ್ಲಿ ವೈದ್ಯವೃತ್ತಿ ಮಾಡುತ್ತಿದ್ದ ನಕಲಿ ವೈದ್ಯ ಬಸವರಾಜ್ ವಿರುದ್ಧ ಮೋಕ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ (ಎಫ್‌ಐಆರ್) ದಾಖಲಿಸಲು ಸೂಚಿಸಿದ ಅವರು, ಕಪ್ಪಗಲ್ಲು ಗ್ರಾಮದ ರಾಜಣ್ಣ, ರೆಹಮಾನ್, ಶೇಕ್ಷಾವಲಿ, ಗುರು ಪ್ರಕಾಶ್, ಮಹಾದೇವ್ ಮತ್ತು ಸಿರುಗುಪ್ಪ ತಾಲ್ಲೂಕಿನ ಕೆ.ಸೂಗೂರು ಗ್ರಾಮದ ಬೆಂಚಿ ಕ್ಯಾಂಪ್‌ನ ಕೆ.ಚಂದ್ರಶೇಖರ್ ಸೇರಿದಂತೆ ಒಟ್ಟು 6 ಜನರ ವಿರುದ್ಧ ತಲಾ 1 ಲಕ್ಷ ದಂಡ ವಿಧಿಸಲು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು, ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಟಾನಾಧಿಕಾರಿ ಡಾ.ಪೂರ್ಣಿಮಾ ಎಸ್ ಕಟ್ಟಿಮನಿ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರಕುಮಾರ್, ಐಎಮ್‌ಎ ಅಧ್ಯಕ್ಷ ಡಾ.ಮಾಣಿಕ್‌ರಾವ್ ಕುಲಕರ್ಣಿ, ಫಾಕ್ಸಿ ಅಧ್ಯಕ್ಷ ಡಾ.ಶಿವಕುಮಾರ್, ಎಫ್‌ಪಿಎಐ ನ ವ್ಯವಸ್ಥಾಪಕರಾದ ವಿಜಯಲಕ್ಷ್ಮಿ??, ಆರೋಗ್ಯ ನಿರೀಕ್ಷಣಾಧಿಕಾರಿ ಅರುಣ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ದೇಶದ ಏಕತೆಯ ಅಸ್ಮಿತೆ

ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಎಸ್.ಆರ್. ಮುಗನೂರಮಠ ಹೇಳಿದರು.ಅವರು ನಗರದ ಪ್ರತಿಷ್ಠಿತ ಬಿ.ವಿ.ವಿ.ಸಂಘದ ಬಸವೇಶ್ವರ ಪದವಿ ಪೂರ್ವ ಕಲಾ ಮಹಾವಿದ್ಯಾಲಯದಲ್ಲಿ ಮಂಗಳವಾರ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ 3 ದಿನಗಳ ಸಾಂಸ್ಕೃತಿಕ ಹಬ್ಬದ ಸಂಕ್ರಾಂತಿ ಸಿರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಹಬ್ಬಗಳನ್ನು ಆಚರಿಸುವ ಮತ್ತು ಅವುಗಳ ಮಹತ್ವವನ್ನು ತಿಳಿಸುವ ಉದ್ದೇಶದಿಂದ 3ದಿನಗಳ ಸಾಂಸ್ಕೃತಿಕ ಹಬ್ಬವನ್ನು ಹಮ್ಮಿಕೊಂಡಿದೆ, ಸಂಕ್ರಾಂತಿ ಸಿರಿಯಲ್ಲಿ ಮಕರ ಸಂಕ್ರಮಣ ಆಚರಣೆ, ದೇಶಿ ವೇಷಭೂಷಣ ಮತ್ತು ಸಾಮೂಹಿಕ ದೇಶಿ ಭೋಜನಗಳನ್ನು ವಿದ್ಯಾರ್ಥಿಗಳಿಗೆ ಅಯೋಜನೆ ಮಾಡಲಾಗಿದೆ. ಹಬ್ಬಗಳ ಆಚರಣೆಯಿಂದ ಪರಸ್ಪರ ಬ್ರಾತೃತ್ವ  ಬೆಳೆದು ಎಲ್ಲರೂ ಒಂದೇ ಎಂಬ ಭಾವ ಮೂಡುತ್ತದೆ ಎಂದರು. ಮಕರ ಸಂಕ್ರಾಂತಿ ಸಾರವು ಅದರ ಸಾಂಕೇತಿಕ ಅರ್ಥದಲ್ಲಿದೆ, ಇದು ಪ್ರಕೃತಿಯ ಆವರ್ತಕ ಲಯ ಮತ್ತು ಜೀವನ ಮತ್ತು ಸಮೃದ್ಧಿಯ ನವೀಕರಣದಲ್ಲಿ ಸಾಮೂಹಿಕ ಸಂತೋಷವನ್ನು ಸೂಚಿಸುತ್ತದೆ. ಇದು ಭಾರತದ ಸಂಸ್ಕೃತಿ, ಧರ್ಮ ಮತ್ತು ಕೃಷಿಯೊಂದಿಗೆ ಆಳವಾಗಿ ಸಂಬಂಧ ಹೊಂದಿರುವ ಹಬ್ಬವಾಗಿದೆ. ಮಕರ ಸಂಕ್ರಾಂತಿ ಹಬ್ಬವು ಭಾರತದಾದ್ಯಂತ ವೈವಿಧ್ಯಮಯ ಸಮುದಾಯಗಳನ್ನು ಒಂದುಗೂಡಿಸುತ್ತದೆ ಎಂದು ಅವರು ಹೇಳಿದರು. ಸಂಚಾಲಕರಾದ ಡಾ.ಆರ್ .ಎಮ್.ಬೆಣ್ಣೂರ, ಆರ್.ಆರ್.ಅರಷಿಣಗೋಡಿ, ವಿ.ಆರ್.ಹಿರೇಮಠ, ಎಮ್.ಆರ.ಮಲಕಶೆಟ್ಟಿ, ಸಂಗೀತಾ ಪವಾರ, ಜಯಶ್ರೀ ದಿವಟೆ, ಎಸ್.ಬಿ.ಕಮತೆ, ಶ್ರೇಯಾ ಜೋರಾಪುರ, ವಿ.ಎಸ್.ಚಿಗರಿ ಎಮ್.ಬಿ.ಜಮಾದಾರ, ಸಂತೋಷ ಸುಭಾಂಜಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಗಮನ ಸೆಳೆದ  ಸಂಕ್ರಾಂತಿ ಸಂಭ್ರಮ* : ಸಂಕ್ರಾಂತಿ ಹಬ್ಬದ ಆಚರಣೆ ಅಂಗವಾಗಿ ಮೊಸರು ಬೆಣ್ಣೆಗಳ ಮಡಿಕೆಯನ್ನು ಕಬ್ಬಿನಿಂದ ಸಿಂಗರಿಸಲಾಗಿತ್ತು, ಅದನ್ನು ಸುತ್ತುವರೆದ ದೇಶಿ ಉಡುಗೆ ತೊಟ್ಟವಿದ್ಯಾರ್ಥಿನಿಯರು ಸಂಕ್ರಾಂತಿ ಸುಗ್ಗಿ ಹಾಡಿಗೆ ಹೆಜ್ಜೆ ಹಾಕಿದರು. ನಂತರ ವಿದ್ಯಾರ್ಥಿಗಳಿಂದ ದೇಶಿಯ ಕ್ಯಾಟ್ ವಾಕ್ ಮಾಡಿ ನಂತರದಲ್ಲಿ ಸಂಕ್ರಾಂತಿ ಸೊಬಗಿನ ಇಷ್ಟದ ತಿಂಡಿಗಳಾದ ಶೇಂಗಾ ಹೋಳಿಗೆ, ಕಡಬು,ಕರ್ಚಿಕಾಯ, ಸಂಡಿಗೆ, ತುಂಬುಗಾಯಿ, ತರತರಹ ಚಟ್ನಿಗಳು, ಹಿಟ್ಟಿನ ಪಲ್ಯ, ಖಡಕ ಸಜ್ಜಿ ರೋಟ್ಟಿ, ಸೌತೆಕಾಯಿ,ಗಜ್ಜರಿ,ಮೂಲಂಗಿ ಸೇರಿದಂತೆ ದೇಶಿ ಊಟದ ತರೆಹವಾರಿ ಖಾದ್ಯಗಳನ್ನೊಳಗೊಂಡ ದೇಶಿ ಭೋಜನವನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವೃಂದ ಸಾಮೂಹಿಕವಾಗಿ ಸವಿದರು.

## ಕಿಡಿಗೇಡಿಗಳಿಂದ ಪುನಃ ಅವಮಾನ

ರಾತ್ರಿ ಸಮಯದಲ್ಲಿ ಭೀಮಾ ಕೊರೆಗಾಂವ್ ವಿಜಯೋತ್ಸವದ ಬ್ಯಾನರಲ್ಲಿ ಇರುವ ಅಂಬೇಡ್ಕರ್ ಭಾವಚಿತ್ರಕ್ಕೆ ಸೆಗಣಿ ಬಳಿದು ಅವಮಾನ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಇಂದು ಮುಂಜಾನೆ ಇದನ್ನು ಗಮನಿಸಿದ ದಲಿತರು, ಸ್ಥಳದಲ್ಲಿ ಜಮಾಯಿಸಿ ಆಕ್ರೋಶ ಹೊರಹಾಕಿದ್ದಾರೆ. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.ಡಿ. 12 ರ ರಾತ್ರಿ ವಿಳಾಸಪುರ್ ಗ್ರಾಮದ ಅಂಬೇಡ್ಕರ್ ಪ್ರತಿಮೆಗೆ ಚಪ್ಪಲಿ ಹಾರ ಹಾಕಿ ಅವಮಾನ ಮಾಡಲಾಗಿತ್ತು. ಘಟನಾ ಸ್ಥಳಕ್ಕೆ ಜಿಲ್ಲಾ ವರಿಷ್ಠಾಧಿಕಾರಿಗಳು ಭೇಟಿ ನೀಡಿದ್ದರು. ಘಟನೆ ಖಂಡಿಸಿ ದಲಿತ ಸಂಘಟನೆಗಳು ಜಿಲ್ಲಾದ್ಯಂತ ಪ್ರತಿಭಟನೆ ನಡೆಸಿದವು. ಈ ಘಟನೆಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧನ ಮಾಡಲಾಗಿತ್ತು. ಘಟನಾ ಸ್ಥಳಕ್ಕೆ ಜನವಾಡ ಪೊಲೀಸ್ ಠಾಣೆಯ ಪಿಎಸ್‌ಐ ಭೇಟಿ ನೀಡಿದ್ದಾರೆ.

## ಅತಿ ವಿಜೃಂಭಣೆಯಿಂದ ಆಚರಿಸಲು ನಿರ್ಧಾರ

ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ಸಮಸ್ಯೆ ಯಾಗದಂತೆ ನೋಡಿಕೊಳ್ಳಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಮಾತನಾಡಿ, ಈ ಬಾರಿ 15 ರಿಂದ 20ರ ವರೆಗೆ ನಡೆಯಲಿರುವ ಕಟ್ಟಿಗೆ ಆನೆಯ ಸ್ಥಳದಲ್ಲಿ ಪಾಟೀಲ್ ಪರಿವಾರದಿಂದ ಜೀವಂತ ಆನೆಯ ಖರ್ಚು ನೀಡಿ. ಮೆರವಣಿಗೆ ನಡೆಸಲಾಗುವುದು ಎಂದರು.ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ಹಿರೇಮಠ ಸಂಸ್ಥಾನ ಶ್ರೀ ರೇಣುಕ ವೀರ ಗಂಗಾಧರ ಶಿವಾಚಾರ್ಯ ನೇತೃತ್ವದಲ್ಲಿ ಜಾತ್ರೆ ಜರುಗಲಿದೆ ಎಂದರು. ದೇವಸ್ಥಾನ ಅಭಿವೃದ್ಧಿ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ವೀರಣ್ಣ ಹೆಚ್ ಪಾಟೀಲ್, ಸದಸ್ಯ ಮಲ್ಲಿಕಾಜುನ ಮಾಳಶಟ್ಟಿ, ಬಿ.ಎಸ್.ಎಸ್.ಕೆ ಅಧ್ಯಕ್ಷ ಸುಭಾಷ ಕಲ್ಲೂರ, ಬಸವರಾಜ ಆರ್ಯ, ನಾಗಭೂಷಣ ಸಂಗಮಕರ್,

ಲಕ್ಷ್ಮೀಕಾಂತ ಹಿಂದೂಡ್ಡಿ, ಉಮೇಶ ಜಂಬಗಿ, ಸುರೇಶ ಘಾಂಗ್ರೆ ಸೇರಿದಂತೆ ಇತರರು ಜಾತ್ರೆ ಕುರಿತು ಮಾಹಿತಿ ನೀಡಿದರು. ತಹಸೀಲ್ದಾರ ಅಂಜುಮ್ ತಬಸುಮ್, ಡಿ.ವಾಯ್.ಎಸ್.ಪಿ ಜೆ.ಎಸ್ ನ್ಯಾಮೇಗೌಡರ್, ಸಿಪಿಐ ಗುರುಲಿಂಗಪ್ಪಗೌಡ ಪಾಟೀಲ್, ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ, ಉಪಾಧ್ಯಕ್ಷ ಮುಖರಂಜಾ, ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು, ಉದ್ಯಮಿಗಳು, ಜಾತ್ರಾ ಮಹೋತ್ಸವ ಜವಾಬ್ದಾರಿ ಹೊಂದಿರುವ ಭಕ್ತರು ಸೇರಿದಂತೆ ಅನೇಕರಿದ್ದರು.

## ಬಿಜೆಪಿ ಕಾರಣ, ಗ್ಯಾರಂಟಿಯಲ್ಲ: ಜಾರಕಿಹೊಳಿ

ಬದಲಾಗಿ ಪ್ರಿಯಾಂಕ್ ಅವರ ಆಪ್ತ ಎಂದು ಬರೆದಿದ್ದಿದೆ. ಇದೂ ಸಹ ಸಿಐಡಿ ತನಿಖೆಯಿಂದ ಗೊತ್ತಾಗುತ್ತದೆ. ಸಾವಿಗೆ ಯಾರು ಕಾರಣ, ಯಾವ ಬಿಲ್ ಬಾಕಿ ಉಳಿದಿತ್ತು ಮತ್ತು ಸಚಿನ್ ಗುತ್ತಿಗೆದಾರನೋ ಅಥವಾ ಇಲ್ಲವೋ ಎಲ್ಲವೂ ಬಹಿರಂಗವಾಗಲಿದೆ ಎಂದು ಸತೀಶ್ ಜಾರಕಿಹೊಳಿ ಹೇಳಿದರು.

## ಕೇಂದ್ರ ಸಚಿವರ ಭೇಟಿಯಾದ ಸಚಿವ ಪ್ರಿಯಾಂಕ್ ಖರ್ಗೆ

ಕುಡಿಯುವ ನೀರು ಒದಗಿಸುವುದು ಸವಾಲಾಗಿ ಪರಿಣಮಿಸಿದೆ. ಸಮಗ್ರ ಅಧ್ಯಯನ ಮಾಡಲಾಗಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಮೂಲಕ ಜನರಿಗೆ ಕುಡಿಯುವ ನೀರು ಒದಗಿಸುವುದು ಸೂಕ್ತ ಎಂದು ಮನಗಂಡು ಈ ಯೋಜನೆಯ ಕುರಿತು ಯೋಚಿಸಲಾಗಿದೆ ಎಂದು ಪ್ರಿಯಾಂಕ್ ಖರ್ಗೆ ಸಚಿವರಿಗೆ ವಿವರಿಸಿದರು.

ಅಂದಾಜು  7,200 ಕೋಟಿ ವೆಚ್ಚದ ಈ ಯೋಜನೆಯ ಮೂಲಕ ಕುಡಿಯುವ ನೀರು ಒದಗಿಸುವುದರ ಜೊತೆಗೆ ಈ ಎರಡೂ ಜಿಲ್ಲೆಗಳ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ದಿಗೆ ಸಹಕಾರಿಯಾಗಲಿದೆ. ಹಾಗಾಗಿ, ಈ ಯೋಜನೆಯ ಜಾರಿಗೆ ತಮ್ಮ ಸಹಕಾರ ಹಾಗೂ ಸಲಹೆಗಳು ಅಗತ್ಯವಾಗಿದ್ದು ಜಲಜೀವನ ಕಾರ್ಯಕ್ರಮದ  ಮೂಲಕ ಗುರಿ ಸಾಧಿಸುವತ್ತ ನಾವು ಮುನ್ನಡೆಯಲಿದ್ದೇವೆ ಹಾಗೂ ಗ್ರಾಮೀಣ ಭಾಗದ ಜನರ ಜೀವನ ಮಟ್ಟ ಸುಧಾರಣೆಗೆ ದಿಟ್ಟ ಕ್ರಮ ವಹಿಸಲಾಗುವುದು ಎಂದು  ಹೇಳಿದರು.

ಈ ಸಂದರ್ಭದಲ್ಲಿ ಕೇಂದ್ರ ಜಲಶಕ್ತಿ ರಾಜ್ಯ ಸಚಿವರಾದ ವಿ. ಸೋಮಣ್ಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರವೇಜ್, ಗ್ರಾಮೀಣ ನೀರು ಸರಬರಾಜು ಇಲಾಖೆಯ ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್ ಹಾಗೂ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

## ಬೀದರ ಕಮಲನಗರ ಹೆದ್ದಾರಿ ಕಳಪೆ

### ಕಾಮಗಾರಿಯಿಂದ ಹೆಚ್ಚುತ್ತಿವೆ ಅಪಘಾತಗಳು



ಮಲ್ಲಮ್ಮ ನುಡಿ ವಾರ್ತೆ
(ಪರಮೇಶ ರಾಂಪುರೆ)

ಕಮಲನಗರ:ಜ.7:ರಾಷ್ಟ್ರೀಯ ಹೆದ್ದಾರಿ 50 ಬೀದರ ಕಮಲನಗರ ರಸ್ತೆ ಸಂಪೂರ್ಣ ಕಳಪೆಯಾಗಿದೆ ಇದರಿಂದ ಅಪಘಾತ ಹೆಚ್ಚಾಗುತ್ತಿವೆ ಎಂದು ತಾಲೂಕಿನ ಡಿಗ್ಗಿ ಗ್ರಾಮಸ್ಥರು ತಮ್ಮ ಊರಿಗೆ ಪರಿಶೀಲನೆಗೆ ಬಂದ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ ಜಾರಿಕಿಹೋಳಿ ಅವರಿಗೆ ಮನವಿ ಪತ್ರ ಕೊಟ್ಟು ತಮ್ಮ ಅಳಲನ್ನು ಹೇಳಿದರು.

ಶಾಸಕರಾದ ಪ್ರಭು ಚವ್ಹಾಣ ಅವರು ಈ ಸಂದರ್ಭದಲ್ಲಿ ಮಾತನಾಡಿ, ಸರ್ ನಾನು ವಿಧಾನ ಸೌದೆಯಲ್ಲಿ ಪ್ರಸ್ತಾಪಿಸಿದಂತೆ ಇಲ್ಲಿ ರಸ್ತೆ ಸಮಸ್ಯೆಯಿಂದ ಜನರು ತಮ್ಮ ಪ್ರಾಣವನ್ನು ಕಳೆದುಕೊಂಡ ಘಟನೆಗಳು ನಡೆಯುತ್ತಿವೆ. ಸಾವಿರಾರು ಜನ ಗಾಯ ಗೊಂಡಿದ್ದಾರೆ, ತಾವುಗಳು ಇದ್ದನುಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಸಚಿವರಿಗೆ ಮನವರಿಕೆ ಮಾಡಿದರು.

ಕಮಲನಗರ ತಾಲೂಕಿಗೆ ಭೇಟಿ ನೀಡಿ ಮಹಾರಾಷ್ಟ್ರದ ಗಡಿ ವರೆಗೆ ಸಂಚರಿಸಿ ನಂತರ ಕಮಲನಗರ, ಡಿಗ್ಗಿ, ಹೊಳಸಮುದ್ರ, ಸಾವಳಿ, ಸಂಗಮ ಗ್ರಾಮಕ್ಕೆ ಭೇಟಿ ನೀಡಿ ಜನ ಸಾಮಾನ್ಯರ ಕಷ್ಟಗಳನ್ನು ಸಚಿವರು ಖುದ್ದಾಗಿ ಕೇಳಿ ಇದಕ್ಕೆ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು.

## ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಆಯ್ಕೆ ಸಮಿತಿ ರಚನೆ ಮಾಡಿ ಸರ್ಕಾರ ಆದೇಶ

ಮಲ್ಲಮ ನುಡಿ ವಾರ್ತೆ
ಬೆಂಗಳೂರು:ಜ.7:ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ರಾಜ್ಯಮಟ್ಟದಲ್ಲಿ ಆಯ್ಕೆಸಮಿತಿಯನ್ನು ಸರ್ಕಾರ ರಚನೆ ಮಾಡಿ ಆದೇಶ ಹೊರಡಿಸಿದೆ.

ಗ್ರಾಮೀಣಭಾಗದಪತ್ರಕರ್ತರುಗಳು ವೃತ್ತಿಪರವಾದ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಆಯಾ ಜಿಲ್ಲೆಯೊಳಗೆ ಉಚಿತವಾಗಿ ಸಂಚರಿಸಲು ಬಸ್ ಪಾಸ್ ನೀಡಲು ಸರ್ಕಾರ ಉದ್ದೇಶಿಸಿದೆ.

ದಾವಣಗೆರೆಯಲ್ಲಿ ?.3ರಂದು ನಡೆದಿದ್ದ 38ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲೂಣಟಿಜಜಜಿಟಿಜಜಜೆ) ಹಕ್ಕೋತ್ತಾಯಕ್ಕೆ ಸ್ಪಂಧಿಸಿದ್ದ ಮುಖ್ಯಮಂತ್ರಿಸಿದ್ದರಾಮಯ್ಯ ಅವರು ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ನೀಡುವುದಾಗಿ ಭರವಸೆ ನೀಡಿದ್ದು, ಅಂತೆಯೇ ಬಜೆಟ್‌ನಲ್ಲಿಯೂ ?ಷಿಸಿದ್ದರು.

ತುಮಕೂರಿನಲ್ಲಿ ಜ.18 ಮತ್ತು 19 ರಂದು ನಡೆಯಲಿರುವ 39ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನಕ್ಕೆ ಮೊದಲು ಬಸ್ ಪಾಸ್ ನೀಡಲು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಈ ಸಂಬಂಧ ರಾಜ್ಯ ಮಟ್ಟದ ಆಯ್ಕೆ ಸಮಿತಿ ರಚನೆ ಮಾಡಿರುವುದನ್ನು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಸ್ವಾಗತಿಸಿದೆ. ಗ್ರಾಮೀಣ ಬಸ್ ಪಾಸ್ ಜಾರಿಗೆ ನೀಡಲು ಕ್ರಮ ಕೈಗೊಂಡ

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮತ್ತು ವಾರ್ತಾ ಇಲಾಖೆ ಆಯುಕ್ತ ಹೇಮಂತ ನಿಂಬಾಳ್ಕರ್ ಅವರನ್ನು ಅಭಿನಂದಿಸಿದೆ.

ಆಯ್ಕೆ ಸಮಿತಿಗೆ ನೇಮಕ:

ಗ್ರಾಮೀಣ ಪತ್ರಕರ್ತರಿಗೆ ಉಚಿತವಾಗಿ ಬಸ್ ಪಾಸ್ ನೀಡಲು ರಚಿಸಲಾಗಿರುವ ಆಯ್ಕೆ ಸಮಿತಿಗೆ ವಾರ್ತಾ ಇಲಾಖೆ ಆಯುಕ್ತರು ಅಧ್ಯಕ್ಷರಾಗಿದ್ದು ಮತ್ತು ಜಂಟಿ ನಿರ್ದೇಶಕರು ಸದಸ್ಯರಾಗಿ ಹಾಗೂ ವಾರ್ತಾ ಇಲಾಖೆ ಉಪ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಸದಸ್ಯರುಗಳಾಗಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ್, ಹಿರಿಯ ಪತ್ರಕರ್ತರಾದ ಎಂ.ಚಂದ್ರಶೇಖರ್, ಫೋ–ಟೋ ಜರ್ನಲಿಸ್ಟ್ ಮೋಹನ್ ಕುಮಾರ್, ಕೋಲಾರದ ವಾಸ್ತವ ಕರ್ನಾಟಕ ಪತ್ರಿಕೆಯ ಎಚ್.ಎಲ್.ಸುರೇಶ್, ಗಂಗಾವತಿಯ ವಿಜಯ ಕರ್ನಾಟಕ ಸ್ಥಾನಿಕ ಸಂಪಾದಕ ಗಂಗಾಧರ ಬಂಡಿಹಾಳ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಕೆಯುಡಬ್ಲೂಜೆ ಅಭಿನಂದನೆ:

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ಸರ್ಕಾರ ರಚನೆ ಮಾಡಿರುವ ರಾಜ್ಯ ಮಟ್ಟದ ಆಯ್ಕೆ ಸಮಿತಿಗೆ ನೇಮಕಗೊಂಡಿರುವ ಸದಸ್ಯರುಗಳಿಗೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಅಭಿನಂದಿಸಿದೆ.

## ಆಟೋಟಗಳಿಗೆ ಸಮಯ ಮೀಸಲಿಡಿ



ಮಲ್ಲಮ್ಮ ನುಡಿ ವಾರ್ತೆ
ಎಂ. ರಫೀಕ್ ಪಟೇಲ್

ಯಾದಗಿರಿ:ಜ.7: ಇಂದಿನ ಒತ್ತಡ ಜೀವನದಲ್ಲಿ ಮನುಷ್ಯ ಮಾನಸಿಕ ಖಿನ್ನತೆಗೆ ಹೆಚ್ಚು ಒಳಗಾಗುತ್ತಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಆತಂಕ ವ್ಯಕ್ತಪಡಿಸಿದರು.

ನಗರದಲ್ಲಿ ಆರ್‌ಟಿ.ಓ ಬ್ಯಾಡ್ಮಿಂಟನ್ ಗ್ರೂಪ್ ಮತ್ತು ಎನ್ ಸಿಪಿ ಸ್ಪೋರ್ಟ್ಸ್ ಅಕಾಡೆಮಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಡಬಲ್ಸ್ ಬ್ಯಾಡ್ಮಿಂಟನ್ ಟೂರ್ನಾಮೆಂಟ್‌ನಲ್ಲಿ ಗೆಲುವು ಸಾಧಿಸಿದ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ದಿನದ ಒಂದೆರಡು ಗಂಟೆಗಳಷ್ಟು ನಾವು ಕ್ರೀಡೆಗಳಿಗೆ ಸಮಯ ಮೀಸಲಿಡುವುದು ಇಂದಿನ ದಿನಗಳಲ್ಲಿ ಅವಶ್ಯಕವಾಗಿದೆ ಎಂದರು.

ವಿ.ಬಿಆರ್ ಮುದ್ನಾಳ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಿಂದ ಕೊಡಮಾಡುವ 11100 ರೂ. ಮೊತ್ತದ ಮೊದಲ ಬಹುಮಾನ ಹಾಗೂ ಟ್ರೋಫಿಯನ್ನು ಕ್ರೀಡಾಳುಗಳಾದ ಸಾಯಬಣ್ಣ ಮತ್ತು ಮಿಥಿಲ್ ಕುಮಾರಗೆ ವಿತರಸಲಾಯಿತು.

ಕ್ರಮವಾಗಿ ಬಸವರಾಜ ಗುಂದನೂರ ನೀಡಿದ 5100 ರೂ.ಎರಡನೇ ಬಹುಮಾನವನ್ನು ಸಂತೋಷ ಮತ್ತು ವೆಂಕಟೇಶ

ಮತ್ತು ಮಲ್ಲಿಕಾರ್ಜುನ ಕಟಿ–ಕಟಿ ಹೆಡಗಿಮದ್ರಾ ಅವರ ಮೂರನೇ ಬಹುಮಾನವನ್ನು ಸತೀಶ ಶಹಾಪೂರಕರ ಮತ್ತು ಗೌತಮಗೆ ನೀಡಲಾಯಿತು.

ಅಲ್ಲದೆ ತಂಡದ ಎಲ್ಲ ಸದಸ್ಯರಿಗೆ ಅಕಾಡೆಮಿಯಿಂದ ಟ್ರೋಫಿ ಮತ್ತು ಮೇಡಲ್‌ಗಳನ್ನು ನೀಡಿ ಗೌರವಿಸಲಾಯಿತು.

ಪ್ರಸಾದ ಯಾರಲಗಡ್ಡ, ಶಿವರಾಜ ಸಾಹುಕಾರ, ಅರುಣಕುಮಾರ ದಾಸನಕೇರಿ, ನಾಗು ಲದ್ದಿ

ಸಾಯಬಣ್ಣ, ಮಿಥಿಲ್, ಪವನಕುಮಾರ, ಉಮೇಶ, ವಿಶ್ವನಾಥ ಶೆಟ್ಟಿ ಸಾಹುಕಾರ, ಅಮೃತ, ಪ್ರಕಾಶ ಮಹ್ಮದ ಗಫೂರ ಇದ್ದರು.

## ಬಡವರಿಗೆ ಶಕ್ತಿ ತುಂಬಿದ ಗ್ಯಾರಂಟಿ ಯೋಜನೆ : ಪಾಟೀಲ



ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ : ಜ 07 : ಸರಕಾರದ ಮಹಾತ್ವಾಕಾಂಕ್ಷಿ 5 ಗ್ಯಾರಂಟಿ ಯೋಜನೆಗಳು ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ ಹೇಳಿದರು.

ಜಿಲ್ಲಾಪಂಚಾಯತ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸರಕಾರ ಕೆಳಹಂತದಲ್ಲಿ ಇದ್ದವರನ್ನು ಮೇಲೆತ್ತಿದಾಗ ಮಾತ್ರ ದೇಶ ಅಭಿವೃದ್ದಿ ಹೊಂದಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಸರಕಾರ ಬಡವರಿಗೆ ಶಕ್ತಿ ತುಂಬುವ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಯೋಜನೆಗಳ ಸಮರ್ಪಕ ಅನುಷ್ಠಾನದ ಜವಾಬ್ದಾರಿ ಪ್ರಾಧಿಕಾರದ ಮೇಲೆ ಇದ್ದು, ಸರಕಾರದ ಕನಸು ನನಸು ಮಾಡುವ ಕಾರ್ಯ ಮಾಡಬೇಕಿದೆ ಎಂದರು.

ಗ್ಯಾರಂಟಿಯೋಜನೆಗಳಮೂಲಕ ಯಾರ ಮಧ್ಯಸ್ಥಿಕೆ ಇಲ್ಲದೇ ನೇರವಾಗಿ ಫಲಾನುಭವಿಗಳಿಗೆ ಮುಟ್ಟಿಸುವ ಕೆಲಸ ಸರಕಾರ ಮಾಡುತ್ತಿದೆ. ಈ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಜಿಲ್ಲೆಯಲ್ಲಿ ಈ ಐದು ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕಾರ್ಯವಾಗಬೇಕಿದೆ. ಈ ನಿಟ್ಟಿನಲ್ಲಿ ಆಯಾ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ ಬಹಳ ಮುಖ್ಯವಾಗಿದೆ. ಪ್ರತಿ ತಿಂಗಳು ಎರಡು ಬಾರಿಯಾದರೂ ಸಭೆ ನಡೆಸಬೇಕು. ಜಿಲ್ಲಾ ಮತ್ತು ತಾಲೂಕಾ ಮಟ್ಟದ ಸಮಿತಿ ಜವಾಬ್ದಾರಿಯಿಂದ ಕೆಲಸ ಮಾಡಿದಲ್ಲಿ ಯೋಜನೆ ಶೇ.100 ರಷ್ಟು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಅಭಿವೃದ್ದಿ ಹಾಗೂ ಆರ್ಥಿಕ ದೃಷ್ಠಿಯಿಂದ ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಶಕ್ತಿ ಯೋಜನಯಡಿ ಜಿಲ್ಲೆಯಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು 10.34 ಲಕ್ಷ ಜನ ಮಹಿಳಾ ಪ್ರಯಾಣಿಕರು ಉಚಿತ ಪ್ರಯಾಣದ ಸೌಲಭ್ಯ ಪಡೆದಿದ್ದಾರೆ. ಇದರಿಂದ 321.84 ಕೋಟಿ ರೂ.ಗಳ ಆದಾಯ ಸಂಗ್ರವಾಗಿದ್ದು, ಜಿಲ್ಲೆಯಲ್ಲಿ ಪ್ರತಿದಿನ ಪ್ರಯಾಣಿಸುವ ಸಂಖ್ಯೆ ಸರಾಸರಿ 3.4 ಲಕ್ಷ ಇದೆ. ಒಟ್ಟು ಪ್ರಯಾಣಿಕರಲ್ಲಿ ಶೇ.62 ರಷ್ಟು ಮಹಿಳಾ ಪ್ರಯಾಣಿಕರು ಇದ್ದಾರೆ. ಪ್ರತಿದಿನ ಸರಾಸರಿ 1.6 ಕೋಟಿ ರೂ.ಗಳನ್ನು ಆದಾಯ ಗಳಿಸುತ್ತಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ನಿತೀಹ ಹೆಗಡೆ ಸಭೆ ತಿಳಿಸಿದಾಗ ಜಿಲ್ಲಾ ಪ್ರಾಧಿಕಾರದ ಸದಸ್ಯರು ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಬಸ್‌ಗಳನ್ನು ಬಿಡುವ ವ್ಯವಸ್ಥೆ ಮಾಡಿದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ನಗರ ಪ್ರದೇಶಕ್ಕೆ ಬರುವವರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಗೃಹಲಕ್ಷ್ಮೀ ಯೋಜನೆಯಡಿ 4.15 ಲಕ್ಷ ಫಲಾನುಭವಿಗಳು ನೇರವಾಗಿ ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಜಿಲ್ಲೆಯಲ್ಲಿ ಶೇ.94.81 ರಷ್ಟು ಪ್ರಗತಿ ಸಾಧಿಸಲಾಗಿದೆ. ಪ್ರತಿ ತಿಂಗಳು ಜಿಲ್ಲೆಯ ಫಲಾನುಭವಿಗಳಿಗೆ 82.45 ಕೋಟಿ ರೂ.ಗಳನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಆಗುತ್ತಿರುವುದಾಗಿ ಮಹಿಳಾ ಮತ್ತು ಮಕ್ಕಳ ಅಬಿವೃದ್ದಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ ಸಭೆಗೆ ತಿಳಿಸಿದರು. ಗೃಹಜ್ಯೋತಿ ಯೋಜನೆಯಡಿ 419904 ಜನ ನೋಂದಣಿ ಮಾಡಿಕೊಂಡಿದ್ದು, 200 ಯುನಿಟ್‌ವರೆಗಿನ ಉಚಿತ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ಶೇ.98.13 ರಷ್ಟು ಯೋಜನೆ ಅನುಷ್ಠಾನವಾಗಿದೆ ಎಂದು ಬಾಗಲಕೋಟೆ ಹೆಸ್ಕಾಂ ಅಧಿಕಾರಿಗಳು ಸಭೆಗೆ ತಿಳಿಸಿದರು.

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ನೀಡುತ್ತಿರುವ 5 ಕೆಜಿ ಅಕ್ಕಿ ಬದಲಿಗೆ ಪ್ರತಿ ಕೆಜಿಗೆ 34 ರಂತೆ ಒಟ್ಟು 170 ರಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮೆ ಮಾಡಲಾಗುತ್ತಿದ್ದು, ಜುಲೈ–2023 ರಿಂದ ಇಲ್ಲಿಯವರೆಗೆ 374756 ಪಡಿತರ ಚೀಟಿಗಳ 13,14,116 ಫಲಾನುಭವಿಗಳಿಗೆ ಒಟ್ಟು 229.73 ಕೋಟಿ ರೂ.ಗಳ ಜಮೆ ಮಾಡಿ, ಶೇ.96.49 ರಷ್ಟು ಪ್ರಗತಿ ಸಾಧಿಸಿದೆ ಎಂದು ಆಹಾರ ಇಲಾಖೆಯ ಜಂಟಿ ನಿರ್ದೇಶಕ

ಶ್ರೀಶೈಲ ಕಂಕಣವಾಡಿ ಸಭೆಗೆ ತಿಳಿಸಿದರು. ಯುವನಿಧಿ ಯೋಜನೆಯಡಿ ಪದವೀಧರರು 7637, ಡಿಪ್ಲೋಮಾ ಪದವೀಧದರು 92 ಸೇರಿ ಒಟ್ಟು 7729 ಫಲಾನುಭವಿಗಳು ಲಾಭ ಪಡೆಯುತ್ತಿದ್ದಾರೆಂದು ಜಿಲ್ಲಾ ಕೌಶಲ್ಯ ಅಧಿಕಾರಿ ಹಿರೇಮಠ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಡಾ.ಎಸ್.ಎಚ್.ತೆಕ್ಕನ್ನವರ, ಉಪಾಧ್ಯಕ್ಷರಾದ ಶಂಕರಪ್ಪ ನೇಗಲಿ, ಗುರುಪ್ರಸಾದಪ್ಪ ಜವಳಿ, ರಫೀಕ್ ಬೈರಕದಾರ್, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿ.ಪಂ ಸಿಇಓ ಶಶಿಧರ ಕು–ರೇರ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ ಸೇರಿದಂತೆ ಪ್ರಾಧಿಕಾರದ ಸದಸ್ಯರು, ಯೋಜನಾ ಅನುಷ್ಠಾನದ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಜಾತಿ, ಧರ್ಮ ಮೀರಿದ ಸಂತ ಸಿದ್ದೇಶ್ವರ ಸ್ವಾಮೀಜಿ : ಸಿದ್ದು ಆರಬೋಳ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ : ಪ್ರವಚನ ಮೂಲಕ ವಿಶ್ವಕ್ಕೆ ಜ್ಞಾನ ಪ್ರಸಾರ ಮಾಡಿ ಶತಮಾನದ ಸಂತರೆನಿಸಿಕೊಂಡ, ನಡೆದಾಡುವ ದೇವರು, ಸರಳತೆಯ ಸಾಕಾರಮೂರ್ತಿ, ನುಡಿದಂತೆ ನಡೆದ ಶರಣ ವಿಜಯಪುರದ ಜ್ಞಾನಯೋಗಾಶ್ರಮದ ಪರಮಪೂಜ್ಯ ಸಿದ್ದೇಶ್ವರ ಸ್ವಾಮಿಗಳು

ಮನುಕುಲಕ್ಕೆ ಮಾದರಿಯಾಗಿ ನಿಲ್ಲುತ್ತಾರೆ ಎಂದು ನಗರ ಪ್ರಾಧಿಕಾರಿ ಯೋಜನಾ ಅಧ್ಯಕ್ಷರಾದ ಸಿದ್ದಣ್ಣ ಸಾಹು ಆರಬೋಳ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಹಳಿಸಗರ ಬಡಾವಣೆಯಲ್ಲಿನ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ನೂತನ ಸಂಸ್ಥೆಯಾದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆ ಉದ್ಘಾಟಿಸಿ ಮಾತನಾಡಿದ ಅವರು, ಸಿದ್ದೇಶ್ವರ ಸ್ವಾಮಿಗಳು ಪ್ರಚಾರದಿಂದ ಬಲು ದೂರ ಇದ್ದುಕೊಂಡು ಸಮಾಜ ತಿದ್ದುವ ಕೆಲಸ ಮಾಡುತ್ತಿದ್ದರು, ಇಂತಹ ಮಹಾನ್ ವ್ಯಕ್ತಿಗಳ ಜೀವನ ನಮಗೆ ಆದರ್ಶವಾಗಬೇಕೆಂದು ಅವರು ನುಡಿದರು.

ನಂತರ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷರಾದ ಮಲ್ಲಿಕಾರ್ಜುನ ಮಾತನಾಡಿದ ಅವರು, ಸಿದ್ದೇಶ್ವರ ಸ್ವಾಮಿಗಳ ಜೀವನ ವಿವಾದರಹಿತ, ರಾಜಕೀಯ ಅಂತರ ಕಾಯ್ದುಕೊಂಡು ಯಾರನ್ನು ಓಲೈಸದೇ ಸದಾ ಸಮಾಜಮುಖಿ ವ್ಯಕ್ತಿತ್ವವನ್ನು ಹೊಂದಿದ್ದವರಾಗಿದ್ದು, ಇಂತಹ ಸ್ವಾಮಿಗಳ ಹೆಸರಲ್ಲಿ ನೂತನ ಸಂಸ್ಥೆಯನ್ನು ಪ್ರಾರಂಭಿಸಿದ್ದ ಶೈಲಾ ಪ್ರದೀಪ ಅಣಬಿ ಅವರ ಕಾರ್ಯ ಶ್ಲಾಘನೀಯ ಎಂದು ನುಡಿದರು.

ಈ ಸಂದರ್ಭದಲ್ಲಿ ಶಾಲೆಯ 550 ಕ್ಕೂ ವಿದ್ಯಾರ್ಥಿಗಳಿಗೆ ನೋಟ್ ಬುಕ್‌ನ್ನು ಸಂಸ್ಥೆ ವತಿಯಿಂದ ಹಂಚಲಾಯಿತು. ಇದೇ ವೇಳೆ ನಗರಸಭೆ ಅಧ್ಯಕ್ಷರಾದ ಲಿಯಾಖತ ಪಾಷಾ, ನಗರಸಭೆ ಸದಸ್ಯರಾದ ರಾಧಿಕಾ ಶಾಂತಪ್ಪ ಗುತೆ-ೄದಾರ ಹಳಿಸಗರ, ಬಸವರಾಜ ಚೆನ್ನೂರು, ಸತೀಶ ಪಂಚಬಾವಿ, ಅಹ್ಮದ ದಾದ್ದೂಲ್ಲಾ ಪತ್ರಕರ್ತರಾದ ಬಸವರಾಜ ಕರೇಗಾರ, ಮಲ್ಲಿಕಾರ್ಜುನ ಮಳಿಕೇರಿ, ಮರೆಪ್ಪ ಮುಂಡಾಸ, ಮಾನಪ್ಪ.ಸಿ.ಹಡಪದ, ಸುಭಾಷ ಹೋತಪೇಟ, ಸುನೀಲ ಹೊಸ್ಮನಿ ಗೋಗಿ, ಶಿವು ಶಿರವಾಳ, ಭೀಮನಗೌಡ ಎನ್ ಪೋಲಿಸ್ ಪಾಟೀಲ, ಮಹಮ್ಮದ ಇಸ್ಮಾಯಿಲ್ ತಿಮ್ಮಾಪುರಿ, ಸಿದ್ದು ಮುಂಡಾಸ, ಶಾಲೆಯ ಮುಖ್ಯಗುರುಗಳಾದ ರಾಜಣ್ಣ.ಎಸ್.ಗೊಟೂರು ಹಾಗೂ ಸಿಬ್ಬಂದಿ ವರ್ಗ ಮತ್ತು ಸದಸ್ಯರಾದ ಪ್ರದೀಪ ಅಣಬಿ, ಸುನಿಲ್ ಅಣಬಿ, ಭೋಜಪ್ಪ ಮುಂಡಾಸ, ಅಂಬರೀಶ್ ಶಿರವಾಳ್, ಸಂಗಮೇಶ ಬೇವಿನಹಳ್ಳಿ, ದೇವು, ಸುರೇಶ, ಶರಣು ದಿಗ್ಗಿ, ಪ್ರಕಾಶ ದಿಗ್ಗಿ, ಗಗನ ಅಣಬಿ, ಗೌತಮ ಅಣಬಿ ಹಾಗೂ ಶಾಲಾ ಮುದ್ದು ಮಕ್ಕಳ ಹಾಜರಿದ್ದರು. ಹಾಸ್ಯಕಲಾವಿದ ಸುನೀಲ ಶೀರ್ಣಿ ನಿರೂಪಿಸಿ ವಿವಿಧ ಮಿಮಿಕ್ರಿ ಕಲಾವಿದರ ಅನುಕರಣೆ ಮೂಲಕ ರಂಜಿಸಿದರು.

## ವಳಖಿಂಡಿ; ಪಿಕೆಪಿಎಸ್ ಚುನಾವಣೆ ಫಲಿತಾಂಶ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ತಾಲೂಕಿನವಳಖಿಂಡಿ ಗ್ರಾಮದ ಪಿಕೆಪಿಎಸ್ ಆಡಳಿತ ಮಂಡಳಿಯಚುನಾವಣೆರವಿವಾರ ಬೆಳಿಗ್ಗೆ 9 ಘಂಟೆಯಿಂದ 4 ಘಂಟೆಯ ವರೆಗೆ ಮತದಾನ ನಡೆಯಿತ್ತು. ಬಳಿಕ ಸಂಜೆ ಮತ ಎಣಿಕೆ ಕಾರ್ಯ ನಂತರ ಫಲಿತಾಂಶವನ್ನುಚುನಾವಣಾಧಿಕಾರಿ ಜ್ಯೋತಿ ರುಗಾನ್ ಘೋಷಣೆ ಮಾಡಿದರು. ಸಾಮಾನ್ಯಸ್ಥಾನ:- ರಾಮಚಂದ್ರ ಸುಭಾಷಚಂದ್ರ, ಬಸವರಾಜಮಚೇಂದ್ರ,ಗುಣವಂತ ಚಂದ್ರಪ್ಪ, ಜಗನಾಥ ತುಕ್ಕಾರೆಡ್ಡಿ, ತೀರ್ಥಯ್ಯಾ ಬಸ್ತಿರ್ಥಯ್ಯಾ, ಮಹಿಳಾ ಸ್ಥಾನ:- ಭೋಟಿಬೀ ದಸ್ತಗೀರ್, ಇಂದುಬಾಯಿ ನಾಗಶೆಟ್ಟಿ, ಪರಿಶಿಷ್ಟ ಜಾತಿ ಸ್ಥಾನ:- ಈಶ್ವರ ಹಣಮಂತ, ಪರಿಶಿಷ್ಟಪಂಗಡ ಸ್ಥಾನ:-ರಾಜಪ್ಪ ಗುಂಡಪ್ಪ,ಹಿಂದುಳಿದ ವರ್ಗ(ಎ) ಸ್ಥಾನ:- ಚಂದಪಾಶ ವಜೀಮ ಸಾಬ್, ಹಿಂದುಳಿದ ವರ್ಗ(ಬಿ) ಶಾಂತಕುಮಾರ್ ಬಸವರಾಜ, ಸಾಲಗರರಲ್ಲದ ಸ್ಥಾನ:- ಈರಪ್ಪ ಪುಂಡಲೀಕ ಆಯ್ಕೆಯಾಗಿದ್ದರೆ ಎಂದು ಚುನಾವಣಾಧಿಕಾರಿ ಜ್ಯೋತಿ ರುಗಾನ್ ತಿಳಿಸಿದ್ದಾರೆ.

**IN THE COURT OF THE SENIOR CIVIL JUDGE & J.M.F.C, AT BASAVAKALYAN**

**Crl. Misc No: 733/2024**

**Petitioners: P-1: Dhanaraj, P-2: Hanumanth,P3: Lakshmi, P4: Basavaraj,P5: Shaila Bai, P6: Ambika, P7: Parameshwar, P8: Tukaram, P9: Anushabai,P10:Pusha, P11: Ambadas, P12: Renuka P13: Devaraj, P14: Sarika All are R/o Nirgudi Tq.Basavakalyan Dist.Bidar.**

-- V/S --

**Respondent: The Tahasildar, Basvakalyan.**

**Claim:-Issue of Death Certificate of the Grand Father of petitioners.**

**Petition Under Section 13 (3) Birth & Death Registration Act,1969**

**PAPER PUBLICATION**

This is to inform to the public at large, the **Grand Father** of the petitioner by name **" Shankar S/o Tukkappa Rudre "** who was died on **15-05-1984**, in his house at **Village Nirgudi** Tq.Basavakalyan Dist.Bidar leaving behind the petitioner as her son.

The said P1: Dhanaraj and 13 others, all are R/o.Nirgudi Tq.Basavakalyan Dist Bidar has filed the above case before the Hon'ble Senior Civil Judge Court at Basavakalyan for issuing direction to the Respondent for issue of Death Certificate. If anybody got objection for the same, they are hereby requested to come and appear before the Hon'ble court on or before **19-02-2025 at 11.00 A.M.**

Date: 16-12-2024.

**// By Order of the Court //**
Sd/-
**CHIEF MINISTERIAL OFFICER,**
**Senior Civil Judge & JMFC Court,Basavakalyan.**

# ಏಳನೇಯ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ವಿಜ್ಞಾನ ಲೋಕ




ಕಲಬುರಗಿ,ಜ.7-ಸೇಡಂನಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸುವರ್ಣ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಕಲಬುರಗಿ-ಸೇಡಂ ರಾಜ್ಯ ಹೆದ್ದಾರಿಯಲ್ಲಿ ಬರುವ ಬೀರನ ಹಳ್ಳಿಗೆ ಹೋಗುವ ರಸ್ತೆಯ ಇಕ್ಕೆಲದ 240 ಎಕರೆ ಭೂಪ್ರದೇಶದಲ್ಲಿ ಜ.29 ರಿಂದ ಫೆ.6 ರವರೆಗೆ ಏಳನೇಯ ಭಾರತೀಯ ಸಂಸ್ಕೃತಿ ಉತ್ಸವ ಆಯೋಜಿಸುತ್ತಿದ್ದು, ಈ ಉತ್ಸವದಲ್ಲಿ ಆಯೋಜಿಸುತ್ತಿರುವ ವಿವಿಧ ಲೋಕಗಳಲ್ಲಿ ವಿಜ್ಞಾನ ಲೋಕವೂ

ಒಂದಾಗಿದೆ. ಈ ಲೋಕದ ಎಲ್ಲಾ ಕಾರ್ಯಕ್ರಮ ಮತ್ತು ವ್ಯವಸ್ಥೆಗಾಗಿ ಗುಲ್ಬರ್ಗ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ.ಬಿ.ಜಿ. ಮೂಲಿಮನಿಯವರಮಾರ್ಗದರ್ಶನದಲ್ಲಿ 16 ಜನರ ಒಂದು ಸಮಿತಿಯನ್ನು ರಚಿಸಲಾಗಿದೆ ಎಂದು ಏಳನೇ ಭಾರತೀಯ ಸಂಸ್ಕೃತಿ ಉತ್ಸವದ ವೈಜ್ಞಾನಿಕ ಸಲಹೆಗಾರರಾದ ಸಿ.ಎನ್.ಲಕ್ಷ್ಮೀನಾರಾಯಣ ಹೆಬ್ಬಾರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವಿಜ್ಞಾನ ನಿಂತ ನೀರಲ್ಲ, ಹರಿಯುತ್ತಿರುವ ಪ್ರವಾಹ. ವಿಜ್ಞಾನ ಕಲಿಕೆಗೆ ಪ್ರೇರಣೆ ಮತ್ತು ಮಕ್ಕಳ ಜ್ಞಾನವರ್ಧನೆಗೆ , ಸೃಜನಶೀಲತೆಗೆ ಸುವರ್ಣ ಅವಕಾಶ ಕಲ್ಪಿಸುವ ವಿಜ್ಞಾನ ಲೋಕವು 6 ಎಕರೆ ಪ್ರದೇಶದಲ್ಲಿ ವ್ಯಾಪಿಸಲಿದೆ. ಇಲ್ಲಿ ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಶನ್ ವತಿಯಿಂದ ಮೂಲಭೂತ ವಿಜ್ಞಾನಕ್ಕೆ ಕುರಿತಂತೆ 400 ಮಾದರಿಗಳನ್ನು

ಪ್ರದರ್ಶಿಸಲಾಗುವುದು. ಈ ಮಾದರಿಗಳ ವಿವರಣೆ ನೀಡಲು ಸೇಡಂ ಸುತ್ತಮುತ್ತಲಿನ ಶಾಲೆಗಳ ಸುಮಾರು 1500 ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು ಅವರಿಗೆ ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಶನ್ ವತಿಯಿಂದ ತರಬೇತಿಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಮೂಲಭೂತ ವಿಜ್ಞಾನದಲ್ಲಿ ಆದ ಆವಿಷ್ಕಾರಕ್ಕೆ, ತಂತ್ರಜ್ಞಾನ ಮತ್ತು ಇಂಜಿನಿರಿಂಗ್ ಅಳವಡಿಸುವುದರ ಮೂಲಕ ತಯಾರಿಸಲಾದ ವಿವಿಧ ಸಾಧನಗಳು, ಯಂತ್ರಗಳು ,ಸಾಮಗ್ರಿಗಳು ನಮ್ಮ ಜೀವನದಲ್ಲಿ ಸಾಕಷ್ಟು ಬಲಾವಣೆಯನ್ನು ತರುವುದಲ್ಲದೇ ಉನ್ನತ ಮಟ್ಟಕ್ಕೆ ಏರಿಸಿವೆ. ಮೂಲಭೂತ ವಿಜ್ಞಾನ ಮತ್ತು ನಾವೀನ್ಯತೆಯ ಮೂಲಕ ಎಲ್ಲಾ ಕ್ಷೇತ್ರಕ್ಕೆ ಅನ್ವಯವಾಗಬಲ್ಲ ಹೊಸ-ಹೊಸ ಗ್ಯಾಡ್ಜೆಟ್ಟುಗಳು ತಯಾರಾಗದ ಹೊರತು ದೇಶದ ಪ್ರಗತಿ ಸಾಧ್ಯವಿಲ್ಲ. ಈ ಹಿನ್ನೆಯಲ್ಲಿ ವಿಜ್ಞಾನ ಕಲಿಕಾ ನಿಲ್ದಾಣ ಎಂಬ ವಿನೂತನ ವಿಭಾಗ ವಿಜ್ಞಾನ ಲೋಕದಲ್ಲಿ ಇರಲಿದೆ. ಇದರಲ್ಲಿ ಮೂಲಭೂತ ವಿಜ್ಞಾನದ 100 ಕಲಿಕಾ ಸಾಮಗ್ರಿಗಳು ಇರುತ್ತವೆ. ಇಲ್ಲಿ ಕಲ್ಯಾಣ ಕರ್ನಾಟಕದ ಸಂಪನ್ಮೂಲ ಶಿಕ್ಷಕರಿಂದ ಮಕ್ಕಳಿಗೆ ವಿಜ್ಞಾನವನ್ನು ಅರ್ಥಪೂರ್ಣವಾಗಿ ಕಲಿಸಲಾಗುವುದು ಹಾಗೂ ವಿಜ್ಞಾನ ಕಲಿಕೆಗೆ ಪ್ರೇರಣೆ ನೀಡಲಾಗುವುದು. ವಿಜ್ಞಾನ ಲೋಕದಲ್ಲಿ ಒಂದು ವೀಡಿಯೋ ಕೋಣೆಯನ್ನು ಅಳವಡಿಸಲಾಗುವುದು. ಅಲ್ಲಿ ವಿಜ್ಞಾನಿಗಳ ಜೀವನ ಚರಿತ್ರೆ, ವಿಜ್ಞಾನ-ತಂತ್ರಜ್ಞಾನದ ಕುರಿತ ವೀಡಿಯೋ ಪ್ರದರ್ಶನ ತೋರಿಸುವುದಲ್ಲದೆ , ಮಕ್ಕಳಿಗೆ ಕುತೂಹಲ ಮೂಡಿಸಿ ಸರಳವಾಗಿ ವಿಜ್ಞಾನ ಕಲಿಸಬಲ್ಲ ದೃಷ್ಟಾಂತ ಉಪನ್ಯಾಸಗಳ ವೀಡಿಯೋಗಳನ್ನೂ ಕೂಡ ಪ್ರದರ್ಶಿಸಲಾಗುವುದು. ಭಾರತ ವಿಕಾಸ ಸಂಗಮದ ವತಿಯಿಂದ ' ಮಹರ್ಷಿ ಕಣಾದನಿಂದ ಕಲಾಂವರಗೆ' ಎಂಬ ಶೀರ್ಷಿಕೆಯಡಿ ನಮ್ಮ ಪರಂಪರೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆಯಲು ಕಾರಣೀಕರ್ತರಾದ ಹಲವಾರು ವಿಜ್ಞಾನಿಗಳ ಚಿತ್ರಸಹಿತ ಪ್ರದರ್ಶನ ಏರ್ಪಡಿಸಲಾಗುತ್ತದೆ. ಡಿಆರ್‌ಡಿಒದ ಮಾಜಿ ಸಂಶೋಧನಾ ವಿಜ್ಞಾನಿ ಮತ್ತು ಹಿರಿಯ ಎರೋಸ್ಪೇಸ್ ಎಂಜಿನಿಯರ್ ಮತ್ತು ಕಾಲಿನ್ಸ್ ಎರೋಸ್ಪೇಸ್ ಏವಿಯೇಷನ್ ಆರ್ಟಿಸ್ಟ್, ಬೆಂಗಳೂರು ಇವರಿಂದ ಭಾರತದಲ್ಲಿ ತಯಾರಾಗುತ್ತಿರುವ ವಿವಿಧ ವಿಮಾನಗಳ 2ಡಿ ಮಾದರಿ ಮತ್ತು ಚಿತ್ರಸಹಿತ ವಿವರಣೆ ಪ್ರದರ್ಶನವಿರಲಿದೆ. ಜಿಲ್ಲಾ ವಿಜ್ಞಾನ ಕೇಂದ್ರ ಕಲಬುರಗಿ, ಇಸ್ರೋ ಬೆಂಗಳೂರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಪರಿಸರ ಶಿಕ್ಷಣ ಕೇಂದ್ರ ಇತ್ಯಾದಿ ಸಂಸ್ಥೆಗಳಿಂದ ಸಂಚಾರಿ ಪ್ರದರ್ಶನ ಏರ್ಪಡಿಸಲು ಆಹ್ವಾನ ನೀಡಲಾಗಿದೆ ಎಂದು ತಿಳಿಸಿದರು.

ವಿಜ್ಞಾನ ಲೋಕದಲ್ಲಿ ಪ್ರತಿದಿನ ವಿಜ್ಞಾನ ಸಂಪನ್ಮೂಲ ವ್ಯಕ್ತಿಗಳಿಂದ/ ವಿಜ್ಞಾನಿಗಳಿಂದ ವಿಜ್ಞಾನ ಕ್ಷೇತ್ರದ ಸಾಧಕರಿಂದ ಬೆಳಿಗ್ಗೆ ಮತ್ತು ಸಂಜೆ ಒಂದು ಗಂಟೆಕಾಲ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದ ವಿಷಯಗಳ ಕುರಿತು ಉಪನ್ಯಾಸ ಮತ್ತು ಸಂವಾದ ಏರ್ಪಡಿಸಲಾಗುತ್ತದೆ. ಅಲ್ಲದೆ ದೇಶದ ಹೆಸರಾಂತ ಕಂಪನಿಗಳಿಂದ ವಿಜ್ಞಾನದ ಕಿಟ್ಟುಗಳನ್ನು , ವಿಜ್ಞಾನ ಕಲಿಕಾ ಸಾಮಗ್ರಿಗಳನ್ನು , ವಿಜ್ಞಾನದ ಆಟಿಕೆಗಳನ್ನು ಮತ್ತು ವಿಜ್ಞಾನ ಪುಸ್ತಕಗಳ ಮಾರಾಟ ಮಳಿಗೆಗಳನ್ನೂ ಹಾಕುವಂತೆ ಆಹ್ವಾನಿಸಲಾಗಿದೆ. ಈ ಲೋಕದ ಉದ್ಘಾಟನೆ ಜ.28ರಂದು ಮಧ್ಯಾನ್ನ 3.00 ಗಂಟೆಗೆ , ಸಮಾರೋಪ ಫೆ.6.ರಂದು ಮಧ್ಯಾನ್ನ 3.00 ಗಂಟೆಗೆ ನಡೆಯಲಿದೆ. ಈ ಭವ್ಯವಾದ ಕಾರ್ಯಕ್ರಮದ ಮೂಲ ಕಲ್ಪನೆಯು ಪರಿಸರ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿ ಇಡುವುದು. ಇದರಲ್ಲಿ ಸರ್ಕಾರಿ ಸಂಸ್ಥೆಗಳು ಸೇರಿದಂತೆ ಇಡೀ ಸಮಾಜವು ಒಟ್ಟುಗೂಡುತ್ತದೆ ಮತ್ತು ಪ್ರಕೃತಿ-ಕೇಂದ್ರಿತ ಅಭಿವೃದ್ಧಿ - ಸುಸ್ಥಿರ ಮಾದರಿಗೆ ಕಾರಣವಾಗುವ ಅಭ್ಯಾಸಗಳನ್ನು ಅಳವಡಿಸಿಕೊಳ್ಳಾಗುತ್ತದೆ. ಈ ಮಾದರಿಯು ಮಾನವರ ಕಲ್ಯಾಣಕ್ಕಾಗಿ ಮಾತ್ರವಲ್ಲದೆ ಎಲ್ಲಾ ಜೀವಿಗಳ ಉಳಿವಿಗೆ ಬದ್ಧವಾಗಿದೆ. ಅಲ್ಲದೇ ಎಲ್ಲರಿಗೂ ಶುದ್ಧ ನೀರು, ಗಾಳಿ ಮತ್ತು ಆಹಾರದ ಲಭ್ಯತೆಯನ್ನು ಪ್ರತಿಪಾದಿಸುವುದೇ ಈ ಉತ್ಸವದ ಉದ್ದೇಶ .ಈ ದಿಸೆಯಲ್ಲಿ ಭಾರತೀಯ ಸಂಸ್ಕೃತಿ ಉತ್ಸವ-7 ಒಂದು ದಾರಿದೀಪವಾಗಬಲ್ಲದು ಎಂದು ಆಶಿಸೋಣ. ಈ ರಾಷ್ಟದ ನಾಗರೀಕರನ್ನು ಪ್ರಕೃತಿ ಕೇಂದ್ರಿತ ಅಭಿವೃದ್ಧಿಯ ಉದಾತ್ತ ದೃಷ್ಟಿಗೆ ತಮ್ಮನ್ನು ಸಮರ್ಪಿಸಿಕೊಳ್ಳಲು ಪ್ರೇರೇಪಿಸುವುದಲ್ಲದೇ ಭಾರತೀಯ ನೀತಿ ಮತ್ತು ಜಾಗತಿಕ ದೃಷ್ಟಿಕೋನ ಎರಡನ್ನೂ ಅಳವಡಿಸಿಕೊಳ್ಳುತ್ತದೆ. 6 ಎಕರೆ ವಿಸ್ತಾರದಲ್ಲಿ ಆಯೋಜಿಸುತ್ತಿರುವ ವಿಜ್ಞಾನ ಲೋಕದ ಒಳಗೆ ಬಂದವರು ಆಶ್ಚರ್ಯಚಕಿತರಾಗುವುದರಲ್ಲಿ ಸಂಶಯವಿಲ್ಲ. ಒಳಗೆ ಬಂದು ಎಲ್ಲವನ್ನೂ ವೀಕ್ಷಿಸಿ , ವಿಜ್ಞಾನ ಲೋಕದ ವಿಸ್ಮಯವನ್ನು ತಿಳಿದು ಧನ್ಯರಾಗುತ್ತಾರೆ ಎಂಬ ನಂಬಿಕೆ ನಮಗಿದೆ ಎಂದರು.

ಸದಾನಂದ ಪೆರ್ಲ, ಪ್ರಭಾಕರ ಜೋಷಿ ಸೇರಿದಂತೆ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಪುರಸಭೆ ಕಾರ್ಯಾಲಯ, ಹುಮನಾಬಾದ**

ಸಂಖ್ಯೆ:ಪುಸಹು/ಆರೋಗ್ಯ/ಸಿಆರ್- /2024-25 ದಿನಾಂಕ:06-01-2025

**ಕೊಟೇಷನ್ ಟೆಂಡರ್ ಪ್ರಕಟಣೆ**

ಹುಮನಾಬಾದ ಪುರಸಭೆಯಲ್ಲಿ ಮಾಹೆ ಜನೇವರೆ 2025ರಲ್ಲಿ ಜರುಗುವ ಶ್ರೀ ವೀರಭದ್ರೇಶ್ವ ಜಾತ್ರೆ ಪ್ರಯುಕ್ತ ಪಟ್ಟಣದಲ್ಲಿ ವಿಶೇಷ ಸ್ವಚ್ಚತೆ ಹಾಗೂ ನೈರ್ಮಲ್ಯ ಕೆಲಸಕ್ಕಾಗಿ ನೈರ್ಮಲಿಕರಣ ಸಲಕರಣೆಗಳು ಹಾಗೂ ಸುರಕ್ಷ ಧರಿಸುಗಳು ದಾಸ್ತಾನು ಮಾಡಿಕೊಳ್ಳಲು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ನೊಂದಾಯಿತ ಮತ್ತು ಅರ್ಹ ಏಜನ್ಸಿ/ಸರಬರಾಜುದಾರರಿಂದ ಐಟಮ್‌ವಾರು ಕೊಟೇಷನ್ ದರ ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಏಜನ್ಸಿಯವರು ನಿಗದಿ ಪಡಿಸಿದ ದಿನಾಂಕದೊಳಗೆ ಸೀಲ್ ಮಾಡಿದ ಲಕೋಟಿಯಲ್ಲಿ ಸಲ್ಲಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಸಲ್ಲಿಸಲು ಕೊನೆ ದಿನ ದಿನಾಂಕ: 13-01-2025. ಸಮಯ 17.30 ಗಂಟೆ.
2. ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕೊನೆ ದಿನ ದಿನಾಂಕ: 15-01-2025 ಸಮಯ 16.00 ಗಂಟೆ.

| ಕ್ರ.ಸಂ. | ಕಾಮಗಾರಿ ಹೆಸರು | ಪರಿಮಾಣ | ಅಂದಾಜು ಮೊತ್ತ | ಇ.ಎಂ.ಡಿ ಮೊತ್ತ | ಅವಧಿ |
|---|---|---|---|---|---|
| 1 | ನೈರ್ಮಲಿಕರಣ ಸಲಕರಣೆಗಳು ಹಾಗೂ ಸುರಕ್ಷ ಧರಿಸುಗಳು | – | 78,700.ರೂ. | 1970 ರೂ. | 7 ದಿವಸ |

**ಷರತ್ತುಗಳು:**
1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಯೊಂದಿಗೆ ಇ.ಎಂ.ಡಿ. ಮೊತ್ತಕ್ಕೆ ಮುಖ್ಯಾಧಿಕಾರಿಗಳು ಪುರಸಭೆ ಹುಮನಾಬಾದ ಹೆಸರಲ್ಲಿ ಡಿ.ಡಿ. ಲಗತ್ತಿಸಿ ಸಲ್ಲಿಸುವುದು.
2. ಟೆಂಡರ್ ಕಡಿಮೆ ದರ ನಮೂದಿಸಿದಲ್ಲಿ ವ್ಯತ್ಯಾಸ ಮೊತ್ತಕ್ಕೆ ಡಿ.ಡಿ.ಯನ್ನು ಟೆಂಡರ್ ಫಾರಂದೊಂದಿಗೆ ಲಗತ್ತಿಸುವುದು.
3. ನಿಗದಿ ಪಡಿಸಿದ ದಿನಾಂಕ ಮತ್ತು ಸಮಯ ಮೀರಿ ಬಂದ ಅರ್ಜಿಗಳನ್ನು ತಿಸ್ಕರಿಸಲಾಗುವುದು.
4. ಯಾವುದೇ ಅಥವಾ ಎಲ್ಲಾ ಟೆಂಡರ್ ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಪುರಸಭೆ ಕಾಯ್ದಿರಿಸಲಾಗಿದೆ.

**ಸಹಿ/-** ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

**ಪುರಸಭೆ ಕಾರ್ಯಾಲಯ, ಹುಮನಾಬಾದ**

ಸಂಖ್ಯೆ:ಪುಸಹು/ಸಿವಿಲ್/ಸಿಆರ್- /2024-25 ದಿನಾಂಕ: 06-01-2025

**ಕೊಟೇಷನ್ ಟೆಂಡರ್ ಪ್ರಕಟಣೆ**

ಹುಮನಾಬಾದ ಪಟ್ಟಣದಲ್ಲಿ ಮಾಹೆ ಜನವರಿ 2025ರಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಅತೀ ವಿಜ್ಞ ಬಣೆಯಿಂದ ಜರುಗಲಿರುವ ಶ್ರೀ ವೀರಭದ್ರೇಶ್ವರ 'ಜಾತ್ರಾ ಮಹೋತ್ಸವಕ್ಕೆ ರಾಜ್ಯ ಹಾಗೂ ನೆರ ರಾಜ್ಯಗಳ ಮೂಲೆ ಮೂಲೆಯಿಂದ ಸಾವಿರಾರು ಭಕ್ತರು ಆಗಮಿಸುವ ಪ್ರಯುಕ್ತ ಭಕ್ತಾಧಿಗಳಿಗೆ ಯಾವುದೇ ತರಹದ ತೊಂದರೆಯಾಗದಂತೆ ಕಾಳಜಿ ವಹಿಸಿ ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಅಳವಡಿಸಲು 90 Wattನ 40 ವಿದ್ಯೂತ ದೀಪಗಳನ್ನು ಖರೀದಿಸಲು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ನೊಂದಾಯಿತ ಮತ್ತು ಅರ್ಹ ಗುತ್ತಿಗೆದಾರರು/ಏಜನ್ಸಿಯವರಿಂದ ವಿವರವಾದ ಕೊಟೇಷನ ದರ ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಗುತ್ತಿಗೆದಾರರು/ಏಜನ್ಸಿಯವರು ನಿಗದಿ ಪಡಿಸಿದ ದಿನಾಂಕದೊಳಗೆ ಸೀಲ್ ಮಾಡಿದ ಲಕೋಟಿಯಲ್ಲಿ ಸಲ್ಲಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಸಲ್ಲಿಸಲು ಕೊನೆ ದಿನ ದಿನಾಂಕ: 13-01-2025. 17.30 ಗಂಟೆ:

2) ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕೊನೆ ದಿನ ದಿನಾಂಕ: 15-01-2025 ಸಮಯ 16.00 ಗಂಟೆ.

| ಕ್ರ.ಸಂ; | ಕಾಮಗಾರಿ ಹೆಸರು | ಅಂದಾಜು ಮೊತ್ತ | ಇ.ಎಂ.ಡಿ. ಮೊತ್ತ | ಅವಧಿ |
|---|---|---|---|---|
| 1 | 90 Wattನ 40 ವಿದ್ಯೂತ ದೀಪಗಳನ್ನು ಖರೀದಿಸುವುದು | 3.85,500/- | 10,000/- | 7 ದಿನಗಳು |

**ಷರತ್ತುಗಳು:**
1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಯೊಂದಿಗೆ ಇ.ಎಂ.ಡಿ. ಮೊತ್ತಕ್ಕೆ ಮುಖ್ಯಾಧಿಕಾರಿಗಳು ಪುರಸಭೆ ಹುಮನಾಬಾದ ಹೆಸರಲ್ಲಿ ಡಿ.ಡಿ. ಲಗತ್ತಿಸಿ ಸಲ್ಲಿಸುವುದು.
2) ಟೆಂಡರ್ ಕಡಿಮೆ ದರ ನಮೂದಿಸಿದಲ್ಲಿ ವ್ಯತ್ಯಾಸ ಮೊತ್ತಕ್ಕೆ ಡಿ.ಡಿ.ಯನ್ನು ಟೆಂಡರ್ ಫಾರಂದೊಂದಿಗೆ ಲಗತ್ತಿಸುವುದು.
3) ನಿಗದಿ ಪಡಿಸಿದ ದಿನಾಂಕ ಮತ್ತು ಸಮಯ ಮೀರಿ ಬಂದ ಅರ್ಜಿಗಳನ್ನು ತಿಸ್ಕರಿಸಲಾಗುವುದು.
4) ಯಾವುದೇ ಅಥವಾ ಎಲ್ಲಾ ಟೆಂಡರ್ ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಪುರಸಭೆ ಕಾಯ್ದಿರಿಸಲಾಗಿದೆ.

**ಸಹಿ/-** ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

## ಪತ್ತೆಗೆ ರೈಲ್ವೇ ಪೊಲೀಸರ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.07- ಇಲ್ಲಿನ ರೈಲ್ವೇ ಪೊಲೀಸ್ ಠಾಣೆ ವ್ಯಾಪ್ತಿಯ ಯಾದಗಿರಿ ರೈಲ್ವೇ ನಿಲ್ದಾಣದ ಪ್ಲಾಟ ಪಾರ್ಮ ನಂ.01ರಲ್ಲಿ ರೈಲ್ವೇ ಕೀ.ಮೀ ನಂ; 632/20 ಡೌನ್‌ಲೈನ್ ಹತ್ತಿರ 2024ರ ಡಿ.27ರಂದು ಸುಮಾರು 35 ವರ್ಷದ ಒಬ್ಬ ಅಪರಿಚಿತ ಗಂಡಸು ಸ್ವಾಭಾವಿಕವಾಗಿ ಮೃತಪಟ್ಟಿದ್ದು, ಯು.ಡಿ.ಆರ್ ನಂ; 77/2024 ಕಲಂ 194 ಬಿ.ಎನ್.ಎಸ್.ಎಸ್‌ರಡಿ ಪ್ರಕರಣ ದಾಖಲಾಗಿದೆ. ಮೃತನ ಚಹರೆ ಪಟ್ಟಿಯ ವಿವರ; ವಯಸ್ಸು ಸುಮಾರು 35 ವರ್ಷ, ಎತ್ತರ ಸುಮಾರು 5.6 ಅಡಿ, ಕೋಲು ಮುಖ, ಉದ್ದವಾದ ಮೂಗು, ಕಪ್ಪುಮೈಬಣ್ಣ ಸಾಧಾರಣ ಮೈಕಟ್ಟು, ತಲೆಯಲ್ಲಿ ಎರಡು ಇಂಚು ಉದ್ದದ ಕಪ್ಪು ಕೂದಲು ಮತ್ತು ಮೀಸೆ ಗಡ್ಡ ಹೊಂದಿರುತ್ತಾನೆ. ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080-22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಂಗ್ರೆಸ್ ಬೆಂಬಲಿತ ಪಿಕೆಪಿಎಸ್ ನಿರ್ದೇಶಕರಿಗೆ ಮಾಜಿ ಸಚಿವರಿಂದ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಪ್ರಾಥಮಿಕಕೃಷಿಪತ್ತಿನ ಸಹಕಾರಸಂಘದಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾಂಗ್ರೆಸ್ ಪಕ್ಷದ ಬೆಂಬಲಿತ ನಿರ್ದೇಶಕರಾದ ಮಹಾರುದ್ರಯ್ಯಾ ರಾಮಯ್ಯಾ ಬಿರಾದರ, ಸಿದ್ದರೋಡ ಶಿವಲಿಂಗಪ್ಪ ಒಂಟಿಮಾರಿ, ಸೈಯದ ರಾಶೀದ ಇಕ್ರಮ್ ಅಲಿ ಪಟೇಲ್, ಸುನೀಲ್ ಅಮೃತರಾವ ಗಡಮಿ, ಅಂಬಾದಾಸ ಶಂಕರರಾವ ದರವೇಶ, ಈರಮ್ಮಾ ರಾಮಲಿಂಗರೆಡ್ಡಿ ರಾಂಪುರ, ಮೊಯಿಜೋದ್ದಿನ ಅಜಿಮ್ಮುದ್ದಿನ ಬಾರುದವಾಲೆ ರವರನ್ನ ಮಾಜಿ ಸಚಿವ ರಾಜಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ್, ಭೀಮರಾವ ಪಾಟೀಲ್, ಡಿಸಿಸಿ ಬ್ಯಾಂಕ ಜಿಲ್ಲಾ ಉಪಾಧ್ಯಕ್ಷ ಅಭಿಷೇಕ ಆರ್ ಪಾಟೀಲ್ ಸನ್ಮಾನಿಸಿ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ರೈತರು, ಮತದಾರರು ನಿಮ್ಮ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಂಡು ರೈತರ ಹಿತ ರಕ್ಷಣೆಗೆ ಶ್ರಮಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ಮುಜಾಫರ್ ಪಟೇಲ್, ಸದಸ್ಯರಾದ ವಿಶಾಲ ಬೋರಳೆ, ಹಬೀಬ್, ಕಾಂಗ್ರೆಸ್ ಹಿರಿಯ ಮುಖಂಡ ಅಶೋಕಸ್ವಾಮಿ, ಭಾಸ್ಕರ್, ವಿಜಯಕುಮಾರ ಆರ್. ಮಂಕಾಲ, ವೀರೇಶ ತುಗಾಂವ, ಪ್ರವೀಣ ಇಂಜಿನಿಯರ್, ರವೀಂದ್ರರೆಡ್ಡಿ ರಾಂಪುರ, ಮಂಜುನಾಥ್ ಸ್ವಾಮಿ ಫಾತ್ಮಪುರ್ ಮೋಜೆಸ್ ಮಿತ್ರಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಅವಿರೋಧವಾಗಿ ಕೈಲಾಸ ಪಾವಡಶೆಟ್ಟಿ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ತಾಲ್ಲೂಕಿನ ತಾಳಮಡಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಕೈಲಾಸ ಪಾವಡಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಶಿವಾಜಿ ಹಂಗರಗಿ ತಿಳಿಸಿದ್ದಾರೆ. ನನ್ನನ್ನು ಅವಿರೋಧವಾಗಿ ಆಯ್ಕೆಯಾಗಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು ಸಲ್ಲಿಸುತ್ತೇನೆ. ರೈತರ ಧ್ವನಿಯಾಗಿ ರೈತರಿಗಿರುವ ಸಮಸ್ಯೆಯನ್ನು ಪರಿಹರಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ಕೈಲಾಸ ಪಾವಡಶೆಟ್ಟಿ ತಿಳಿಸಿದ್ದಾರೆ.

## ಜನವರಿ ಮಾಹೆಗೆ ಪಡಿತರ ಧ್ಯಾನಗಳ ವಿತರಣೆ

ರಾಯಚೂರು ಜ.07-ಇಲ್ಲಿನ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಜನವರಿ 2025ರ ಮಾಹೆಗೆ ರಾಷ್ಟೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 21 ಕೆ.ಜಿ ಸಾರವರ್ಧಿತ ಅಕ್ಕಿ ಮತ್ತು 14 ಕೆ.ಜಿ ಜೋಳ ಹಾಗೂ ಪಿ.ಹೆಚ್.ಹೆಚ್(ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 03 ಕೆ.ಜಿ ಸಾರವರ್ಧಿತ ಅಕ್ಕಿ ಮತ್ತು 02 ಕೆ.ಜಿ ಜೋಳವನ್ನು ಉಚಿತವಾಗಿ ವಿತರಿಸಲಾಗುತ್ತದೆ.

ಒಪ್ಪಿಗೆ/ಸಮ್ಮತಿ ಸೂಚಿಸಿರುವ ಎಪಿಎಲ್(ಎನ್‌ಪಿಹೆಚ್‌ಹೆಚ್) ಪಡಿತರಚೀಟಿದಾರರಿಗೆರಿಯಾಯಿತಿ ದರದಲ್ಲಿ ಪ್ರತಿ ಕೆ.ಜಿಗೆ 15 ರೂ. ದಂತೆ ಏಕ ಸದ್ಯಸರ ಪಡಿತರ ಚೀಟಿಗೆ 05 ಕೆ.ಜಿ ಅಕ್ಕಿ ಹಾಗೂ ಎರಡು ಮತ್ತು ಹೆಚ್ಚಿನ ಕುಟುಂಬ ಸದಸ್ಯರಿರುವ ಎಪಿಎಲ್ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಒಂದು ರಾಷ್ಟ ಒಂದು ಪಡಿತರ ಚೀಟಿ (ಅಂತರ್ ರಾಜ್ಯ/ ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಯಾವುದೇ ನ್ಯಾಯಬೆಲೆ ಅಂಗಡಿ-ಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ಶುಲ್ಕರಹಿತ ದೂರವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಸೀಲ್ದಾರರ ಕಚೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಚೇರಿಗೆ ದೂರು ಸಲ್ಲಿಸಬಹುದಾಗಿದೆ.

**IN THE COURT OF THE SENIOR CIVIL JUDGE & J.M.F.C, AT BASAVAKALYAN**

**Crl. Misc No: 734/2024**

**Petitioners: P-1: Rajendra, P-2:Bhaskari, P3:Sanjay P4: Madumati, P5: Laxmibai P6: Nikita All are R/o Rajola Tq.Basavakalyan Dist.Bidar.**

-- V/S --

**Respondent: The Tahasildar, Basvakalyan.**

**Claim:-Issue of Death Certificate of the Mother of petitioners.**

**Petition Under Section 13 (3) Birth & Death Registration Act,1969**

**PAPER PUBLICATION**

This is to inform to the public at large, the **Mother** of the petitioner by name **" Sharanamma W/o Bhaskari Sheke"** who was died on **30-01-2019**, in her house at **Village Rajola** Tq.Basavakalyan Dist.Bidar leaving behind the petitioner as her son.

The said P1: Rajendra and 5 others all are R/o.Rajola Tq.Basavakalyan Dist Bidar has filed the above case before the Hon'ble Senior Civil Judge Court at Basavakalyan for issuing direction to the Respondent for issue of Death Certificate. If anybody got objection for the same, they are hereby requested to come and appear before the Hon'ble court on or before **19-02-2025 at 11.00 A.M.**

Date: 10-12-2024.

**// By Order of the Court //**
Sd/-
**CHIEF MINISTERIAL OFFICER,**
**Senior Civil Judge & JMFC Court,Basavakalyan.**

# ಸರ್ಕಾರಿ ಸೌಲಭ್ಯಗಳ ಸದುಪಯೋಗ ಪಡೆಯಿರಿ:ಸಂಸದ ಸಾಗರ ಖಂಡ್ರೆ




ಮಲ್ಲಮ್ಮ ನುಡಿ ವಾರ್ತೆ
(ಮಲ್ಲಪ್ಪಾಟಿ ಹಾಸಗೊಂಡ)

ಭಾಲ್ಕಿ:ಜ.7: ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಟ್ಯಾಬ್ ನೀಡುವ ಮೂಲಕ ಅವರ ಕಲಿಕೆಗೆ ಸಹಕರಿಸುತ್ತಿದೆ, ವಿದ್ಯಾರ್ಥಿಗಳು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ಪಟ್ಟಣದ ಸಂಸದರ ನಿವಾಸ ಕಛೇರಿಯ ಹತ್ತಿರ ಪ್ರಜ್ಞಾ ಫೌಂಡೇಶನ್ ಮತ್ತು ಐ.ಐ.ಎಫ್.ಎಲ್ ಸಂಸ್ಥೆ ಸಹಯೋಗದಲ್ಲಿ ನಡೆದ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಿಸಿ ಅವರು ಮಾತನಾಡಿದರು. ಉತ್ತಮ ಶಿಕ್ಷಣ ಪಡೆಯುವುದು ಪ್ರತಿ ಮಗುವಿನ ಹಕ್ಕು, ಟ್ಯಾಬ್ ಮೂಲಕ ಮಕ್ಕಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣ ಕೊಡಿಸುವಲ್ಲಿ ಐ.ಐ.ಎಫ್.ಎಲ್ ಸಂಸ್ಥೆ ಮತ್ತು ಪ್ರಜ್ಞಾ ಫೌಂಡೇಶನ್ ರವರು ಶಾಲಾ ಶಿಕ್ಷಣ ಇಲಾಖೆಯ ಮೂಲಕ ಮಕ್ಕಳಿಗೆ ಟ್ಯಾಬ್ ವಿತರಣೆ ಮಾಡುತ್ತಿರುವುದು ಮೆಚ್ಚುವಂತಹ ಕಾರ್ಯವಾಗಿದೆ. ತಾಲೂಕಿನ 10 ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಿಸಲಾಗಿದ್ದು, ಪ್ರತಿ ಶಾಲೆಗಳಲ್ಲಿಯೂ ಟ್ಯಾಬ್ ಲ್ಯಾಬ್ ರಚನೆ ಮಾಡಲಾಗಿದೆ. ಹತ್ತು ಪ್ರೌಢಶಾಲಾಗಳಲ್ಲಿ ಪ್ರತಿ ಶಾಲೆಗೂ 20 ಟ್ಯಾಬ್, 20 ಟೇಬಲ್ ಮತ್ತು 20 ಹೆಡ್ ಫೋನ್‌ಗಳ ವ್ಯವಸ್ಥೆ ಮಾಡಲಾಗಿದೆ ಎಲ್ಲಾ ವಿದ್ಯಾರ್ಥಿಗಳು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದತ್ತಾತ್ರಿ ಕಾಟಕರ, ಸಿಎಸ್‌ಆರ್ ಮ್ಯಾನೇಜರ ಶಂಭುಲಿಂಗ, ರಾಮಣ್ಣಗೌಡ, ಪ್ರಜ್ಞಾ ಫೌಂಡಶನ್ ಅಧ್ಯಕ್ಷ ಕಾಶಿನಾಥ ಪುಜಾರಿ, ಇಸಿಓ ಸಹದೇವ.ಜಿ, ಮುಖ್ಯಶಿಕ್ಷಕರಮೇಶ ಮರೂಕರ, ಸಂಜೀವ ಸಾವರೆ, ಹಣಮಂತ ಕಾರಾಮುಂಗೆ, ಬಿಆರ್‌ಪಿ ಸಂತೋಷಮುದಾಳೆ ಉಪಸ್ಥಿತರಿದ್ದರು.

# ಶಾರೀರಿಕ, ಮಾನಸಿಕ ಸದೃಢತೆಗೆ ಕ್ರೀಡೆ ಸಹಕಾರಿ: ಬಿ.ಜಿ.ಶೆಟಕಾರ




ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.07: ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಸದೃಢತೆಗೆ ಕ್ರೀಡೆ ಅತ್ಯಂತ ಸಹಕಾರಿಯಾಗಿದೆ. ಕಾಲೇಜು ಜೀವನದಲ್ಲಿ ಓದಿನ ಜೊತೆಗೆ ಕ್ರೀಡೆಗಳಲ್ಲೂ ಭಾಗವಹಿಸಿ ಯಶಸ್ವಿಯಾಗಬೇಕೆಂದು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಬಿ.ಜಿ.ಶೆಟಕಾರ ತಿಳಿಸಿದರು.

ಕರ್ನಾಟಕ ಕಾಲೇಜು ದೈಹಿಕ ಶಿಕ್ಷಣ, ಎನ್‌ಎಸ್‌ಎಸ್, ಎನ್‌ಸಿಸಿ, ಕ್ರೀಡಾ ವಿಭಾಗ, ಯುವ ರೆಡ್‌ಕ್ರಾಸ್, ಆರೋಗ್ಯ ಮತ್ತು ಸಾಂಸ್ಕೃತಿಕ ಘಟಕದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ ಫಿಟ್ ಇಂಡಿಯಾ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿ ಮಾತನಾಡಿದರು.

ವಿದ್ಯಾರ್ಥಿಗಳು ಆಸಕ್ತಿ ಇರುವ ಒಂದೇ ಕ್ರೀಡೆಯಲ್ಲಿ ತರಬೇತಿ ಪಡೆದು ಭವಿಷ್ಯದಲ್ಲಿ ಯಶಸ್ವಿಯಾಗಲು ಪ್ರಯತ್ನಿಸಬೇಕು. ಇಂದು ಭಾರತದಲ್ಲಿ ಶೇ.68% ಪ್ರತಿಶತ ಯುವಕರಿದ್ದಾರೆ. ಯುವಕರು ಸಾಮಾಜಿಕ ಜಾಲತಾಣದ ಆನ್‌ಲೈನ್ ಗೇಮ್, ಮದ್ಯವ್ಯಸನ, ಆನ್‌ಲೈನ್ ರಮ್ಮಿ ಆಡುವುದನ್ನು ಬಿಟ್ಟು ದಿನಾಲೂ ಯೋಗ, ಪ್ರಾಣಾಯಾಮ, ಹಿತಮಿತ ಆಹಾರ ಸೇವನೆ ಮಾಡುತ್ತ ಅಧ್ಯಯನ ಮತ್ತು ಕ್ರೀಡೆಗಳಲ್ಲಿ ಭಾಗವಹಿಸಿದರೆ ಭವಿಷ್ಯ ಚೆನ್ನಾಗಿರುತ್ತದೆ ಎಂದು ಮಾರ್ಮಿಕವಾಗಿ ಪ್ರತಿಪಾದಿಸಿದರು.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಸತೀಶ ಪಾಟೀಲ ಮಾತನಾಡಿ ವಿದ್ಯಾರ್ಥಿಗಳು ವಿದೇಶಿ ಸಂಸ್ಕೃತಿಯನ್ನು ತೊರೆದು ದೇಶಿ ಕ್ರೀಡೆಗಳ ಕಡೆಗೆ ಹೆಚ್ಚು ಮಹತ್ವ ಕೊಡಬೇಕಾಗಿದೆ. ಫಿಟ್ ಇಂಡಿಯಾ ಸಪ್ತಾಹದ ಮೂಲಕ ದೇಶದ ಪ್ರಧಾನಿಗಳು ಗ್ರಾಮೀಣ ಭಾಗದ ಯುವಜನತೆಗೆ ಹಳ್ಳಿ ಕ್ರೀಡೆಗಳಾದ ಕಬಡ್ಡಿ, ವಾಲಿಬಾಲ್, ಥ್ರೋಬಾಲ್ ಮತ್ತು ರನ್ನಿಂಗ್ ಮುಂತಾದ ಕ್ರೀಡೆಗಳನ್ನು ಆಡಿಸಲು ಮತ್ತು ಅವರಿಗೆ ಪ್ರೋತ್ಸಾಹ ನೀಡಲು ಫಿಟ್ ಇಂಡಿಯಾ ಆರಂಭಿಸಿದ್ದಾರೆ. ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ದೈಹಿಕ ನಿರ್ದೇಶಕರಾದ ಡಾ. ಮಾದಯ್ಯ ಸ್ವಾಮಿ ಮಾತನಾಡಿ ಫಿಟ್ ಇಂಡಿ–ಯಾ ಸಪ್ತಾಹದ ಪ್ರಯುಕ್ತ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ವಿವಿಧ ಕ್ರೀಡೆಗಳಲ್ಲಿ ಒಟ್ಟು 367 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಗುಂಪು ಆಟಗಳಲ್ಲಿ ಮತ್ತು ವೈಯಕ್ತಿಕ ಕ್ರೀಡೆಗಳಲ್ಲಿ ವಿದ್ಯಾರ್ಥಿಗಳು ಬಂಗಾರದ ಪದಕ ಮತ್ತು ಟ್ರೋಫಿ ಗೆದ್ದು ಬೀಗಿದ್ದಾರೆ. ಮುಂದೆಯೂ ಇದೇ ರೀತಿ ಮಕ್ಕಳಿಗಾಗಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗುವುದು. ಸಹಕಾರ ನೀಡಿದ ಸಂಸ್ಥೆಯ ಅಧ್ಯಕ್ಷರಿಗೂ ಹಾಗೂ ಎಲ್ಲಾ ಪದಾಧಿಕಾರಿಗಳು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಕು. ಲತಾ ಪ್ರಾರ್ಥಿಸಿದರು. ಉಪನ್ಯಾಸಕ ಪವನಕುಮಾರ ನಿರೂಪಿಸಿದರು. ಉಪಪ್ರಾಚಾರ್ಯರಾದ ಅನೀಲಕುಮಾರ ಚಿಕ್ಕಮಣೂರ ಸ್ವಾಗತಿಸಿದರು. ಡಾ.ರಾಜಮೋಹನ ಪರದೇಶಿ ವಂದಿಸಿದರು. ಇದೇ ವೇಳೆ ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ, ಪ್ರಮಾಣ ಪತ್ರ ಮತ್ತು ಮೆಡಲ್‌ಗಳನ್ನು ನೀಡಿ ಗೌರವಿಸಲಾಯಿತು. ಇದೇ ವೇಳೆ ವೇದಿಕೆ ಮೇಲೆ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ಹಂಗರಗಿ, ಎನ್‌ಎಸ್‌ಎಸ್ ಅಧಿಕಾರಿ ಸೋಮನಾಥ ಬಿರಾದಾರ, ಐಕ್ಯೂಎಸಿ ಸಂಯೋಜಕ ಡಾ. ರಾಜಮೋಹನ ಪರದೇಶಿ, ಎಲ್‌ಟಿ ಅಶ್ವಿನ್ ಎಲ್ ಚವ್ಹಾಣ್, ಸೇರಿದಂತೆ ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಾತೃಭಾಷೆ ಶಿಕ್ಷಣದಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರ




ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.07: ಮಾತೃಭಾಷೆ ಶಿಕ್ಷಣ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಕಲಿಸುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ ಋಷಿಕೇಶ ಶಿಕ್ಷಣ ಸಂಸ್ಥೆ ಸಂಚಾಲಿತ ಅರುಣೋದಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡದಲ್ಲಿ ಓದಿದ ಬಹಳಷ್ಟು ಮಕ್ಕಳು ಉನ್ನತ ಸಾಧನೆ ಮಾಡಿದ್ದಾರೆ. ಹೀಗಾಗಿ ಪಾಲಕರು ಮಕ್ಕಳಿಗೆ ಮಾತೃಭಾಷೆ ಕನ್ನಡದಲ್ಲೇ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು. ಅರುಣೋದಯ ಶಾಲೆ ಮಕ್ಕಳಿಗೆ ಸಂಸ್ಕಾರಯುತ ಗುಣಮಟ್ಟದ ಶಿಕ್ಷಣ ಕೊಡುತ್ತಿರುವುದು ಶ್ಲಾಘನೀಯ ಎಂದರು.

ವಿಕಾಸ ಅಕಾಡೆಮಿಯ ಜಿಲ್ಲಾ ಸಂಚಾಲಕ ರೇವಣಸಿದ್ದಪ್ಪ ಜಲಾದೆ ಮಾತನಾಡಿ, ಮಕ್ಕಳು ಪಾಲಕರನ್ನು ಅನುಕರಿಸುತ್ತಾರೆ. ಹೀಗಾಗಿ ಪಾಲಕರು ಮಕ್ಕಳ ಮುಂದೆ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ತಿಳಿಸಿದರು. ಪ್ರಾಥಮಿಕ ಹಂತದಲ್ಲೇ ಗುಣಮಟ್ಟದ ಶಿಕ್ಷಣ ನೀಡಿದ್ದಲ್ಲಿ ಮಕ್ಕಳು ಜೀವನದಲ್ಲಿ ಮಹತ್ವದ ಸಾಧನೆ ಮಾಡಬಲ್ಲರು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಋಷಿಕೇಶ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕುಶಾಲ್ ಪಾಟೀಲ ಗಾದಗಿ ಮಾತನಾಡಿ, ಕನ್ನಡ ಭಾಷೆ ಬೆಳವಣಿಗೆಗೆ ಕನ್ನಡ ಮಾಧ್ಯಮ ಶಾಲೆಗಳ ಉಳಿವು ಅಗತ್ಯವಾಗಿದೆ. ಕನ್ನಡ ಶಾಲೆಗಳಿಗೆ ಪ್ರೋತ್ಸಾಹಿಸುವ ಕೆಲಸ ಆಗಬೇಕಾಗಿದೆ ಎಂದು ತಿಳಿಸಿದರು. ಡಯಟ್ ಉಪನ್ಯಾಸಕಿ ಗೀತಾ ಗಡ್ಡಿ ಮಾತನಾಡಿದರು. ನಾರಾಯಣ್ ಭಟ್ ಜಾದೂ ಪ್ರದರ್ಶಿಸಿದರು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಶಿಕ್ಷಕರನ್ನು ಸತ್ಕರಿಸಿ, ಸ್ಮರಣಿಕೆ ನೀಡಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಪಾಲಕರು, ಕಿರು ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

2019–20 ರಿಂದ 2023–24ನೇ ಸಾಲಿನ ವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ, ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜೇಂದ್ರ ಮಣಗೇರಿ, ಶಾಲೆಯ ಆಡಳಿತಾಧಿಕಾರಿ ಸಂತೋಷಕುಮಾರ ಮಂಗಳೂರೆ ಮತ್ತಿತರರು ಇದ್ದರು. ಶಿಕ್ಷಕಿ ಅಲ್ಕಾವತಿ ನಿರೂಪಿಸಿದರು.

# ಬೀರಿ(ಬಿ) ಪಿ.ಕೆ.ಪಿ.ಎಸ್‌ಗೆ ಅವಿರೋಧ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ
(ಮಲ್ಲಪ್ಪಾಟಿ ಹಾಸಗೊಂಡ)

ಭಾಲ್ಕಿ:ಜ.7: ತಾಲೂಕಿನ ಬೀರಿ(ಬಿ) ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಹನ್ನೆರಡು ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ಬೀರಿ(ಬಿ) ಪಿ.ಕೆ.ಪಿ.ಎಸ್ ಗೆ ಮುಂದಿನ 5 ವರ್ಷಗಳಿಗೆ ನಡೆಯಬೇಕಿದ್ದ 12 ಸದಸ್ಯರ ಚುನಾವಣೆ ಪ್ರಕ್ರಿಯೆಲ್ಲಿ ಸಾಮಾನ್ಯ 5, ಮಹಿಳೆ 2, ಹಿಂದುಳಿದ ವರ್ಗ ಎ 1, ಹಿಂದುಳಿದ ವರ್ಗ ಬಿ 1, ಪರಿಶಿಷ್ಟ ಜ್ಯಾತಿ 1, ಪರಿಶಿಷ್ಠ ಪಂಗಡ 1, ಸಾಲಗಾರ ರಹಿತ ಕ್ಷೇತ್ರ 1 ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಸ್ಥಾನಗಳಷ್ಟೇ ನಾಮಪತ್ರಗಳು ಸಲ್ಲಿಸಿದ ಕಾರಣ ಎಲ್ಲಾ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 5 ಸ್ಥಾನಗಳ ಸಾಮಾನ್ಯ ಕ್ಷೇತ್ರದಲ್ಲಿ ರಾಮೇಶ್ವರ ರಾಜಕುಮಾರ, ನಾಗಶೇಟ್ಟಟಿ ಕಶಿನಾಥ, ರಾಜಕುಮಾರ ತುಳಿಸಿರಾಮ, ಶಿವಶಂಕರ ವಿಠಲರಾವ, ಪ್ರಭುರಾವ ದಶರಥರಾವ. ಎರಡು ಸ್ಥಾನಗಳ ಮಹಿಳಾ ಕ್ಷೇತ್ರದಲ್ಲಿ ಪದ್ಮಾವತಿ ಮಲ್ಲಿಕಾರ್ಜುನ, ಲಕ್ಷ್ಮಿ ??ೀಬಾಯಿ ಪಾಂಡುರಂಗ. ಹಿಂದುಳಿದ ವರ್ಗ ಎ ಕ್ಷೇತ್ರದಲ್ಲಿ ರಿಯಾಜೋದಿನ್ ಪಾಶಾಮಿಯ್ಯಾ, ಹಿಂದುಳಿದ ವರ್ಗ ಬ ನಲ್ಲಿ ದತ್ತು ಧೋಂಡಿಬಾ, ಪರಿಶಿಷ್ಟ ಜ್ಯಾತಿ ಶಿವಾಜಿ ಸೋಮಲು, ಪರಿಶಿಷ್ಠ ಪಂಗಡ ದಶರಥ ಸಂಗಪ್ಪ, ಸಾಲಹಾರ ರಹಿತ ಕ್ಷೇತ್ರದಲ್ಲಿ ಮೇಘರಾಜ ಅಶೋಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆ ಪ್ರಕ್ರಿಯೆ ಮುಗಿದ ತಕ್ಷಣ ಅವಿರೋಧವಾಗಿ ಆಯ್ಕೆಯಾದ ಎಲ್ಲಾ ನಿರ್ದೇಶಕರು ಮತ್ತು ಗ್ರಾಮದ ಪ್ರಮುಖರು ವಿಜಯೋತ್ಸವ ಆಚರಿಸಿದರು.

# ಜೆಜೆಎಮ್ ಕಳಪೆ ಕಾಮಗಾರಿ ಹಾಗೂ ಮೂಲ ಸೌಕರ್ಯ ಕೊರತೆ: ಕನ್ನಡ ಸೇನೆ ಆಕ್ರೋಶ



ಮಲ್ಲಮ್ಮ ನುಡಿ ವಾರ್ತೆ
(ಪರಮೇಶ ರಾಂಪುರೆ)

ಕಮಲನಗರ:ಜ.7: ತಾಲೂಕಿನ ಮದನೂರ ಗ್ರಾಮ ಪಂಚಾಯತ ವ್ಯಾಪ್ತಿಗೆ ಬರುವ ಖತಗಾಂವ ಗ್ರಾಮದಲ್ಲಿ ಜೆಜೆಎಮ್ ಕಳಪೆ ಕಾಮಗಾರಿ ಮತ್ತು ಗ್ರಾಮದಲ್ಲಿ ಮೂಲ ಸೌಕಾರ್ಯ ಕೊರತೆ ಬಗ್ಗೆ ಗ್ರಾಮ ಸಂಚಾರ ಅಭಿಯಾನಕ್ಕೆ ಬಂದ ಶಾಸಕರಿಗೆ ಕನ್ನಡ ಸೇನೆ ಕರ್ನಾಟಕ ತಾಲೂಕ ಘಟಕದಿಂದ ಮನವಿ ಪತ್ರ ಕೂಡಲಾಯಿತು.

ಗ್ರಾಮದಲ್ಲಿ ನೆಪ ಮಾತ್ರಕ್ಕೆ ಜೆಜೆಎಮ್ ಕಾಮಗಾರಿ ಆಗಿದೆ, ಇಲ್ಲಿ ವರೆಗೂ ನೀರು ಸರಬರಾಜು ಆಗುತ್ತಿಲ್ಲ, ಮತ್ತು ಕಾಮಗಾರಿಯಲ್ಲಿ ಗುಣಮಟ್ಟದ ಕೊರತೆ ಎದ್ದು ಕಾಣುತ್ತಿದೆ ಎಂದು ತಮ್ಮ ಆಕ್ರೋಶ ಹೊರಹಾಕಿದರು. ಚರಂಡಿ ನೀರು ರಸ್ತೆಮೇಲೆ ಹರಿಯುತ್ತಿದು ಸಂಚಾರಕ್ಕೆ ತೊಂದರೆ ಆಗುತ್ತಿದೆ. ರೈತರು ತಮ್ಮ ಹೊಲಗಳಿಗೆ ಹೋಗುವ ರಸ್ತೆಗಳು ಮುಚ್ಚಿ ಹಾಕಲಾಗಿದೆ.

ಹೊಲಗಳಿಗೆ ಮತ್ತು ಸುತ್ತ ಮುತ್ತಲಿನ ಗ್ರಾಮದ ರಸ್ತೆ ಮಾಡುವ ಬಗ್ಗೆ ತಿಳಿಸಿದರು. ಹಾಗಾಗಿ ಸಂಬಂಧ ಪಟ್ಟ ಅಧಿಕಾರಗಳಿಗೆ ಆದೇಶ ಮಾಡಿ ನಮ್ಮ ಸಮಸ್ಯೆಗಳಿಗೆ ಆದಷ್ಟು ಬೇಗ ಪರಿಹರಿಸಿಬೇಕೆಂದು ತಮ್ಮ ಮನವಿ ಪತ್ರದಲ್ಲಿ ತಿಳಿಸಿದ್ದರು. ಇದಕೆ ಶಾಸಕರು ಸಕರಾತ್ಮಕವಾಗಿ ಸ್ಪಂದಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸೇನೆ ಕಮಲನಗರ ತಾಲೂಕ ಘಟಕದ ಅಧ್ಯಕ್ಷ ಚನ್ನಬಸವ ಧರಣೆ, ಶೇಖರ, ಭರತ್, ಶಂಕರ, ಧನರಾಜ್, ನರೇಶ, ಮಹಾಂತೇಶ್, ಸಚಿನ, ಅಮೀತ, ಅರುಣ, ಲಿಂಗರಾಜ, ಬಸವರಾಜ, ರಮೇಶ ಸೇರಿದಂತೆ ಗ್ರಾಮಸ್ಥರು ಇದ್ದರು.

# ಗ್ರಾಹಕರು ತಮ್ಮ ಹಕ್ಕಿನ ಬಗ್ಗೆ ತಿಳಿಯಲು ಜಾಗೃತರಾಗಿ:ಎಂ.ಲೋಕೇಶ್




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.7: ದೈನಂದಿನ ಬದುಕಿಗೆ ಯಾವುದೆ ವಸ್ತು ಅಥವಾ ಸೇವೆ ಪಡೆಯುವ ಗ್ರಾಹಕನಿಗೆ ಅದರ ಹಿನ್ನೆಲೆ ಮತ್ತು ಗುಣಮಟ್ಟದ ಸಂಪೂರ್ಣ ಮಾಹಿತಿ ಪಡೆಯುವ ಐದು ಹಕ್ಕುಳ್ಳವನಾಗಿದ್ದಾನೆ. ಗ್ರಾಹಕರೇ ನಿಮ್ಮ ಹಕ್ಕಿನ ಬಗ್ಗೆ ತಿಳಿಯಲು ಜಾಗೃತರಾಗಿ. ಇದರಲ್ಲಿ ನಿಮಗೆ ಲಾಭ ಹೆಚ್ಚು ಎಂದು ಕಲಬುರಗಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಪ್ರಭಾರಿ ಅಧ್ಯಕ್ಷ ಎಂ. ಲೋಕೇಶ ಹೇಳಿದರು.

ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಖಾಯಂ ಸಂಚಾರಿ ಪೀಠ ಕಲಬುರಗಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆ ಮತ್ತು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ ಇವುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ "ರಾಷ್ಟ್ರೀಯ ಗ್ರಾಹಕರ ದಿನಾಚರಣೆ–2024" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಹಕನು ಯಾವ ವಸ್ತುವಿನಿಂದ ಪ್ರಾಣ ಹಾನಿಯಾಗುವ, ವಸ್ತುವಿನ ಗುಣಮಟ್ಟ ಮತ್ತು ಪ್ರಮಾಣ, ವಸ್ತು ಕಳಪೆಯಾದಲ್ಲಿ ಯಾರಿಗೆ ದೂರು ಕೊಡಬೇಕು, ವಸ್ತುವಿನಿಂದ ನಷ್ಟ ಉಂಟಾದಲ್ಲಿ ಪರಿಹಾರ ಪಡೆಯುವ ವಿಧಾನ, ಅನುಚಿತ ವ್ಯಾಪಾರ ಪದ್ಧತಿ ಕುರಿತು ಮಾಹಿತಿ ಪಡೆಯುವ ಹಕ್ಕುಳ್ಳವನಾಗಿದ್ದಾನೆ ಎಂದು ಗ್ರಾಹಕರ ಹಕ್ಕಿನ ಕುರಿತು ವಿವರಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಮಾತನಾಡಿ, ಗ್ರಾಹಕರೇ ದೇವರು ಎನ್ನುವ ವ್ಯಾಪಾರಿಗಳ ಪೈಕಿ ಕೆಲವರು ಮಿಶ್ರಣ ಮಾಡಿ ಮಾರಾಟ ಮಾಡುತ್ತಾರೆ. ಇಂತಹ ಮಾರಾಟಗಾರರ ಬಗ್ಗೆ ಎಚ್ಚರಿಕೆ ಹೊಂದಿರಬೇಕಾಗಿರುವುದು ಗ್ರಾಹಕರ ಕರ್ತವ್ಯವಾಗಿದೆ. ಎಲ್ಲಿಯವರೆಗೆ ಗ್ರಾಹಕರು ಪ್ರಜ್ಞಾವಂತರಾಗುವುದಿಲ್ಲವೋ ಅಲ್ಲಿಯವರೆಗೆ ದೋಷಪೂರಿತ ವಸ್ತುಗಳ ಮಾರಾಟಗಾರರ ಮೇಲೆ ಕಡಿವಾಣ ಸಾಧ್ಯವಿಲ್ಲ. ಗ್ರಾಹಕರು ಜಾಗೃತರಾದಲ್ಲಿ ಮೋಸದ ಮಾರುಕಟ್ಟೆ ಬಂದ್ ಮಾಡಬಹುದಾಗಿದೆ. ಯಾವುದೇ ಸೇವೆ, ವಸ್ತುವಿನಿಂದ ನಷ್ಟ ಹೊಂದಿದ್ದಲ್ಲಿ ಮುಕ್ತವಾಗಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡಬೇಕು ಎಂದ ಅವರು ತುರ್ತು ಸಂದರ್ಭದಲ್ಲಿ 1915 ಸಹಾಯವಾಣಿಗೆ ಕರೆ ಮಾಡಬಹುದಾಗಿದೆ ಎಂದರು.

ವಸ್ತು ಖರೀದಿಸುವಾಗ ಎಚ್ಚರವಿರಲಿ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಮಾತನಾಡಿ, ಮಾರುಕಟ್ಟೆಯಲ್ಲಿ ಯಾವುದೇ ವಸ್ತು ಖರೀದಿಸುವಾಗ ತುಂಬಾ ಎಚ್ಚರಿಕೆ ವಹಿಸಬೇಕು. ಇತ್ತೀಚೆಗೆ ಕಲಬೆರೆಕೆ ಸೇರಿಸಿ ಮಾರಾಟ ಮಾಡಲಾಗುತ್ತಿದೆ. ಗ್ರಾಹಕರು ಜಾಗೃತರಾಗಬೇಕಿದೆ. ನೊಂದ ಗ್ರಾಹಕರಿಗೆ ತ್ವರಿತಗತಿಯಲ್ಲಿ ನ್ಯಾಯ ಒದಗಿಸಲೆಂದೆ ಕಳೆದ ಸೆಪ್ಟೆಂಬರ್ 17 ರಂದು ಇಲ್ಲಿಯೇ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಕಲಬುರಗಿ ಪೀಠ ಆರಂಭಿಸಿದ್ದು, ಇದೂವರೆಗೆ 300 ಪ್ರಕರಣ ವಿಲೇವಾರಿ ಮಾಡಲಾಗಿದೆ. ಗ್ರಾಹಕರಲ್ಲಿ ಅರಿವು ಮೂಡಿಸುವ ಕೆಲಸ ಆಹಾರ ಇಲಾಖೆ ಮತ್ತು ಕಾನೂನುಮಾಪನ ಶಾಸ್ತ್ರ ಇಲಾಖೆ ನಿರಂತರವಾಗಿ ಮಾಡಬೇಕೆಂದು ಸಲಹೆ ನೀಡಿದರು. ನೊಂದು ಮನೆಯಲ್ಲಿ ಕುಳಿತುಕೊಳ್ಳಬೇಡಿ, ಆಯೋಗಕ್ಕೆ ಬನ್ನಿ: ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧೀಜಿ ಹಿತರಕ್ಷಣಾ ವೇದಿಕೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್ತಿನ ಸದಸ್ಯರಾದ ನ್ಯಾಯವಾದಿ ವೈಜನಾಥ ಝಳಕಿ ಉಪನ್ಯಾಸ ನೀಡುತ್ತಾ, ಯಾವುದೇ ವಸ್ತು, ಸೇವಾ ನ್ಯೂನತೆಯಿಂದ ನಷ್ಟ ಹೊಂದಿದಲ್ಲಿ ಗ್ರಾಹಕರೆ ಸುಮ್ಮನೆ ಕುಳಿ ತುಕೊಳ್ಳದೇ ಆಯೋಗದ ಕದ ತಟ್ಟಿದಾಗ ಪರಿಹಾರ ಶತಸಿದ್ಧ ಎಂದರು.

50 ಲಕ್ಷ ರೂ. ವರೆಗಿನ ಪರಿಹಾರಕ್ಕೆ ಜಿಲ್ಲಾ ಆಯೋಗ, 50 ಲಕ್ಷ ರೂ. ಗಳಿಂದ 2 ಕೋಟಿ ರೂ. ವರೆಗೆ ರಾಜ್ಯ ಆಯೋಗ ಹಾಗೂ 2 ಕೋಟಿ ರೂ. ಮೀರಿದ ಪ್ರಕರಣಗಳಿಗೆ ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಬಹುದಾಗಿದೆ ಎಂದಲ್ಲದೆ ವಿವಿಧ ಪ್ರಕರಣಗಳಲ್ಲಿ ನೊಂದ ಗ್ರಾಹಕರಿಗೆ ಆಯೋಗ ನೀಡಿದ ಪರಿಹಾರದ ಉದಾಹರಣೆ ನೀಡುತ್ತಾ, ಗ್ರಾಹಕರು ತಮ್ಮ ಹಕ್ಕುಗಳ ಸದುಪಯೋಗ ಮಾಡಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್‌ನ ಸದಸ್ಯರು ಹಾಗೂ ಶ್ರೀ ಬಸವೇಶ್ವರ ರೂರಲ್ ಡೆವಲಪ್‌ಮೆಂಟ್ ಟ್ರಸ್ಟಿನ ಅಧ್ಯಕ್ಷ ಬಾಪುಗೌಡ ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಉಪನಿರ್ದೇಶಕ ಅಶೋಕ ಶಾಸ್ತ್ರಿ, ಡಿ.ಡಿ.ಪಿ.ಐ ಸೂರ್ಯಕಾಂತ ಮದಾನೆ, ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕ ಶಿವಪುತ್ರ ಅಲ್ಲಾಪುರ ಸೇರಿದಂತೆ ಇತರೆ ಅಧಿಕಾರಿಗಳು, ನೂರಾರು ಸಂಖ್ಯೆಯಲ್ಲಿ ಶಾಲಾ ಮಕ್ಕಳು ಭಾಗವಹಿಸಿದ್ದರು.

ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಭೀಮರಾಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾನೂನು ಮಾಪನಶಾಸ್ತ್ರ ಇಲಾಖೆ ಮತ್ತು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರದ ಅಂಕಿತ ಅಧಿಕಾರಿ ಡಾ.ರತ್ನಾಕರ ತೋರಣ ಸ್ವಾಗತಿಸಿದರು. ಮಂಜು ಹೀರೊಳ್ಳಿಕರ್ ನಿರೂಪಿಸಿದರು.

# ದೇಶ ರಕ್ಷಣೆಗೆ ಸಿದ್ಧರಾಗಿ: ಬಿರಾದಾರ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ನಿರ್ಣಾ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜು ಕಾಲೇಜಿನಲ್ಲಿ ಭಾರತ ಸೇವಾದಳ ಘಟಕದ ಅಡಿಯಲ್ಲಿ ಸೇವಾದಳ ಸಪ್ತಾಹ ದಿನಾಚರಣೆಯ ಕಾರ್ಯಕ್ರಮನ್ನು ಸೋಮವಾರ ಆಯೋಜಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲರು ಹಾಗೂ ಭಾರತ ಸೇವಾದಳದ ಜಿಲ್ಲಾ ನೋಡಲ್ ಅಧಿಕಾರಿ ಶಿವರಾಜ್ ಬಿರಾದರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೇವೆಗಾಗಿ ಬಾಳು ಎಂಬ ಭಾರತ ಸೇವಾದಳದ ಘೋಷವಾಕ್ಯದಂತೆ ಎಲ್ಲರೂ ಸೇವಾ ಮನೋಭಾವನೆ ಅಳವಡಿಸಿಕೊಂಡು ದೇಶ ರಕ್ಷಣೆಗೆ ಸಿದ್ಧರಾಗಬೇಕೆಂದು ತಿಳಿಸಿದರು. ಧ್ವಜ ಸ್ತಂಭವನ್ನು ಸಿದ್ಧಗೊಳಿಸುವ ಧ್ವಜ ಕಟ್ಟುವಂತಹ ಕೆಲಸಗಳನ್ನು ಎಲ್ಲರೂ ಕಲಿಯಬೇಕೆಂದು ತಿಳಿಸಿದರು. ಭಾರತ ಸೇವಾ ದಳದ ಜಿಲ್ಲಾ ಕಾರ್ಯದರ್ಶಿ ಮಾರುತಿ ಸೂರ್ಯವಂಶಿ ಮಾತನಾಡಿ, ರಾಷ್ಟ್ರಗೀತೆಯನ್ನು ಹಾಡುವ ಪದ್ಧತಿ, ಜೀವನದಲ್ಲಿ ಗುರಿಗಳನ್ನು ಇಟ್ಟುಕೊಂಡು ಜೀವನ ಸಾಗಿಸುವ ರೀತಿ, ಆದರ್ಶಮಯವಾದಂತಹ ಬದುಕನ್ನು ಬದುಕುವ ಬಗ್ಗೆ ತಿಳಿಸಿದರು. ಭಾರತ ಸೇವಾದಳದ ಜಿಲ್ಲಾ ಸಂಘಟಕ ಸಿದ್ದಪ್ಪ ಯಳಸಂಗಿ ಮಾತನಾಡಿ, ರಾಷ್ಟ್ರೀಯ ಧ್ವಜದ ಮಹತ್ವವನ್ನು ತಿಳಿಸಿದರು. ಭಾರತದಲ್ಲಿ ತ್ರಿವರ್ಣ ಧ್ವಜ ರೂಪಿಸಿದ ಇತಿಹಾಸವನ್ನು ಪ್ರಾತ್ಯಕ್ಷಿತೆಯೊಂದಿಗೆ ತೋರಿಸುತ್ತಾ ಮಕ್ಕಳಿಗೆ ಮನ ಮುಟ್ಟುವಂತೆ ಹೇಳಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಸರಿತಾ, ಶ್ರೀನಿವಾಸ್ ಕಾಂಬಳೆ, ಸುನಿಲ್ ಓಂಕಾರ, ರೇಣುಕಾ ಹಾಗೂ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಉಪನ್ಯಾಸಕ ಓಂಕಾರ ರೆಡ್ಡಿ ಸಲಗರ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರೂಪಿಸಿದರು. ಕಾಲೇಜಿನ ವಿದ್ಯಾರ್ಥಿನಿ ನಂದಿತ ಪ್ರಾರ್ಥನಾ ಗೀತೆ ಹಾಡಿದರು. ಐಶ್ವರ್ಯ ತಂದೆ ಗುಂಡಪ್ಪ ಸ್ವಾಗತ ಗೀತೆಯನ್ನು ಹಾಡಿದರು. ಸಂತೋಷ್ ಅವರು ಸ್ವಾಗತಿಸಿದರು. ಗಿರಿಧರೆಡ್ಡಿ ನಲ್ ಬಲ್ ವಂದಿಸಿದರು.




ಬಸವಕಲ್ಯಾಣ :– ಇಲ್ಲಿನ ತಿಪುರಾಂತಿನ ಸಂಸ್ಥಾನ ಗವಿಮಠದಲ್ಲಿ ಪೂಜ್ಯಶ್ರೀ ಷ.ಬ್ರ.ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ 2025ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಗವಿಮಠ ಕಾರ್ಯಾಧ್ಯಕ್ಷರಾದ ಶರಣಪ್ಪಾ ಬಿರಾದಾರ, ವಿಠ್ಠಲ ರಾಯಪ್ಪಾನೂರ್, ನಿವೃತ್ತಿ ರೆಡ್ಡಿ, ಚಂದ್ರಶೇಖರ ಸ್ವಾಮಿ, ಜಯರಾಜ ಕಮ್ಮಾ, ಅಮರ ರಗಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಹಾರಕೂಡ ಜಾತ್ರಾ ನಿಮಿತ್ತ ನಡೆದ ಜಂಗಿ ಪೈಲ್ವಾನರ ಕುಸ್ತಿ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದ ಪರಮಪೂಜ್ಯ ಶ್ರೀ ಸದ್ಗುರು ಚನ್ನಬಸವ ಶಿವಯೋಗಿಗಳವರ 73ನೇ ಜಾತ್ರಾ ಮಹೋತ್ಸವ ನಿಮಿತ್ತವಾಗಿ ನಡೆದ ಜಂಗಿ ಪೈಲ್ವಾನರ ಕುಸ್ತಿ ಗಳು ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ದಿವ್ಯ ನೇತೃತ್ವದಲ್ಲಿ ಜರುಗಿದವು.

ಸಮ್ಮುಖ ಹಿರನಾಗಾಂವ ಪೂಜ್ಯ ಶ್ರೀ ಮ. ನಿ. ಪ್ರ. ಜಯಶಾಂತಲಿಂಗ ಮಹಾಸ್ವಾಮಿಗಳು. ಹಾಗೂ ಮಳಖೇಡ ಪೂಜ್ಯ ಶ್ರೀ ಷ. ಬ್ರ. ಅಭಿನವ ಕಾರ್ತಿಕೇಶ್ವರ ಶಿವಾಚಾರ್ಯರು.

ಶಾಸಕರಾದ ಶರಣು ಸಲಗರ ಅಧ್ಯಕ್ಷತೆ ವಹಿಸಿದ್ದರು.

ಮಾಜಿ ಸಚಿವರಾದ ರೇವು ನಾಯಕ ಬೆಳಮಗಿ.

ಬಿ. ಡಿ. ಪಿ. ಸಿ. ಅಧ್ಯಕ್ಷರಾದ ಬಸವರಾಜ ಕೊರಕೆ.

ಬಾಬು ಹೊನ್ನಾ ನಾಯಕ, ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಸಿದ್ರಾಮಪ್ಪ ಗುದಗೆ. ಹಾಗೂ ರಾಷ್ಟ್ರಮಟ್ಟದ ಪ್ರಸಿದ್ಧ ಕುಸ್ತಿಪಟುಗಳಾದ ನವದೆಹಲಿಯ ಕಾಮಗಾರ ಕೇಸರಿ, ಹರಿಯಾಣ ಸಾಲಿಮ್ ನ ಶುಭಂ ಮಾನೆ ಮತ್ತು ಮಹಾರಾಷ್ಟ್ರ ಉಪ ಕೇಸರಿ, ಕಾಕಾ ಪವಾರ ತಾಲೀಮ್, ಪುಣೆಯ ಮಹೇಂದ್ರ ಗಾಯಕವಾಡ ಅವರ ಮಧ್ಯೆ ಕೊನೆಯ ಕುಸ್ತಿ ಸ್ಪರ್ಧೆ ಜರುಗಿತು.

ಜರುಗಿದ ಕುಸ್ತಿ ಪಂದ್ಯಾವಳಿಯಲ್ಲಿ ಕರ್ನಾಟಕ, ಮಹಾರಾಷ್ಟ್ರ, ಹರಿಯಾಣ, ನವದೆಹಲಿ, ತೆಲಂಗಾಣದ ಸಾವಿರಾರು ಕುಸ್ತಿಪಟುಗಳು ಭಾಗವಹಿಸಿದ್ದರು.

ಕೊನೆ ಕುಸ್ತಿಯಲ್ಲಿ ವಿಜೇತರಾದ ಮಹೇಂದ್ರ ಗಾಯಕವಾಡ ಅವರನ್ನು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು 2 ಲಕ್ಷ ರೂಪಾಯಿ ನಗದು ನೀಡಿ, ಸತ್ಕರಿಸಿ ಆಶೀರ್ವದಿಸಿದರು.


ವಿಠಲ ಹೂಗಾರ ನಿರೂಪಿಸಿದರು.

ಕುಸ್ತಿ ವ್ಯವಸ್ಥಾಪಕರಾದ ಸಿದ್ಧಾರೋಡ ಪಾಟೀಲ ಗಿಲ್ಕಿ, ಪಂಡಿತರಾವ ಡಾವರೆ, ಖಾಜಾಸಾಬ ಮುಲ್ಲಾ, ಸುಭಾಶ ದೇಗಾಂವ, ಗುರು ದೇಗಾಂವ ಗದಲೇಗಾಂವ, ಪೃಥ್ವಿರಾಜ ದೇಗಾಂವ, ಪ್ರಕಾಶ ಬೆಳಮಗೆ, ರಾಜಕುಮಾರ ಪಾಟೀಲ ಹಾರಕೂಡ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ :– (ಹಲಸೂರ) :– ತಾಲೂಕಿನ ಬೇಲೂರ್ ಗ್ರಾಮದ ಉರಿಲಿಂಗ ಪೆದ್ದಿ ಮಠದಲ್ಲಿ ಬರುವ ಫೆಬ್ರವರಿ 22 ಮತ್ತು 23ರ 2025 ರಂದು ಲಿಂ.ಶಿವಲಿಂಗೇಶ್ವರ ಶಿವಯೋಗಿ ಸ್ವಾಮೀಜಿ ಅವರ 56ನೆಯ ಪುಣ್ಯ ಸ್ಮರಣೆ ಮತ್ತು ಸಮ್ಮೇಳನಕ್ಕೆ ಆಗಮಿಸಲು ಅರಣ್ಯ ಇಲಾಖೆಯ ಸಚಿವರಾದ ಈಶ್ವರ ಬಿ.ಖಂಡ್ರೆ ಅವರನ್ನು ಬೇಲೂರಿನ ಉರಿಲಿಂಗ ಪೆದ್ದಿ ಮಠದ ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮೀಜಿ ಹಾಗೂ ಬೀದಿ ಬದಿ ವ್ಯಾಪಾರಿಗಳ ಜಿಲ್ಲಾಧ್ಯಕ್ಷರಾದ ರಾಜಕುಮಾರ ಮೋರೆ ಇನ್ನೀತರರು ಸೇರಿ ಆಹ್ವಾನಿಸಿದರು. ಈ ಸಂದರ್ಭದಲ್ಲಿ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಜಾನುವಾರುಗಳು ಕೃಷಿಯ ಮೂಲಾಧಾರ – ಡಾ. ನರಸಪ್ಪ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ಜಾನುವಾರುಗಳ ಸಂರಕ್ಷಣೆ ಹಾಗೂ ಪೋಷಣೆಯಿಂದ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬಹುದು ಎಂದು ಬೀದರನ ಕೃಷಿ ಉಪ ನಿರ್ದೇಶಕರಾದ ಡಾ. ನರಸಪ್ಪ ದೇವಗೊಂಡ ಅವರು ಅಭಿಪ್ರಾಯಪಟ್ಟರು.

ತಾಲೂಕಿನ ಹಾರಕೂಡ ಸದ್ಗುರು ಚನ್ನಬಸವ ಶಿವಯೋಗಿಗಳವರ 73ನೇ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಮಠದ ಆವರಣದಲ್ಲಿ ಆಯೋಜಿಸಿದ ಪಶು ಪ್ರದರ್ಶನ ಹಾಗೂ ಬಹುಮಾನ ವಿತರಣೆ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿ ಜಾನುವಾರುಗಳಿಂದ ಕೃಷಿ, ಕೃಷಿಯಿಂದ ದೇಶದ ಸಮೃದ್ಧಿ ಸಾಧ್ಯವಾಗುತ್ತದೆ.

ಜಾನುವಾರುಗಳು ಮಾನವ ಜನಾಂಗದ ಅವಿಭಾಜ್ಯ ಅಂಗವಾಗಿದ್ದು ಮನುಷ್ಯನ ಆರ್ಥಿಕ ಸ್ವಾವಲಂಬನೆ ಹಾಗೂ ಸ್ವಾಸ್ಥ ಜೀವನಕ್ಕೆ ಭದ್ರ ಭೂಮಿಕೆಯನ್ನು ಒದಗಿಸುತ್ತವೆ.

ಯೋಗ್ಯ ರೀತಿಯ ತಂತ್ರ ಕೌಶಲ್ಯ ವೈಜ್ಞಾನಿಕ ಚಿಂತನೆಯ ಅಳವಡಿಕೆ ಹಾಗೂ ಸತತ ಹಾಗೂ ಸರಿಯಾದ ಪರಿಶ್ರಮದಿಂದ ಹೈನುಗಾರಿಕೆಯಲ್ಲಿ ಉತ್ತಮ ಸಾಧನೆ ಮಾಡುವುದರೊಂದಿಗೆ ನೆಮ್ಮದಿಯ ಬದುಕು ನಮ್ಮದಾಗಿಸಿಕೊಳ್ಳಬಹುದಾದೆ.

ಇಲಾಖೆಯ ವತಿಯಿಂದ ಕೊಡ ಮಾಡುವ ಎಲ್ಲ ಸೌಲಭ್ಯಗಳನ್ನು ರೈತರು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಬೇಕು.

ಅಮೃತದಂತಹ ಹಾಲು ಕೊಡುವ ಜಾನುವಾರುಗಳನ್ನು ನಾವು ರಕ್ಷಿಸಿದರೆ, ಅವು ನಮ್ಮನ್ನು ರಕ್ಷಿಸುತ್ತವೆ.

ಪ್ರತಿವರ್ಷ ಡಾ. ಚನ್ನವೀರ ಶಿವಾಚಾರ್ಯರು ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸುವ ಜಾನುವಾರು ಪ್ರದರ್ಶನ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ಎಲ್ಲರಿಗೂ ಅನುಕರಣೀಯ ಹಾಗೂ ಮಾದರಿ, ಇದು ರೈತ ಮತ್ತು ಜಾನುವಾರುಗಳ ಕುರಿತಾಗಿರುವ ಪೂಜ್ಯರ ಕಾಳಜಿಗೆ ದೊಡ್ಡ ನಿದರ್ಶನವೆಂದು ಭಾವುಕರಾಗಿ ನುಡಿದರು.

ಪ್ರಥಮ ಬಹುಮಾನ ಪಡೆದ ಮುಡಬಿಯ ಶರಣಪ್ಪ ಗಣಪತಿ ಪೂಜಾರಿ ಅವರ ದೇವಣಿ ಎತ್ತುಗಳಿಗೆ 10 ಸಾವಿರ, ಮಲ್ಲಪ್ಪ ಜಿಲೇಬಿ ಮುಡಬಿ ಅವರ ದೇವಣಿ ತಳಿ ಎತ್ತುಗಳಿಗೆ ಬಹುಮಾನವಾಗಿ 7 500.ನೂರು ಹಾಗೂ ಜಾಫರ ವಾಡಿಯ ಕಮಲಾಕರ ಬಂಡೆ ಅವರ ದೇವಣಿ ಎತ್ತುಗಳಿಗೆ ತೃತೀಯ ಬಹುಮಾನ 5 ಸಾವಿರ ರೂಪಾಯಿ ವಿತರಿಸಲಾಯಿತು.

ಜಾತ್ರೆಯಲ್ಲಿ ಭಾಗವಹಿಸಿದ ಹಣುಮ, ದೇವಣೆ, ಕಿಲಾರಿ ಎತ್ತುಗಳ ಜೋಡಿಗಳಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಬಸವಕಲ್ಯಾಣ ಹಾಗೂ ಹಾರಕೂಡ ಶ್ರೀಮಠದ ವತಿಯಿಂದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಪಶುಗಳ ಮಾಲೀಕರಿಗೆ ಬಹುಮಾನ ವಿತರಿಸಿದರು.

ರವಿ ರಾಯಜಿ ಬಹುಮಾನ ವಿತರಣಾ ಪಟ್ಟಿ ವಾಚನ ಮಾಡಿದರು.

ಮುಖ್ಯ ಪಶುವೈದ್ಯಾಧಿಕಾರಿಗಳಾದ ಡಾ. ಮಂಜುನಾಥ ರೆಡ್ಡಿ, ಡಾ. ಮಂಜುನಾಥ ರೆಡ್ಡಿ ಡಾ. ಚೆನ್ನಪ್ಪ ಗೌಡ ಬಿರಾದಾರ ಪಶುವೈದ್ಯಾಧಿಕಾರಿಗಳಾದ ಡಾ. ಭೀಮರೆಡ್ಡಿ, ಡಾ. ಅಮರ ದ್ರುವೆ ಡಾ. ನಿಲೇಶ ಮದಕಟ್ಟಿ, ಡಾ. ಮಾರುತಿ ಉಜಳಂಬ, ಡಾ. ಮಂಜುನಾಥ ರೆಡ್ಡಿ ಡಾ. ಗೋವಿಂದ ರೆಡ್ಡಿ, ಮಲ್ಲಿಕಾರ್ಜುನ ಹತ್ತರಕೆ, ಡಾ. ಮಂಜುನಾಥ ರೆಡ್ಡಿ ಡಾ. ಶರಣಬಸಪ್ಪ ಹತ್ತೆ ಸೇರಿದಂತೆ ಜಿಲ್ಲೆ ಮತ್ತು ವಿವಿಧ ತಾಲೂಕಿನಿಂದ ಆಗಮಿಸಿದ ವೈದ್ಯಾಧಿಕಾರಿಗಳು ಯೋಗ್ಯ ಬಹುಮಾನ ನೀಡಲು ಉತ್ತಮ ಪಶುಗಳ ಆಯ್ಕೆ ಮಾಡಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಮಲ್ಲಿನಾಥ ಹಿರೇಮಠ ಹಾರಕೂಡ, ರಾಜಕುಮಾರ ಬಿರಾದಾರ ಸಿರಗಾಪುರ, ಗುರುಲಿಂಗಪ್ಪ ಸೈದಾಪುರೆ, ಪೃಥ್ವಿರಾಜ ದೇಗಾಂವ, ಜಿ.ಎಸ್. ಮಾಲಿ ಪಾಟೀಲ, ರಾಜಕುಮಾರ ಪಾಟೀಲ ಹಾರಕೂಡ, ಶಿವರಾಜ ತಾಟೆ, ಸಿದ್ರಾಮ ಹೆಗಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಹಾಯಕ ನಿರ್ದೇಶಕ ಡಾ. ರವೀಂದ್ರ ನಾರಾಯಣಪುರ ಸ್ವಾಗತಿಸಿದರು.

ವಿಠಲ ಹೂಗಾರ ನಿರೂಪಿಸಿದರು.


## ಪುರಸಭೆ ಕಾರ್ಯಾಲಯ, ಹುಮನಾಬಾದ

ಸಂಖ್ಯೆ: ಪುಸಹು/ಆರೋಗ್ಯ/ಸಿಆರ್– /2024–25 ದಿನಾಂಕ:06–01–2025

### ಕೊಟೇಷನ್ ಟೆಂಡರ್ ಪ್ರಕಟಣೆ

ಹುಮನಾಬಾದ ಪುರಸಭೆಯಲ್ಲಿ ಮಾಜಿ ಜನೇವರಿ 2025ರಲ್ಲಿ ಜರುಗುವ ಶ್ರೀ ವೀರಭದ್ರೇಶ್ವ ಜಾತ್ರೆ ಪ್ರಯುಕ್ತ ಪಟ್ಟಣದಲ್ಲಿ ವಿಶೇಷ ಸ್ವಚ್ಛತೆ ಹಾಗೂ ನೈರ್ಮಲ್ಯ ಕೆಲಸಕ್ಕಾಗಿ ನೈರ್ಮಲೀಕರಣ ಕಾರ್ಮಿಕರಿಗೆ ಸಮವಸ್ತ್ರ ಮತ್ತು ಸ್ವೆಟರ್ ದಾಸ್ತಾನು ಮಾಡಿಕೊಳ್ಳಲು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ನೊಂದಾಯಿತ ಮತ್ತು ಅರ್ಹ ಗುತ್ತಿಗೆದಾರರು/ಏಜನ್ಸಿಯವರಿಂದ ವಿವರವಾದ ಕೊಟೇಷನ್ ದರ ಅಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಗುತ್ತಿಗೆದಾರರು/ಏಜನ್ಸಿಯವರು ನಿಗದಿ ಪಡಿಸಿದ ದಿನಾಂಕದೊಳಗೆ ಸೀಲ್ ಮಾಡಿದ ಲಕೋಟಿಯಲ್ಲಿ ಸಲ್ಲಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಸಲ್ಲಿಸಲು ಕೊನೆ ದಿನ ದಿನಾಂಕ: 13–01–2025, ಸಮಯ 17.30 ಗಂಟೆ.
2. ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕೊನೆ ದಿನ ದಿನಾಂಕ: 15–01–2025 ಸಮಯ 16.00 ಗಂಟೆ.

| ಕ್ರ.ಸಂ. | ಕಾಮಗಾರಿ ಹೆಸರು | ಪರಿಮಾಣ | ಅಂದಾಜು ಮೊತ್ತ | ಇ.ಎಂ.ಡಿ. ಮೊತ್ತ | ಅವಧಿ |
|---|---|---|---|---|---|
| 1 | ಕಾರ್ಮಿಕರಿಗೆ ಸಮವಸ್ತ್ರ ಸ್ವೆಟರ್ ಸರಬರಾಜು | 100 | 1.60 ಲಕ್ಷ | ರೂ.4,000 | 7 ದಿನಗಳು |

**ಷರತ್ತುಗಳು:**
1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಯೊಂದಿಗೆ ಇ.ಎಂ.ಡಿ. ಮೊತ್ತಕ್ಕೆ ಮುಖ್ಯಾಧಿಕಾರಿಗಳು ಪುರಸಭೆ ಹುಮನಾಬಾದ ಹೆಸರಲ್ಲಿ ಡಿ.ಡಿ. ಲಗತ್ತಿಸಿ ಸಲ್ಲಿಸುವುದು.
2. ಟೆಂಡರ್ ಕಡಿಮೆ ದರ ನಮೂದಿಸಿದಲ್ಲಿ ವ್ಯತ್ಯಾಸ ಮೊತ್ತಕ್ಕೆ ಡಿ.ಡಿ. ಯನ್ನು ಟೆಂಡರ್ ಫಾರಂದೊಂದಿಗೆ ಲಗತ್ತಿಸುವುದು.
3. ನಿಗದಿ ಪಡಿಸಿದ ದಿನಾಂಕ ಮತ್ತು ಸಮಯ ಮೀರಿ ಬಂದ ಅರ್ಜಿಗಳನ್ನು ತಿಸ್ಕರಿಸಲಾಗುವುದು.
4. ಯಾವುದೇ ಅಥವಾ ಎಲ್ಲಾ ಟೆಂಡರ್ ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಪುರಸಭೆ ಕಾಯ್ದಿರಿಸಲಾಗಿದೆ.

ಸಹಿ/– ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ


# ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಸೇವೆಯ ಮಹತ್ವ ಅರಿತುಕೊಳ್ಳಿ:– ಬಿರಾದಾರ್




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ತಾಲೂಕಿನ ನಿರ್ಣಾ ಗ್ರಾಮದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ದೇವಸ್ಥಾನದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ಆಯೋಜಿಸಲಾಗಿತ್ತು. ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಜೋಗಣಿ ಅವರು ಸಸಿಗೆ ನೀರೆರೆಯುವುದರ ಮೂಲಕ ಶಿಬಿರ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳು ಪರಿಪೂರ್ಣವಾಗಿ ಬೆಳೆಯಲು, ವ್ಯಕ್ತಿತ್ವ ವೃದ್ಧಿಸಿಕೊಳ್ಳಲು, ಓದುವುದರ ಜೊತೆಗೆ ಸಮಾಜದ ಜವಾಬ್ದಾರಿ ಅರಿಯಲು ರಾಷ್ಟ್ರೀಯ ಸೇವಾ ಯೋಜನೆ ಅವಶ್ಯವಾಗಿದೆ. ವಿದ್ಯಾರ್ಥಿಗಳು ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುವ ಎನ್ಎಸ್ಎಸ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆಯೂ ಗಮನಹರಿಸಬೇಕು ಎಂದರು. ವ್ಯಕ್ತಿತ್ವ ಎನ್ನುವುದು ಹುಟ್ಟಿನಿಂದ ಬರುವುದಿಲ್ಲ ಅದನ್ನು ಸಮಾಜದೊಂದಿಗಿನ ಒಡನಾಟದಿಂದ ರೂಪಿಸಿಕೊಳ್ಳಬೇಕು ಸಮಾಜದೊಂದಿಗೆ ಬೆರೆಯಲು ಮತ್ತು ಅದನ್ನು ವೈಜ್ಞಾನಿಕವಾಗಿ ಅಭ್ಯೈಸಿಕೊಳ್ಳಲು ಇಂಥಹ ಚಟುವಟಿಕೆಗಳು ಅತ್ಯಂತ ಅವಶ್ಯಕ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲರು ಹಾಗೂ ಶಿಬಿರದ ನಿರ್ದೇಶಕ ಶಿವರಾಜ ಬಿರಾದಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಾವುದೇ ಫಲಾಪೇಕ್ಷೆ ಇಲ್ಲದೆ ಶಾಂತಿ, ಅಹಿಂಸೆಯಿಂದ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ ಧೀಮಂತ ವ್ಯಕ್ತಿಯೆಂದರೆ ಮಹಾತ್ಮ ಗಾಂಧಿ. ಯುದ್ಧ, ಸಂಘರ್ಷ, ಭಯೋತ್ಪಾದನೆಯ ಜಾಗತಿಕ ಕಾಲಮಾನದಲ್ಲಿ ಮನುಷ್ಯನ ಮಾನಸಿಕ ಸ್ಥಿತ್ಯಂತರಗಳು ಭುಗಿಲೆದ್ದು, ತನ್ನ ಸ್ಥಿಮಿತವನ್ನು ಕಳೆದುಕೊಳ್ಳುತ್ತಿದ್ದಾನೆ. ಪ್ರಪಂಚದಲ್ಲಿ ದೇಶ– ದೇಶಗಳ ನಡುವೆ, ಮನುಷ್ಯನ ನಡುವೆ ಅನೇಕ ಸಂಘರ್ಷಗಳು ನಡೆಯುತ್ತಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಗಾಂಧೀಜಿಯ ತತ್ವಾದರ್ಶಗಳು ಪ್ರಸಕ್ತ ಜಗತ್ತಿಗೆ ಬೇಕಾಗಿದೆ. ಸೇವೆಯ ಮೂಲಕ ಸಮಾಜದ ಅರಿವು ಮೂಡಿಸುವುದು ರಾಷ್ಟ್ರೀಯ ಸೇವಾ ಯೋಜನೆಯ ಮುಖ್ಯ ಉದ್ದೇಶ. ಇದರಿಂದ ಸ್ವಯಂಸೇವಕರ ವ್ಯಕ್ತಿತ್ವ ವಿಕಸನವಾಗುತ್ತದೆ. ಸಮಾಜಸೇವೆಯ ಪ್ರಜ್ಞೆ ಜಾಗೃತಗೊಳ್ಳುತ್ತದೆ.

ಸೇವೆ ಎನ್ನುವ ಪದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅತ್ಯಂತ ಮಹತ್ವವನ್ನು ಪಡೆದಿದೆ. ನಮ್ಮಲ್ಲಿರುವ ಶ್ರಮ, ವಿದ್ಯೆ, ಬುದ್ಧಿ, ಜ್ಞಾನ, ಕೌಶಲ್ಯ, ಆರ್ಥಿಕ ಸೌಲಭ್ಯ ಇತ್ಯಾದಿಗಳನ್ನು ಸಮಾಜದ, ದೇಶದ ಒಳಿತಿಗಾಗಿ ಫಲಾಪೇಕ್ಷೆ ಇಲ್ಲದೆ ಅರ್ಪಣಾಮನೋಭಾವದಿಂದ ನೀಡುವ ಸಹಾಯವೇ ಸೇವೆ. ಸೇವಾ ಚಟುವಟಿಕೆ ನಮ್ಮ ಜೀವನದ ಅವಿಭಾಜ್ಯ ಭಾಗ ಹಾಗೂ ಸ್ವಭಾವವಾಗಬೇಕು ಎಂದರು. ಉಪನ್ಯಾಸಕ ಓಂಕಾರ ರೆಡ್ಡಿ ಸಲಗರ್ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯ ಫಲಿತಾಂಶಗಳು ದೇಶದ ಅಭಿವೃದ್ಧಿಗೆ ಪೂರಕವಾಗಿವೆ ಇಂತಹ ಶಿಬಿರಗಳನ್ನು ನಡೆಸುವುದರಿಂದ ಯುವಕರಲ್ಲಿ ಶಿಸ್ತು ರೂಪಗೊಳ್ಳುತ್ತದೆ ಎಂದು ತಿಳಿಸಿದರು.

ಎನ್.ಎಸ್ಎಸ್ ಅಧಿಕಾರಿ ಸಂತೋಷ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಮುಖ್ಯಥಿತಿಗಳಾದ ಅನೀಲ ರೆಡ್ಡಿ ಲಂಚಿನಗಾರ್, ರಾಕೇಶ ರೆಡ್ಡಿ, ಶರಣಪ್ಪ ಪಾಟೀಲ್ ಕಾರ್ಯಕ್ರಮದ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮವನ್ನು ದ್ವಿತೀಯ ಪಿಯುಸಿ ಎನ್.ಎಸ್ಎಸ್ ಅಧಿಕಾರಿ ಸಂತೋಷ ಪ್ರಾಸ್ತಾವಿಕವಾಗಿ ಮಾತನಾಡಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ನಂದಿನಿ ಪ್ರಾರ್ಥನೆ ಗೀತೆ ಹಾಡಿದರು. ಪ್ರಥಮ ಪಿಯುಸಿ ವಿದ್ಯಾರ್ಥಿನಿಗಳಾದ ಪಿಂಕು, ರಾಧಿಕಾ ಸ್ವಾಗತ ಗೀತೆ ಹಾಡಿದರು. ಈ ಸಂದರ್ಭದಲ್ಲಿ ಮಂಜುನಾಥ್ ಜೋಗಣಿ, ಉಪನ್ಯಾಸಕರಾದ ಶ್ರೀನಿವಾಸ ಕಾಂಬಳೆ, ಸರಿತಾ ಸೇರಿದಂತೆ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಗಿರಿಧರ್ ರೆಡ್ಡಿ ನಲ್ ಬಲ್ ಸ್ವಾಗತಿಸಿದರು. ಓಂಕಾರ ರೆಡ್ಡಿ ಸಲಗರ್ ನಿರೋಪಿಸಿ ಮಕ್ಕಳಿಗೆ ಎನ್.ಎಸ್ಎಸ್ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಸುನೀಲ ಓಂಕಾರ ವಂದಿಸಿದರು.


## ಮಾನ್ಯ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸಗೂರು ರವರಲ್ಲಿ
### ಕ್ರಿ.ಮಿ. ನಂ/ 2751/2024

1) ಲಕ್ಷ್ಮಮ್ಮ ಗಂಡ ರಾಜಪ್ಪ ವಯಸ್ಸು:71 ವ ಸಾ. ಜಾಮತಾಪೂರ
2) ಸಂಗಮ್ಮ ಗಂಡ ಶೇಖರಗೌಡ ವಯಸ್ಸು:47 ವ ಸಾ: ಯರದಿಹಾಳ
3) ನರಸಮ್ಮ ಗಂಡ ಬ್ಯಾನಪ್ಪ ವಯಸ್ಸು 43 ವ ಸಾ: ಜಾಂತಾಪೂರ
4) ಭೀರಪ್ಪ ತಂದೆ ರಾಜಪ್ಪ ವಯಸ್ಸು:41 ವ ಸಾ: ಜಾಂತಾಪೂರ ತಾ: ಲಿಂಗಸಗೂರು ಜಿ:ರಾಯಚೂರು

———————— ಅರ್ಜಿದಾರರು

**ವಿರುದ್ಧ**

ಮಾನ್ಯ ತಹಸೀಲ್ದಾರರು
ಜನನ ಮತ್ತು ಮರಣ ನೋಂದಣಾಧಿಕಾರಿಗಳು,
ತಹಸೀಲ್ ಕಾರ್ಯಾಲಯ, ಲಿಂಗಸಗೂರು
ತಾ:ಲಿಂಗಸುಗೂರು ಜಿ:ರಾಯಚೂರು ———————— ಎದರುದಾರರು

ಬೇಡಿಕೆ: ಅರ್ಜಿದಾರ 1 ರವರ ಮಾವ 2 ರಿಂದ 4 ರವರ ಅಜ್ಜನಾದ ಮಲ್ಲಪ್ಪ ತಂದೆ ನ್ಯಾನಪ್ಪ (MALLAPPA S/o GYANAPPA) ಇವರು ದಿನಾಂಕ: 31–05–1995 ರಂದು ಜಾಂತಾಪೂರ ಗ್ರಾಮದ ತಮ್ಮ ಸ್ವ ಗೃಹದಲ್ಲಿ ಮೃತ ಹೊಂದಿರುತ್ತಾನೆ. ಸದರಿ ಮೃತನ ಮರಣ ಸಮರ್ಥನಾ ಪತ್ರವು ಅರ್ಜಿದಾರರಿಗೆ ಸ್ಥಿರಾಸ್ತಿ ವರ್ಗಾವಣೆ ಅರ್ಜಿದಾರರನ್ನು ಹೊರತು ಪಡಿಸಿ ಬೇರೆ ಯಾರು ಕಾನೂನು ನೇರವಾರಸುದಾರರು ಇರುವುದಿಲ್ಲ. ಅರ್ಜಿದಾರರು ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಹೊಂದಿದ ಬಗ್ಗೆ ಮರಣ ಪತ್ರ ಪಡಯುವ ಸಲುವಾಗಿ ಅರ್ಜಿ,

ಕಾರಣ ಸದರಿ ಮೇಲಿನ ಅರ್ಜಿಗೆ ಸಂಬಂಧಿಸಿದಂತೆ ಯಾವೂದಾದರು ಆಕ್ಷೇಪಣೆ ಅಥವಾ ಪ್ರತ್ಯುತ್ತರವನ್ನು ಸಲ್ಲಿಸಲು ಯಾರದರೂ ಇದ್ದಲ್ಲಿ ದಿನಾಂಕ: 5/2/2025 ರಂದು ಮಾನ್ಯ ನ್ಯಾಯಾಲಕ್ಕೆ ಸ್ವತಃ ಅಥವಾ ತಮ್ಮ ನ್ಯಾಯವಾದಿಗಳ ಮೂಲಕ ಹಾಜರಾಗಿ ಮೇಲಿನ ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸಲು ಅವಕಾಶ ನೀಡುತ್ತಿದ್ದು, ಅದಕ್ಕೆ ತಪ್ಪಿದಲ್ಲಿ ಅರ್ಜಿಯನ್ನು ಕಾನೂನು ರೀತ್ಯಾ ಮುನ್ನಡೆಸಲಾಗುವುದು.

**ಇಂದು ದಿನಾಂಕ:7/1/2025 ರ ನ್ಯಾಯಾಲಯದ ಆದೇಶದಂತೆ.**

**//ನ್ಯಾಯಾಲಯದ ಆದೇಶದಂತೆ//**

ಮುಖಾಂತರ
ಲೋಹಿತಾಕ್ಷಗೌಡ ಮಾಲಿ ಪಾಟೀಲ್,
ಅರ್ಜಿದಾರ ಪರ ವಕೀಲರು,

ಮುಖ್ಯ ಆಡಳಿತಾಧಿಕಾರಿಗಳು
ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಲಿಂಗಸಗೂರು,

## ಮಾನ್ಯ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸಗೂರು ರವರಲ್ಲಿ
### ಕ್ರಿ.ಮಿ. ನಂ/ 2752/2024

1) ಲಕ್ಷ್ಮಮ್ಮ ಗಂಡ ರಾಜಪ್ಪ ವಯಸ್ಸು:71 ವ ಸಾ. ಜಾಮತಾಪೂರ
2) ಸಂಗಮ್ಮ ಗಂಡ ಶೇಖರಗೌಡ ವಯಸ್ಸು:47ವ ಸಾ: ಯರದಿಹಾಳ
3) ನರಸಮ್ಮ ಗಂಡ ಬ್ಯಾನಪ್ಪ ವಯಸ್ಸು 43 ವ ಸಾ: ಜಾಂತಾಪೂರ
4) ಭೀರಪ್ಪ ತಂದೆ ರಾಜಪ್ಪ ವಯಸ್ಸು:41 ವ ಸಾ: ಜಾಂತಾಪೂರ ತಾ: ಲಿಂಗಸಗೂರು ಜಿ:ರಾಯಚೂರು

———————— ಅರ್ಜಿದಾರರು

**ವಿರುದ್ಧ**

ಮಾನ್ಯ ತಹಸೀಲ್ದಾರರು
ಜನನ ಮತ್ತು ಮರಣ ನೋಂದಣಾಧಿಕಾರಿಗಳು,
ತಹಸೀಲ್ ಕಾರ್ಯಾಲಯ, ಲಿಂಗಸಗೂರು
ತಾ:ಲಿಂಗಸುಗೂರು ಜಿ:ರಾಯಚೂರು ———————— ಎದರುದಾರರು

ಬೇಡಿಕೆ: ಅರ್ಜಿದಾರ 1 ರವರ ಅತ್ತೆ 2 ರಿಂದ 4 ರವರ ಅಜ್ಜಿಯಾದ ಮಲ್ಲಮ್ಮ ಗಂಡ ಮಲ್ಲಪ್ಪ (MALLAMMA W/o MALLAPPA) ಮರಣ ಹೊಂದಿದ ಬಗ್ಗೆ ಮರಣ ಪತ್ರ ಪಡಯುವ ಸಲುವಾಗಿ ಅರ್ಜಿ,

**ಪತ್ರಿಕಾ ಪ್ರಕಟಣೆ**

ಈ ಮೇಲ್ಕಾಣಿಸಿದ ಅರ್ಜಿದಾರ 1 ರವರ ಅತ್ತೆ 2 ರಿಂದ 4 ರವರ ಅಜ್ಜಿಯಾದ ಮಲ್ಲಮ್ಮ ಗಂಡ ಮಲ್ಲಪ್ಪ (MALLAMMA W/o MALLAPPA) ಇವರು ದಿನಾಂಕ: 03–01–2002 ರಂದು ಜಾಂತಾಪೂರ ಗ್ರಾಮದ ತಮ್ಮ ಸ್ವ ಗೃಹದಲ್ಲಿ ಮೃತ ಹೊಂದಿರುತ್ತಾಳೆ. ಸದರಿ ಮೃತಳ ಮರಣ ಸಮರ್ಥನಾ ಪತ್ರವು ಅರ್ಜಿದಾರರಿಗೆ ಸ್ಥಿರಾಸ್ತಿ ವರ್ಗಾವಣೆ ಮಾಡುವ ಸಲುವಾಗಿ ಹಾಗೂ ಸರ್ಕಾರದ ಸೌಲಭ್ಯ ಪಡೆಯುವ ಸಲುವಾಗಿ ಅವಶ್ಯಕತೆ ಇರುವುದರಿಂದ ಆ ಕಾರಣಕ್ಕಾಗಿ ಅರ್ಜಿದಾರರನ್ನು ಹೊರತು ಪಡಿಸಿ ಬೇರೆ ಯಾರು ಕಾನೂನು ನೇರವಾರಸುದಾರರು ಇರುವುದಿಲ್ಲ. ಅರ್ಜಿದಾರರು ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಸದರಿ ಮೇಲಿನ ಅರ್ಜಿಗೆ ಸಂಬಂಧಿಸಿದಂತೆ ಯಾವೂದಾದರು ಆಕ್ಷೇಪಣೆ ಅಥವಾ ಪ್ರತ್ಯುತ್ತರವನ್ನು ಸಲ್ಲಿಸಲು ಯಾರದರೂ ಇದ್ದಲ್ಲಿ ದಿನಾಂಕ: 5/2/2025 ರಂದು ಮಾನ್ಯ ನ್ಯಾಯಾಲಕ್ಕೆ ಸ್ವತಃ ಅಥವಾ ತಮ್ಮ ತಪ್ಪಿದಲ್ಲಿ ಅರ್ಜಿಯನ್ನು ಕಾನೂನು ರೀತ್ಯಾ ಮುನ್ನಡೆಸಲಾಗುವುದು.

**ಇಂದು ದಿನಾಂಕ:7/1/2025 ರ ನ್ಯಾಯಾಲಯದ ಆದೇಶದಂತೆ.**

**//ನ್ಯಾಯಾಲಯದ ಆದೇಶದಂತೆ//**

ಮುಖಾಂತರ
ಲೋಹಿತಾಕ್ಷಗೌಡ ಮಾಲಿ ಪಾಟೀಲ್,
ಅರ್ಜಿದಾರ ಪರ ವಕೀಲರು,

ಮುಖ್ಯ ಆಡಳಿತಾದಿಕಾರಿಗಳು
ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಲಿಂಗಸುಗೂರು

# ಯುವನಿಧಿ ಯೋಜನೆ: ವಿಶೇಷ ನೋಂದಣಿ ಅಭಿಯಾನ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಜ.07:ರಾಜ್ಯಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಡಿ ಜಿಲ್ಲೆಯಲ್ಲಿ ಅರ್ಹ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ನಿರುದ್ಯೋಗ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ವಿಶೇಷನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.



ಕೌಶಲ್ಯಾಭಿವೃದ್ಧಿ ಮತ್ತು ಕಾಲೇಜು ಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ಯುವನಿಧಿ ಯೋಜನೆಯ ವಿಶೇಷನೊಂದಣಿ ಅಭಿಯಾನವನ್ನು ಇಂದಿನಿಂದ ಜ.20 ರ ವರೆಗೆ ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಆವರಣ ಮತ್ತು ಹಳೆಯ ತಾಲ್ಲೂಕು ಕಚೇರಿ ಆವರಣದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.2023-24 ಮತ್ತು 2024-25ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿರುವ ಜಿಲ್ಲೆಯ ಎಲ್ಲಾ ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ನೋಂದಣಿ ಮಾಡಿಸಿಕೊಳ್ಳಬೇಕು.ಪದವಿ ಅಭ್ಯರ್ಥಿಗಳಿಗೆ ರೂ.3000 ಹಾಗೂ ಡಿಪ್ಲೋಮಾ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ರೂ.1500 ಗಳನ್ನು ರಾಜ್ಯ ಸರ್ಕಾರವು ನಿರುದ್ಯೋಗ ಭತ್ಯೆಯಾಗಿ ನೀಡುತ್ತಿದೆ. ಅರ್ಹರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ;

# ಇಂದು ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಜ.7:ಮಹಿಳಾಮತ್ತುಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜ.08 ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯಸಭೆಯುಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನಡೆಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ತಿಳಿಸಿದ್ದಾರೆ.ಸಭೆಯಲ್ಲಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆಯ ಅಧಿನಿಯಮ 2005 ನಿಯಮ 2006ರ ವಿಷಯ, ಕೇಂದ್ರ ಸರ್ಕಾರದ 'ಸಖಿ' ಒನ್ ಸ್ಟಾಪ್ ಸೆಂಟರ್, ಬಾಲ್ಯ ವಿವಾಹ ನಿಷೇಧ ಕೋಶ, ಬಾಲಕಿಯರ ವಸತಿ ನಿಲಯ, ಸಾಂತ್ವನ ಯೋಜನೆ, ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಣಿಕೆ ತಡೆ ಯೋಜನೆ, ರಾಜ್ಯ ಮಹಿಳಾ ನಿಲಯ ವ್ಯವಸ್ಥಾಪಕರ ಸಮಿತಿ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಯೋಜನೆ ಮತ್ತು ಮಹಿಳಾ ಸಬಲೀಕರಣ ಘಟಕ ಸೇರಿದಂತೆ ವಿಷಯಗಳ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

# ರೈತ ಸಂಘದಿಂದ ಲಾರಿ ಚಾಲಕರಿಗೆ ಸುರಕ್ಷಿತ ಚಾಲನೆ ಕುರಿತು ಜಾಗೃತಿ



**ಮಲ್ಲಮ್ಮ ನುಡಿ ವಾರ್ತೆ**

ಸಂಡೂರು :ಜ:7 ಸಂಡೂರು ತಾಲೂಕಿನ ಸುಶೀಲಾನಗರ, ಸಿದ್ದಾಪುರ ಮಧ್ಯದಲ್ಲಿ ಡಿಸೆಂಬರ್ 29 ರಂದು ಲಾರಿ ಮತ್ತು ಬೈಕ್ ಡಿಕ್ಕಿ ಸಂಬಂವಿಸಿ ಮೃತ ಪಟ್ಟಿದ್ದ ಇರ್ವರಿಗೆ ರೈತ ಸಂಘದಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು. ನಂತರ ರೈತ ಸಂಘದವರು ಅರ್ಧಗಂಟೆಗಳ ಕಾಲ ರಸ್ತೆ ಬಂದ್ ಮಾಡಿ ಅಲ್ಲಿ ಸಂಚರಿಸುತ್ತಿದ್ದ ಲಾರಿ ಚಾಲಕರಿಗೆ ಸುರಕ್ಷಿತ ಚಾಲನೆ ಕುರಿತು ಜಾಗೃತಿ ಮೂಡಿಸಿದರು. ಸಭೆಯಲ್ಲಿ ರೈತ ಸಂಘದ ಗ್ರಾಮ ಘಟಕದ ಗೌರವ ಅಧ್ಯಕ್ಷ ಪಿ.ಸಿ. ಪರಮೇಶ್ವರ ಅಧ್ಯಕ್ಷ ಪಿ.ಮಂಜುನಾಥ ಪಾಟೀಲ್, ಪ್ರಧಾನ ಕಾರ್ಯದರ್ಶಿ ಹೆಚ್. ಕಾಡಪ್ಪ, ಉಪಾಧ್ಯಕ್ಷ ಜಿ.ಪರಮೇಶ್ವರ ಕಾರ್ಯದರ್ಶಿ ಎನ್. ಪಂಪಾಪತಿ, ಲಾರಿ ಮಾಲೀಕರ ಸಂಘದ ಆಧ್ಯಕ್ಷ ಟಿ. ತಿಪ್ಪೇಸ್ವಾಮಿ, ನರಸಿಂಗಾಪುರ ಗ್ರಾಮ ಘಟಕದ ಅಧ್ಯಕ್ಷ ನೀಲಕಂಠಪ್ಪ ಮುಖಂಡರು ಜಿ. ಕುಮಾರಸ್ವಾಮಿ, ಟಿ.ಮರಿಯಮ್ಮ, ಬಿ. ಮಾಂತಮ್ಮ, ಸಿದ್ದಲಿಂಗಪ್ಪ ಟಿ.ಎಸ. ಪ್ರಭಾಕರ ಮತ್ತಿತ್ತರು ಉಪಸ್ಥಿತರಿದ್ದರು.

# ದರೋಡೆ ಕೋರರ ಬಂಧನ



**ಮಲ್ಲಮ್ಮ ನುಡಿ ವಾರ್ತೆ**

ಭಾಲ್ಕಿ: ಜ.7:ತಾಲ್ಲೂಕಿನ ಬಾಜೋಳಗಾ-ದಾಡಗಿ ರಸ್ತೆಯ ದಾಡಗಿ ಗ್ರಾಮ ಸಮೀಪ ದರೋಡೆಗೆ ಆಯುಧಗಳೊಂದಿಗೆ ನಿಂತಿದ್ದ ನಾಲ್ವರು ದರೋಡೆಕೋರರನ್ನು ಭಾನುವಾರ ಖಟಕ ಚಿಂಚೋಳಿ ಪಿಎಸ್‌ಐ ಸುದರ್ಶನ ರೆಡ್ಡಿ ನೇತೃತ್ವದ ತಂಡ ದಾಳಿ ನಡೆಸಿ ಬಂಧಿಸಿದ್ದಾರೆ.

ಒರ್ವ ಆರೋಪಿ ತಪ್ಪಿಸಿಕೊಂಡಿದ್ದಾನೆ. ಬಂಧಿತ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

ಬಂಧಿತ ಆರೋಪಿಗಳಿಂದ 02 ಬಡಿಗೆ, ಚಾಕು, ಕಬ್ಬಿಣದ ಪೈಪ್, ಖಾರದ ಪಾಕೆಟ್, ಹಗ್ಗ ಜಪ್ತಿ ಮಾಡಲಾಗಿದೆ.ಬೀದರ್ ಪೊಲೀಸ್ ಕಂಟ್ರೋಲ್ ರೂಂನಿಂದ ಕೆಲ ಜನರು ದರೋಡೆ ಮಾಡಲು ಆಯುಧಗಳನ್ನು ಹಿಡಿದು-ಕೊಂಡು ನಿಂತಿದ್ದಾರೆ ಎಂಬ ಖಚಿತ ಮಾಹಿತಿಮೇರೆಗೆ ದ-ರೋಡೆಕೋರರು ಮೇಲೆ ದಾಳಿ ನಡೆಸಲಾಗಿತ್ತು.

ಈ ಸಂಬಂಧ ಖಟಕ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಜನವರಿ 07- 2024-25ನೇ ಸಾಲಿನ ಯಾದಗಿರಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ 30 ದಿನಗಳ ವರೆಗೆ ಉಚಿತವಾಗಿ ಮೊಬೈಲ್ ರಿಪೇರಿ ಮತ್ತು ಸರ್ವೀಸ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರು ಅವರು ತಿಳಿಸಿದ್ದಾರೆ.

ವಿಶೇಷ ಸೂಚನೆ ಗ್ರಾಮೀಣ ಭಾಗದವರು ಆಗಿರಬೇಕು, ಬಿಪಿಎಲ್, ಎಎಪಿ, ಪಿಹೆಚ್‌ಹೆಚ್ ರೇಷನ ಕಾರ್ಡ್ ಕಡ್ಡಾಯವಾಗಿ ಹೊಂದಿರಬೇಕು, ಊಟ ವಸತಿ ಸಹಿತ ಉಚಿತವಾಗಿರುತ್ತದೆ. 18 ರಿಂದ 45 ವರ್ಷ ಒಳಗಿರಬೇಕು, ಸಂಸ್ಥೆಯ ಸಮವಸ್ತ್ರ ಮತ್ತು ನೋಟ್‌ಪುಸ್ತಕ ಉಚಿತವಾಗಿ ನೀಡಲಾಗುತ್ತದೆ. ಎಸ್‌ಬಿಐಯಿಂದ ಕಂಪ್ಯೂಟರ್ ತರಬೇತಿ ಪ್ರಮಾಣ ನೀಡಲಾಗುತ್ತದೆ. ನ್ಯಾಷನಲ್ ಅಕಾಡಮಿಕಡೆಯಿಂದ ಕೂಡ ಮೊಬೈಲ್ ರಿಪೇರಿ ಮತ್ತು ಸರ್ವೀಸ್ ಸ್ವಯಂ ತರಬೇತಿ ಪ್ರಮಾಣ ಪತ್ರ ನೀಡಲಾಗುತ್ತದೆ. (ಕೇಂದ್ರ ಸರ್ಕಾರದ ಪ್ರಮಾಣ ಪತ್ರ ನೀಡಲಾಗುತ್ತದೆ). ಆಸಕ್ತಿ ಇರುವವರು 2025ರ ಜನವರಿ 14ರ ಒಳಗೆ ಅರ್ಜಿಸಲ್ಲಿಸಬೇಕು, ಅರ್ಜಿಸಲ್ಲಿಸಲು ದಾಖಲಾತಿಗಳು ಬಿಪಿಎಲ್, ಎಎಪಿ, ಪಿಹೆಚ್‌ಹೆಚ್ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಅಂಕಪಟ್ಟಿ ಪ್ರಮಾಣ ಪತ್ರ , ಟಿಸಿ, ನಾಲ್ಕು ಭಾವಚಿತ್ರ ಲಗತ್ತಿಸಬೇಕು, ಮೊದಲು ಬಂದ 35 ಅರ್ಜಿಗಳನ್ನು ಮಾತ್ರ ತರಬೇತಿಗೆತೆಗೆದುಕೊಳ್ಳಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.09 ರಂದು ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಸಿಟ್ಟಿಂಗ್ಸ್

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ:ಜಿಲ್ಲೆಯಲ್ಲಿ ಜ.09 ರಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಸಿಟ್ಟಿಂಗ್ಸ್ ನಡೆಸಲು ಉದ್ದೇಶಿಸಿದೆ ಎಂದು ಆಯೋಗದ ಕಾರ್ಯದರ್ಶಿ ಎ.ದಿನೇಶ್ ಸಂಪತ್‌ರಾಜ್ ಅವರು ತಿಳಿಸಿದ್ದಾರೆ.ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ನೊಂದವರಿಗೆ ಸೂಕ್ತ ನೆರವನ್ನು ಒದಗಿಸುವ ನಿಟ್ಟಿನಲ್ಲಿ 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದ ಅಡಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಜಿಲ್ಲೆಯಲ್ಲಿ ಜ.09 ರಂದು ಸಿಟ್ಟಿಂಗ್ಸ್ ನಡೆಸಲಿದೆ.ಈ ಸಮಯದಲ್ಲಿ ಜಿಲ್ಲೆಯಲ್ಲಿ ಆಯೋಗದಲ್ಲಿ ನೋಂದಣಿಯಾಗಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಿ, ವಿಲೇ ಮಾಡಿ ಕ್ರಮ ಜರುಗಿಸಲಾಗುವುದು. ದೂರುದಾರರು ಹಾಗೂ ಪ್ರತಿವಾದಿ ಪ್ರಾಧಿಕಾರಗಳು ಇದರ ಸೌಲಭ್ಯ ಸದುಪಯೋಗಪಡಿಸಿಕೊಳ್ಳಬೇಕು. ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ಅದೇ ದಿನದಂದು ಬಳ್ಳಾರಿ ಜಿಲ್ಲೆಯ ಸಾರ್ವಜನಿಕರಿಂದ ದೂರುಗಳು ಮತ್ತು ಅಹವಾಲುಗಳನ್ನು ಸ್ವೀಕರಿಸಲಾಗುತ್ತದೆ.ಸಾರ್ವಜನಿಕರು ತಮ್ಮ ದೂರು ಹಾಗೂ ಅಹವಾಲುಗಳಿದ್ದಲ್ಲಿ ಅಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸಲ್ಲಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭ್ರಷ್ಟಾಚಾರ ನಿಗ್ರಹ ಸಮಿತಿ ನೂತನ ಪದಾಧಿಕಾರಿಗಳ ನೇಮಕ



**ಮಲ್ಲಮ್ಮ ನುಡಿ ವಾರ್ತೆ**

ಬೀದರ್: ನಗರದ ಅಂಬೇಡ್ಕರ್ ವೃತ್ತದ ಹತ್ತಿರದಲ್ಲಿರುವ ಅತಿಥಿ ಗ್ರಹದಲ್ಲಿ ಸೋಮವಾರ ಕರ್ನಾಟಕ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ಸಮಿತಿಯ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ಬೀದರ್ ಜಿಲ್ಲಾ ಅಧ್ಯಕ್ಷರಾದ ವಿಶಾಲ್ ದೊಡ್ಡಿ ಅವರು ಸಂಘಟನೆಯ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿದರು. ನಾಡು-ನುಡಿ ಸಂಸ್ಕೃತಿ ಉಳಿಸಿ ಬೆಳಸುವ ಮಹತ್ತರ ಧ್ಯೆಯ ಉದ್ದೇಶ ಹೊಂದಿರುವ ಕರ್ನಾಟಕ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ಸಮಿತಿ ಉತ್ತಮ ರೀತಿಯಲ್ಲಿ ಬೀದರ ಜಿಲ್ಲೆಯ ಎಲ್ಲಾ ಸಮಸ್ಯೆಗಳನ್ನು ವಿವಾಹರಣೆ ಮಾಡಲು ಉದ್ದೇಶ ಹೊಂದಿದೆ ಎಂದು ಜಿಲ್ಲಾಧ್ಯಕ್ಷ ವಿಶಾಲ ದೊಡ್ಡಿ ತಿಳಿಸಿದರು.

ಈ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳಿಗೆ ಆದೇಶ ಪ್ರಮಾಣ ಪತ್ರ ನೀಡಲಾಯಿತು.

ಜಿಲ್ಲಾ ಉಪಾಧ್ಯಕ್ಷರಾದ ಪುಟ್ಟು ಚತುರೆ ಗಾದಗಿ, ಅನಿಲ್ ಕುಮಾರ್ ಮಡ್ಡೆ, ಕಾರ್ಯಧ್ಯಕ್ಷರಾದ -ರಜನಿಕಾಂತ, ಕಾರ್ಯದರ್ಶಿ ಸೂರ್ಯಕಾಂತ ಬುಡಜ-ರೆ, ಪ್ರಧಾನ ಕಾರ್ಯದರ್ಶಿ ಮಿಲಿಂದ್ ರಾಜಗೀರಾ, ಸಹ ಕಾರ್ಯದರ್ಶಿ -ಸಾಹಿಲ್ ಬಹುತ್, ಸಾಮಾಜಿಕ ಹೋರಾಟಗಾರ ಸಂಗಮೇಶ ಭಾವಿದೊಡ್ಡಿ, ವಿವಿಧ ಸಂಘಟನೆಯ ಹೋರಾಟಗಾರ ಸಾಯಿ ಸಿಂಧೆ, ಸಂಘಟನೆಯ ಕೂಲಿ ಕಾರ್ಮಿಕರ ಜಿಲ್ಲಾ ಅಧ್ಯಕ್ಷ ವೆಂಕಟ್ ವಡಿಯರ್, ರೇವಣಸಿದ್ಧ ಹಡಪದ, ವೀರೇಶ ಸ್ವಾಮಿ, ಸತೀಶ ಕ್ಯಾದೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜ.17 ರಂದು ಗೋಳಸಾರದಲ್ಲಿ ಸಾಮೂಹಿಕ ವಿವಾಹ

**ಮಲ್ಲಮ್ಮ ನುಡಿ ವಾರ್ತೆ**

ಇಂಡಿ : ಶ್ರೀ ಸದ್ಗುರು ಚಿನ್ಮಯಮೂರ್ತಿ ತ್ರಿಮೂರ್ತಿ ಮಹಾಶಿವಯೋಗಿಗಳ 31 ನೇ ಪುಣ್ಯಸ್ಮರಣೋತ್ಸವ ನಿಮಿತ್ಯ ತಾಲೂಕಿನ ಸುಕ್ಷೇತ್ರ ಗೋಳಸಾದಲ್ಲಿ ಜ 13 ರಿಂದ 17 ರ ವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.ಜ.13 ರಂದು ರಾತ್ರಿ 6 ಗಂಟೆಗೆ ದೀಪೋತ್ಸವ, ನಂತರ ಆದ್ಯಾತ್ಮ ಪ್ರವಚನ, ಜ 14 ರಂದು ತುಲಾಭಾರ ನಾಟಕ, ಜ 15 ರಂದು ಬಂಗಾರದ ಮನುಷ್ಯ ನಾಟಕ, ಜ.16 ರಂದು ಕೋಳುರು ಕೊಡಗುಸು ನಾಟಕ, ಮತ್ತು ಡಾ॥ ಮಂಜುನಾಥ ಕೊಟೆನ್ನವರ ಸರ್ಜನ ಇವರ ನೇತೃತ್ವದಲ್ಲಿ ಬಿ.ಎಲ್.ಡಿ.ಈ ಆಸ್ಪತ್ರೆಯ ತಜ್ಞ ವೈದ್ಯರಿಂದ ಉಚಿತ ಬೃಹತ್ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಮತ್ತು ರಕ್ತದಾನ ಶಿಬಿರ, ಶ್ರೀ ತ್ರಿಮೂರ್ತಿ ಕಾರುಣ್ಯ ಪ್ರಶಸ್ತಿ ಪ್ರಧಾನ, ಜ 17 ರಂದು ಮುಂಜಾನೆ ಸುಮಂಗಲೆಯರಿಂದ ಕುಂಭ ಮೆರವಣೆಗೆ ಶ್ರೀ ಪ್ರಭು ಸಿದ್ದರಾಯ ದೇವರ ಪಲ್ಲಕ್ಕಿ ಉತ್ಸವ, ನಂತರ 11 ಗಂ-ಟೆಗೆ ಧರ್ಮಸಭೆ, ಸಾಮುಹಿಕ ವಿವಾಹ ದಿವ್ಯ ಸಾನಿಧ್ಯ ಶ್ರೀ 1008



ಜಗದ್ಗುರು ಡಾ॥ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀಶೈಲಪೀಠ, ಸಾಮೂಹಿಕ ವಿವಾಹಕ್ಕಾಗಿ 9482630441, 9901658866 ಗೆ ಸಂಪರ್ಕಿಸಲುಅದಲ್ಲದೆ ಶಿವ ಭಜನಾ ಸ್ಪರ್ದೆಯನ್ನು ಹಮ್ಮಿಕೊಳ್ಳಲಾಗಿದೆ. ಪ್ರಥಮ ಬಹುಮಾನ' 21001 ರೂ, ದ್ವಿತಿಯ ಬಹುಮಾನ 15001, ಮತ್ತು ತೃತೀಯ ಬಹುಮಾನ 8001 ರೂ ಹೆಚ್ಚಿನ ಮಾಹಿತಿಗಾಗಿ 9741360142, 7975672855, 9901573547 ಗೆ ಸಂಪರ್ಕಿಸಲು ಕೋರಿದ್ದಾರೆ.

# ಆರೋಗ್ಯ ಸೇವೆಗಳಲ್ಲಿ ವ್ಯತ್ಯಯವಾಗದಂತೆ ಅಗತ್ಯ ಸಿದ್ಧತೆ: ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ:ಜಿಲ್ಲೆಯು ಸೇರಿದಂತೆ ರಾಜ್ಯಮಟ್ಟದಲ್ಲಿ ಆಶಾ ಕಾರ್ಯಕರ್ತೆಯರು ವಿವಿಧ ಬೇಡಿಕೆಗಳ ಕುರಿತು ಮುಷ್ಕರ ಕೈಗೊಳ್ಳುತ್ತಿರುವ ಹಿನ್ನಲೆಯಲ್ಲಿ ತಾಯಿ ಮಗುವಿನ ಆರೈಕೆ, ಲಸಿಕಾ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳ ನಿಯಂತ್ರಣದ ಯಾವುದೇ ಸೇವೆಗಳಿಗೆ ನ್ಯೂನತೆ ಉಂಟಾಗದಂತೆ ಅಗತ್ಯ ಸಿದ್ಧತೆಯನ್ನು ಜಿಲ್ಲೆಯಾದ್ಯಂತ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಅವರು ತಿಳಿಸಿದ್ದಾರೆ.ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ (ಆಶಾ) ಎಂಬ ಪದನಾಮದ ಅಡಿ ಗ್ರಾಮೀಣ ಭಾಗ ಮತ್ತು ನಗರ ಪ್ರದೇಶದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಒಬ್ಬರಂತೆ ಆರೋಗ್ಯ ಸೇವೆಗಳ



ಸೇವಾ ಪೂರೈಕೆದಾರರಾಗಿ ಕಾರ್ಯನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ಯಾವುದೇ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತೊಡಕು ಉಂಟಾಗದಂತೆ ಪೂರಕ ಕ್ರಮ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.ಬಳ್ಳಾರಿ, ಸಂಡೂರು, ಸಿರುಗುಪ್ಪ, ಕಂಪ್ಲಿ ಮತ್ತು ಕುರುಗೋಡು ತಾಲ್ಲೂಕುಗಳ ತಾಲ್ಲೂಕು ಆರೋಗ್ಯ ಅಧಿಕಾರಿಗಳ ನೇತೃತ್ವದಲ್ಲಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆಡಳಿತ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಉಪಕೇಂದ್ರ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವ ಪ್ರಾಥಮಿಕ ಆರೋಗ್ಯ ಸುರಕ್ಷ ಅಧಿಕಾರಿ, ಆರೋಗ್ಯ ನಿರೀಕ್ಷಣಾಧಿಕಾರಿ ಮತ್ತು ಸಮುದಾಯ ಆರೋಗ್ಯ ಅಧಿಕಾರಿ ವರ್ಗದವರ ಮೂಲಕ ಸೇವೆಗಳನ್ನು ನೀಡಲು ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ವಿವಿಧ ತಾಲ್ಲೂಕಗಳ ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಿ ಆರೋಗ್ಯ ಸೇವೆ ಪೂರೈಕೆಯಲ್ಲಿ ತೊಡಕು ಉಂಟಾಗದಂತೆ ನಿಗಾವಹಿಸಲಾಗಿದೆ ಎಂದಿದ್ದಾರೆ. ರಾಜ್ಯ ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಗಳ ಸೂಚನೆಯ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕತೆ-ಯರ ಮೂಲಕ ಸೇವೆಗಳನ್ನು ನೀಡಲು ಈಗಾಗಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರೊಂದಿಗೆ ನಿರಂತರ ಸಂಪರ್ಕ ಹೊಂದಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ಯಾರೆಂಟಿಗಳ ಬಗ್ಗೆ ಇರುವ ಕಾಳಜಿ ಕೃಷಿ, ನೀರಾವರಿಗಿಲ್ಲ ರಾಜ್ಯ ಸರ್ಕಾರದ ವಿರುದ್ಧ ರೈತ ಸಂಘದ ಅಧ್ಯಕ್ಷ ಮೇಟಿ ವಾಗ್ದಾಳಿ



**ಮಲ್ಲಮ್ಮ ನುಡಿ ವಾರ್ತೆ**

ವಿಜಯನಗರ, ಜ.07: ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಹೋರಾಟದ ಮೂಲಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಈ ವರೆಗೂ ಆ ಕಾಯ್ದೆಗ ಳನ್ನು ಹಿಂಪಡೆದಿಲ್ಲ. 5 ಗ್ಯಾರೆಂಟಿಗಳಿಗೆ ಸಾವಿರಾರು ಕೋಟಿ ಅನುದಾನ ವಿನಿಯೋಗಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ನೀರಾವರಿಗೆ ನಯಾ ಪೈಸೆ ನೀಡಿಲ್ಲ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ವಾಸುದೇವ ಮೇಟಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದಿಂದ ಹೊಸಪೇಟೆಯ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ರೈತರ ದಿನಾಚರಣೆ ಮತ್ತು ಜಿಲ್ಲಾ ರೈತ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ಕಾಂಗ್ರೆಸ್ ಎಲ್ಲ ನಾಯಕರು ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿದ್ದರು. ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತಿದ್ದಂತೆ ಕಿತ್ತೆಸೆಯುವುದಾಗಿ ಭರವಸೆ ನೀಡಿದ್ದರು. ಆದರೆ, ಸರ್ಕಾರ ಬಂದು ಎರಡೂ ವರ್ಷವಾದರೂ ಚಕಾರವೆತ್ತದಿರುವುದ ಕಾಂಗ್ರೆಸ್ ಬುಟಾಟಿಕೆಯನ್ನು ತೋರಿಸುತ್ತದೆ ಎಂದು ವಾಗ್ದಾಳಿ ನಡೆಸಿದರು. ಎಪಿಎಂಸಿ ಕಾಯ್ದೆ ತಿದ್ದುಪಡಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಬುಡಮೇಲಾಗಿದೆ. ಕಾಳ ಸಂತೆಯಲ್ಲಿ ದವಸ, ಧಾನ್ಯಗಳ ಮಾರಾಟದಿಂದ ನಿರೀಕ್ಷಿತ ಬೆಲೆ ಸಿಗದೇ ರೈತರು ಬೀದಿ ಪಾಲಾಗುತ್ತಿದ್ದಾರೆ. ಮತ್ತೊಂದೆಡೆ ಎಪಿಎಂಸಿ ಅಂಗಡಿಗಳು ದಲ್ಲಾಳಿಗಳ ಮನೆಗಳಾಗಿ ಪರಿವರ್ತನೆಗೊಳ್ಳುತ್ತಿವೆ ಎಂದು ಎಪಿಎಂಸಿ ಕಾಯ್ದೆಯ ಗಂಭೀರತೆಯನ್ನು ವಿವರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಮಾತನಾಡಿ, ದೇಶಕ್ಕೆ ಅನ್ನ ನೀಯುವ ರೈತರ ಶ್ರಮವನ್ನು ಎಲ್ಲರೂ ಗೌರವಿಸಬೇಕು. ರೈತರು ಬೆಳೆ ಬೆಳೆಯದೇ ಹೊರತು ನಮ್ಮ ಜೀವನ ನಡೆಯುವುದಿಲ್ಲ. ಹೀಗಾಗಿ ಕೃಷಿ ಎಂಬುದು ಬದುಕಿನ ಮೂಲಾಧಾರ ಎಂಬುದನ್ನು ಯಾರೂ ಮರೆಯಬಾರದು ಎಂದ ಅವರು, ತಾವು ಕೂಡಾ ರೈತನ ಮಗನಾಗಿದ್ದು, ಬಿಡುವಿನ ಸಮಯದಲ್ಲಿ ಇಂದಿಗೂ ಕೃಷಿ ಚಟುವಟಿಕೆಗಳಲ್ಲಿ ತೊಡಗುವುದಾಗಿ ತಿಳಿಸಿದರು.ಗರಗನಾಗಲಾಪುರ-ಕುರುಗೋಡು ಒಪ್ಪತ್ತೇಶ್ವರ ಮಠದ ನಿರಂಜನ ಪ್ರಭುದೇಶಿಕ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಅನ್ನದಾತ ದೈವಕ್ಕಿಂತ ಮಿಗಿಲು. ಅವರ ಬೇಕು, ಬೇಡಗಳನ್ನು ಪೂರೈಸುವುದು ಸರ್ಕಾರಗಳ ಜವಾಬ್ದಾರಿ. ಕೃಷಿ ಉತ್ತೇಜನ, ನೀರಾವರಿ ಕಾರ್ಯಗಳನ್ನು ಅಲಕ್ಷಿಸಬಾರದು ಎಂದರು.ಇದೇ ವೇಳೆ ಪ್ರಗತಿ ಪರ ರೈತರು, ಪ್ರತಿಭಾನ್ವಿತ ರೈತರ ಮಕ್ಕಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ವೇದಿಕೆ ಮೇಲೆ ಜಿಲ್ಲಾಧ್ಯಕ್ಷ ಸಿ.ಎ.ಗಾಳೆಪ್ಪ, ವೆಂಕೋಬಪ್ಪ, ವೆಂಕಟೇಶ, ಬಿ.ನಾ.ರೂಪಲತಾ, ಸಿ.ರೇಖಾ, ರತ್ನಮ್ಮ, ಕಲಾವತಿ, ಶೇಖರ್, ಹೊನ್ನೂರವಲಿ ಸ್ವಾಮಿ ಮತ್ತಿತರರು.ಇದಕ್ಕೂ ಮುನ್ನ ನಗರದ ವಡಕರಾಯ ದೇವಸ್ಥಾನದಿಂದ ಜಿಲ್ಲಾ ಒಳಾಂಗಣ ಕ್ರೀಡಾಂಗಣದ ವರೆಗೆ ವಿವಿಧ ಕಲಾ ಮೇಳಗಳೊಂದಿಗೆ ಬೃಹತ್ ರೈತ ಯಾತ್ರೆ ನಡೆಯಿತು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಚಾಲನೆ ನೀಡಿದರು.

# ಸಮಗ್ರ ಕೃಷಿ ಪದ್ಧತಿ ಅನುಸರಿಸಲು ಸಲಹೆ

**ಮಲ್ಲಮ್ಮ ನುಡಿ ವಾರ್ತೆ**

ವಿಜಯಪುರ:ಜ06: ಕೃಷಿ ಇಲಾಖೆ ರಾಜ್ಯಾದ್ಯಂತ ಬೃಹತ್ ವಿಸ್ತರಣಾ ಜಾಲವನ್ನು ಹೊಂದಿದ್ದು, ರೈತರಿಗೆ ಅಗತ್ಯ ಕೃಷಿ ಪರಿಕರ ಮತ್ತು ತಾಂತ್ರಿಕ ಜ್ಞಾನವನ್ನು ನೀಡುತ್ತಿದೆ. ಇದಕ್ಕೆ ಪೂರಕವಾಗಿ ಅನುಕೂಲವಾಗುವಂತೆ, ಅವರ ಜ್ಞಾನವನ್ನು ಹೆಚ್ಚಿಸಲು ಪ್ರತಿ ಎರಡು ತಿಂಗಳಿಗೊಮ್ಮೆ ದ್ವೈಮಾಸಿಕ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಹ ವಿಸ್ತರಣಾ ನಿರ್ದೇಶಕ ಡಾ. ಆರ್. ಬಿ. ಬೆಳ್ಳಿ ಹೇಳಿದರು. ಅವರಿಂದು ನಗರದ ಹೊರವಲಯದ ಹಿಟ್ನಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಇಲಾಖೆ ಅಧಿಕಾರಿಗಳಿಗೆ ಹಮ್ಮಿಕೊಂಡ ದ್ವೈಮಾಸಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ರೈತರು ಯಾವ ಬೆಳೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಬರುತ್ತದೆ ಎಂಬುದನ್ನು ನೋಡಿ ಮುಂದಿನ ವರ್ಷ ಅದೇ ಬೆಳೆಯನ್ನು ಹೆಚ್ಚಿನ ಕ್ಷೇತ್ರದಲ್ಲಿ ಬೆಳೆಯುವದರಿಂದ, ಮಾರುಕಟ್ಟೆಯಲ್ಲಿ ದಿಡೀರ್ ದರ ಕುಸಿಯುತ್ತದೆ. ಆಗ ರೈತ ಚಿಂತೆಗಿಡಾಗುತ್ತಾನೆ. ಅದರ ಬದಲಿಗೆ ಒಂದೇ ಬೆಳೆ ಬೆಳೆಯದೇ ಕೃಷಿ, ತೋಟಗಾರಿಕೆ, ಬೆಳೆಗಳ ಜೊತೆಗೆ ಹೈನುಗಾರಿಕೆ, ರೇಷ್ಮೆ ಕೃಷಿ ಮುಂತಾದ ಉಪಕಸಬುಗಳ ಮೂಲಕ ಅರ್ಥಿಕ ಆದಾಯ ಪಡೆಯಬಹುದೆಂದರು. ಸಹ ಸಂಶೋಧನಾ ನಿರ್ದೇಶಕ ಡಾ. ಎಸ್.ಬಿ.ಜಗ್ಗಿನವರ ಮಾತನಾಡಿ, ರೈತರಿಗೆ ಅನುಕೂಲಕರವಾಗುವ ಅಗತ್ಯ ಸಂಶೋಧನೆಗಳನ್ನು ಕೈಗೊಳ್ಳಲಾಗುವದು. ವಿವಿಧ ತಾಂತ್ರಿಕತೆಗಳನ್ನು ರೈತರು ಅಳವಡಿಸಿಕೊಳ್ಳಲು ಅನುಕೂಲವಾಗುವ, ಕಡಿಮೆ ವೆಚ್ಚದ, ವಾತಾವರಣಕ್ಕೆ ಹೊಂದಿಕೊಳ್ಳುವ ಸೂಕ್ತ ತಳಿಗಳನ್ನು ರೈತರು ಬಳಸಬೇಕೆಂದರು. ಜಂಟಿ ಕೃಷಿ ನಿರ್ದೇಶಕಿ ರೂಪ ಎಲ್.ಮಾತನಾಡಿ, ಈ ಕಾರ್ಯಾಗಾರದಿಂದ ಉತ್ತಮ ಕೃಷಿ ಸಂದೇಶಗಳನ್ನು ವಿಜ್ಞಾನಿಗಳಿಂದ ಪಡೆದು ಮುಂದೆ ರೈತರಿಗೆ ತಿಳಿಸಲಾಗುವುದೆಂದರು. ಡಾ. ಮಿಲಿಂದ ಪೋತದಾರ, ಡಾ. ಎಸ್. ಎಂ. ವಸ್ತ್ರದ, ಡಾ. ಪ್ರಸನ್ನ ಪಿ., ಡಾ. ವಿಜಯಲಕ್ಷ್ಮೀ ಮುಂದಿನಮನಿ ತಾಂತ್ರಿಕ ಸಲಹೆ ನೀಡಿದರು. ಕಾರ್ಯಾಗಾರದಲ್ಲಿ ಉಪ ಕೃಷಿ ನಿರ್ದೇಶಕ ಡಾ. ಪ್ರಕಾಶ ಚವ್ಹಾಣ, ಡಾ. ಚಂದ್ರಕಾಂತ ಪವಾರ, ಸಹಾಯಕ ಕೃಷಿ ನಿರ್ದೇಶಕ ಡಾ. ಹೆಚ್. ವಾಯ್. ಸಿಂಗೆಗೋಳ, ಮಹಾದೇವಪ್ಪ ಏವೂರ, ಎಮ್. ಹೆಚ್. ಯರಝರಿ, ಪ್ರಕಾಶ ಕಳಸಗೊಂಡ, ಎಸ್.ಕೆ.ಬಿರಾದಾರ ಸೇರಿದಂತೆ ಇಲಾಖೆಯ ವಿವಿಧ ತಾಲೂಕು ಹೋಬಳಿಗಳಿಂದ ಬಂದ ಕೃಷಿ ಅಧಿಕಾರಿಗಳು, ಆತ್ಮಾ ಯೋಜನೆ ಸಿಬ್ಬಂದಿ ಉಪಸ್ಥಿತರಿದ್ದರು. ಡಾ. ಶಿವನಗೌಡ ಪಾಟೀಲ ಸ್ವಾಗತಿಸಿದರು.

ಡಾ. ಬಾಲರಾಜ ಬಿರಾದಾರ ವಂದಿಸಿದರು.

## ಸಂಪಾದಕನ ಮೇಲೆ ದಾಳಿ ಖಂಡಿಸಿ ಕಾನೂನು ಕ್ರಮಕ್ಕೆ ಸಂಪಾದಕರ ಸಂಘದಿಂದ ಎಸ್ಪಿಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ತುಮಕೂರು: ಜಿಲ್ಲೆಯ ಪಾವಗಡ ಪಟ್ಟಣದಲ್ಲಿ ಹಾಡುಹಗಲೇ ಪತ್ರಿಕಾ ಸಂಪಾದಕ ರಾಮಾಂಜಿನಪ್ಪ ಅವರ ಮೇಲಿನ ದಾಳಿ ಖಂಡಿಸಿ, ಹಲ್ಲೆ ಮಾಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್.ಕೃಷ್ಣಮೂರ್ತಿ ಹಾಗೂ ಜಿಲ್ಲಾಧ್ಯಕ್ಷ ಜಿ.ಕರುಣಾಕರ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ನಿಯೋಗದಲ್ಲಿ ತೆರಳಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್.ಕೃಷ್ಣಮೂರ್ತಿ ಇತ್ತೀಚಿನ ದಿನಗಳಲ್ಲಿ ಪತ್ರಕರ್ತರ ಮೇಲೆ ನಿರಂತರ ದಾಳಿಗಳು ನಡೆ–ಯುತ್ತಿದ್ದು, ಜಿಲ್ಲೆಯ ಪಾವಗಡದಲ್ಲಿ ನಡೆದಂತಹ ಘಟನೆಯೇ ಇದಕ್ಕೆ ತಾಜಾ ಉದಾಹರಣೆಯಾಗಿದೆ. ಸಂವಿಧಾನದ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಪತ್ರಕರ್ತರಿಗೆ ರಕ್ಷಣೆ ಇಲ್ಲದಂತಾಗಿದೆ ಎಂದರು.


ಪಾವಗಡ ಪಟ್ಟಣದಲ್ಲಿ ಸೋಮವಾರ ರಾಮಾಂಜಿನಪ್ಪ ಅವರ ಮೇಲೆ ಹಲ್ಲೆ ಮಾಡಿದವರನ್ನು ಜಿಲ್ಲೆಯಿಂದಲೇ ಗಡಿಪಾರು ಮಾಡಬೇಕು, ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.

ಸಂಘದ ಜಿಲ್ಲಾಧ್ಯಕ್ಷ ಜಿ.ಕರುಣಾಕರ ಮಾತನಾಡಿ, ಸಮಾಜದ ಆಗು ಹೋಗುಗಳನ್ನು ಮಾಧ್ಯಮದ ಮೂಲಕ ಬಿತ್ತರಿಸಿ ಬೆಳಕು ಚೆಲ್ಲುವ ಪತ್ರಕರ್ತರಿಗೆ ಇಂದು ರಕ್ಷಣೆ ಅಗತ್ಯವಾಗಿ ಬೇಕಾಗಿದೆ. ರಾಮಾಂಜಿನಪ್ಪ ಅವರ ಮೇಲೆ ನಡೆದ ದಾಳಿ ಖಂಡನೀಯ. ಕೂಡಲೇ ಆರೋಪಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಿ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಪೊಲೀಸರು ಎಚ್ಚರ ವಹಿಸಬೇಕೆಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಎಸ್ಪಿ ಕೆ.ವಿ.ಅಶೋಕ್, ರಾಮಾಂಜಿನಪ್ಪ ಅವರ ಮೇಲೆ ಹಲ್ಲೆ ಮಾಡಿರುವವರನ್ನು ಈಗಾಗಲೇ ಬಂಧಿಸಿದ್ದು, ಎಫ್‌ಐಆರ್ ಕೂಡ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ ಸಿ.ರಂಗನಾಥ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಎನ್.ಮಂಜುನಾಥಗೌಡ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಎನ್.ಮಹೇಶ್‌ಕುಮಾರ್, ಪತ್ರಕರ್ತರಾದ ಅಕ್ಷಯ್ ಚೌದರಿ, ಶಶಿ ದೋಣಿಹಕ್ಲು, ಹರ್ಷ, ಯಶ್, ಮಹೇಶ್, ಈಶ್ವರ್, ಸತೀಶ್, ಹೇಮಂತ್, ವಿಜಯ್, ರಮೇಶ್‌ಬಾಬು, ವಿಠ್ಠಲ್, ರಾಕೇಶ್ ಸೇರಿದಂತೆ ಹಲವು ಪತ್ರಕರ್ತರು ಭಾಗವಹಿಸಿದ್ದರು.

## ಬೀದರ್ ಬಂದ್‌ಗೆ ಬೆಂಬಲ ಸೂಚಿಸಿದ ಬಿಎಸ್‌ಪಿ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ಅಂಬೇಡ್ಕರ್‌ಅಂಬೇಡ್ಕರ್ ಅನ್ನುವುದು ಒಂದು ಫ್ಯಾಷನ್ ಆಗಿಬಿಟ್ಟಿದೆ. ಅಂಬೇಡ್ಕರ ಹೆಸರನ್ನು ಪದೇ ಪದೇ ಉಚ್ಚರಿಸುವ ಬದಲು ದೇವರನ್ನು ಸ್ಮರಿಸಿದರೆ ಏಳೇಳು ಜನ್ಮಗಳಲ್ಲಿ ಸ್ವರ್ಗ ದೊರೆಯುತ್ತಿತ್ತು ಎಂದು ರಾಜ್ಯಸಭೆಯಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಅಗೌರವ ತೋರಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ಖಂಡಿಸಿ ಕರೆ ಬೀದರ್ ಬಂದ್‌ಗೆ ಬಹುಜನ ಸಮಾಜ ಪಾರ್ಟಿ (ಬಿಎಸ್ಪಿ) ಸಂಪೂರ್ಣ ಬೆಂಬಲ ಸೂಚಿಸಿದ್ದು, ಹೋರಾಟಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ಬಿಎಸ್ಪಿ ಜಿಲ್ಲಾಧ್ಯಕ್ಷ ಕಪೀಲ್ ಗೋಡಬೋಲೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದೇಶದಾದ್ಯಂತ ಗ್ರಹ ಸಚಿವ ಅಮಿತ್ ಶಾ ವಿರುದ್ಧ ಬಹುಜನ ಸಮಾಜ ಪಾರ್ಟಿ ಸೇರಿದಂತೆ ಅನೇಕ ದಲಿತಪರ, ಪ್ರಗತಿಪರ ಸಂಘಟನೆಗಳಿಂದ ಹೋರಾಟಗಳು ನಡೆಯುತ್ತಿದ್ದರೂ ಇಲ್ಲಿಯವರೆಗೆ ಬೇಜವಾಬ್ದಾರಿ ಹೇಳಿಕೆ ನೀಡಿರುವ ಅಮಿತ್ ಶಾ ರಾಜೀನಾಮೆಗೆ ಮುಂದಾಗುತ್ತಿಲ್ಲ. ಈ ಬಂದ್ ನ್ನು ಬೆಂಬಲಿಸಿ ಹಲವಾರು, ವ್ಯಾಪಾರಿಗಳು, ಮಾರುಕಟ್ಟೆಯ ವರು, ತರಕಾರಿ ಸಂಘ, ಹೋಟೆಲ್ ಮಾಲೀಕರು, ಬಜಾರ್, ಕಿರಾಣಾ ಬಜಾರ್, ಬಟ್ಟೆ ಬಜಾರ್ ಹೀಗೆ ಹಲವಾರು ಸಂಘ ಸಂಸ್ಥೆಗಳು ಬೆಂಬಲಿಸಿ ಸಹಕರಿಸಿ ಯಶಸ್ವಿಗೊಳಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು. ಹೀಗಾಗಿ ಬೀದರ್ ಬಂದ್ ಮೂಲಕ ಕೇಂದ್ರ ಸರ್ಕಾರ–ಕ್ಕೆ ಬಿಸಿ ಮುಟ್ಟಿಸಿ ಅಮಿತ್ ಶಾ ರಾಜೀನಾಮೆಗೆ ಒತ್ತಾಯಿಸಲು ಜಿಲ್ಲೆಯ ಸಮಾಜ ಪರ ಚಿಂತಕರು, ಹೋರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಬಿಎಸ್ಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಕ್ತಿಕಾಂತ ಭಾವಿದೊಡ್ಡಿ ಬೀದರ್ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಮಹೇಶ್ ಭೋಲಾ ಅವರು ಮನವಿ ಮಾಡಿದ್ದಾರೆ.

## ಸೀತಾಳಗೇರಾ; ಪಿಕೆಪಿಎಸ್ 12 ಸ್ಥಾನಗಳಿಗೆ ಅವಿರೋಧ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ತಾಲೂಕಿನ ಸೀತಾಳಗೇರಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ 12 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ನಡೆದಿದೆ. ಒಟ್ಟು 12 ನಿರ್ದೇಶಕರ ಸ್ಥಾನಗಳ ಪೈಕಿ 12 ಸ್ಥಾನಗಳಿಗೆ ಅವಿರೋಧವಾಗಿ ನೆಹರು ಶಿವರಾಜ, ಪ್ರಭಾಕರ ರೆಡ್ಡಿ, ಕೃಷ್ಣಕುಮಾರ, ಆಕಾಶ ಶಂಕರ್, ವೀರಶೆಟ್ಟಿ ಕಂಟೇಪ್ಪ, ಶರಣಪ್ಪ ಪೀರಪ್ಪ, ಸಿದ್ರಾಮ ಅಣ್ಣೇಪ್ಪ, ರಾಘವೇಂದ್ರ ಹಣಮಂತ, ಮುನೀರ ಪಟೇಲ್, ಶಾಂತಮ್ಮ ನಾಗಪ್ಪ, ಭಾಗ್ಯವಂತಿ ಶರಣಪ್ಪ ಸಾಲಗಾರರಲ್ಲದ ಮತಕ್ಷೇತ್ರದಿಂದ ಓಂಕಾರ ಶಿವರಾಜ ಅವಿರೋಧವಾಗಿ ಆಯ್ಕೆಯಾಗಿದ್ದಾ–ರೆ ಎಂದು ಚುನಾವಣಾಧಿಕಾರಿ ಸುಭಾಷ ಗಂಗಾ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ವಿಠಲರಾವ, ಗ್ರಾಮದ ಪ್ರಮುಖರಾದ ಶಿವಶರಣಪ್ಪ ಮುದುಕಪ್ಪ, ಶ್ರೀಕಾಂತ ಪಾಟೀಲ್, ಮಾಣಿಕರಾವ ಕುಲಕರ್ಣಿ, ಬಸವರಾಜ ರತ್ನಪುರೇ, ವಿಠಲ ಕಲ್ಯಾಣಿ, ಶಿವಪುತ್ರ ಕಲ್ಯಾಣಿ, ದಿಲೀಪಕುಮಾರ್ ಕುಲಕರ್ಣಿ, ಅರ್ಜುನ ಮುದನ್ನಾಳ, ರಾಜಕುಮಾರ ನಿಗೊಂಡೆ, ಈರಪ್ಪ ಹಳ್ಳಿಖೇಡ, ಶಿವಾನಂದ ಮರಕಲ್, ಸುಧಾ–ಕಾರ ಕಲ್ಯಾಣಿ, ಅನೀಲ ಭೋಟಿ, ರಾಜಕುಮಾರ ಚಂದ್ರಗೊಂಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಮೈಸೂರು, ಮಂಡ್ಯ ಬಂದ್: ಮಿಶ್ರ ಪ್ರತಿಕ್ರಿಯೆ



ಮಲ್ಲಮ್ಮ ನುಡಿ ವಾರ್ತೆ

ಮೈಸೂರು : ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂವಿಧಾನ ಶಿಲ್ಪಿ ಡಾ. ಬಿಆರ್ ಅಂಬೇಡ್ಕರ್ ಬಗ್ಗೆ ನೀಡಿರುವ ಹೇಳಿಕೆ ಖಂಡಿಸಿ ಮೈಸೂರು ಹಾಗೂ ಮಂಡ್ಯದಲ್ಲಿ ವಿವಿಧ ಸಂಘಟನೆಗಳು ಕರೆ ನೀಡಿದ್ದ ಬಂದ್ ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರಿನಲ್ಲಿ ಕೆಪಿಸಿಸಿ ವಕ್ತಾರ ಎಂ ಲಕ್ಷ್ಮಣ ನೇತೃತ್ವದಲ್ಲಿ ಪ್ರತಿಭಟನೆ ನಡೆದವು.

ಇಂದು ಮಂಗಳವಾರ ಬೆಳಗ್ಗೆಯಿಂದಲೇ ವ್ಯಾಪಾರ ವಹಿವಾಟು ಎಂದಿನಂತೆ ಆರಂಭವಾಗಿದ್ದು, ಬಂದ್ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಆರಂಭದಲ್ಲಿ ಬಸ್ ಸಂಚಾರ, ವಾಹನ ಸಂಚಾರ, ವ್ಯಾಪಾರ ವಹಿವಾಟುಗಳು ನಡೆದರೂ ನಂತರ ಅಡ್ಡಿಪಡಿಸಲಾಯಿತು. ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ವಾಹನಗಳಿಲ್ಲದೆ ಪರದಾಡಿದರು. ಮುಂಜಾಗ್ರತಾ ಕ್ರಮವಾಗಿ ಮೈಸೂರು ಬಸ್ ನಿಲ್ದಾಣದ ಬಳಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಸಿಆರ್ ವ್ಯಾನ್, ಗಸ್ತು ವಾಹನ, ಕಮಾಂಡೋ ವಾಹನ ನಿಯೋಜನೆ ಮಾಡಲಾಗಿದೆ. ದಲಿತ ಕಾರ್ಯಕರ್ತರು ಅಮಿತ್ ಶಾ ಪ್ರತಿಕೃತಿಗೆ ಚಪ್ಪಲಿಯಿಂದ ತುಳಿದರು.

ಕೇಂದ್ರ ಬಸ್ ನಿಲ್ದಾಣದ ಬಳಿ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿದೆ. ಬಸ್ ನಿಲ್ದಾಣದ ಪ್ರವೇಶ ದ್ವಾರದ ಬಳಿ ಧರಣಿ ಕುಳಿತ ಪ್ರತಿಭಟನಾನಿರತರು ಬಸ್ ಸಂಚಾರ ತಡೆದರು. ಬಸ್‌ಗಳ ಓಡಾಟ ನಿಲ್ಲಿಸಿ ಆಕ್ರೋಶ ಹೊರಹಾಕಿದರು. ಬಸ್ ನಿಲ್ದಾಣದ ಹೊರ ಭಾಗದಲ್ಲಿ ಅಮಿತ್ ಶಾ ಪ್ರತಿಕೃತಿಯ ಅಣಕು ಶವಯಾತ್ರೆ ನಡೆಸಿದರು. ಅಮಿತ್ ಶಾ ಪ್ರತಿ–ಕೃತಿಗೆ ಚಪ್ಪಲಿಯಲ್ಲಿ ಹೊಡೆದು ಆಕ್ರೋಶ ಹೊರಹಾಕಿದರು.

ಪ್ರತಿಕೃತಿಗೆ ಬೆಂಕಿ ಹಚ್ಚಲು ಪೊಲೀಸರು ಬಿಡದಿದ್ದಾಗ, ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಕೊನೆಗೂ ಅಮಿತ್ ಶಾ ಪ್ರತಿ–ಕೃತಿಗೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದರು. ಬೆಂಕಿ ಹಚ್ಚಿದ ತಕ್ಷಣ ಪೊಲೀಸರು ನೀರು ಹಾಕಿ ಬೆಂಕಿಯನ್ನು ನಂದಿಸಿದರು. ಸತ್ತೋದ ಅಮಿತ್ ಶಾ ಎಂದು ಪ್ರತಿಭಟನಾಕಾರರು ಕೂಗಿದರು. ಪ್ರತಿಭಟನೆ ಹಿನ್ನೆಲೆ ಅರ್ ಎಸ್ ಎಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಪ್ರತಿಭಟನಾಕಾರರನ್ನು ಪೊಲೀಸರು, ರಸ್ತೆ ಮಧ್ಯದಲ್ಲೇ ತಡೆದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಭಟನಕಾರರು ಆರ್‌ಎಸ್‌ಎಸ್ ಕಚೇರಿಯತ್ತ ತೆರಳದಂತೆ ಪೊಲೀಸರಿಂದ ಬ್ಯಾರಿಕೇಡ್ ಅಳವಡಿಸಿದರು.

ಇಂದು ಬೆಳಗ್ಗೆ ಡಾ.ಬಿ.ಆರ್. ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿಯು ಕರೆ ನೀಡಿರುವ ಮೈಸೂರು ಬಂದ್ ಬೆಂಬಲಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸದಸ್ಯರು ಗ್ರಾಮಾಂತರ ಬಸ್ ನಿಲ್ದಾಣ (ಸಬ್ ಅರ್ಬನ್) ಮುಂಭಾಗ ಕೆ.ಎಸ್.ಆರ್.ಟಿ.ಸಿ ಬಸ್ ಹಾಗೂ ಖಾಸಗಿ ವಾಹನಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ಬಂದ್ ನಲ್ಲಿ ವಿವಿಧ ಧಾರ್ಮಿಕ ಸಂಸ್ಥೆಗಳ ಮುಖಂಡರು ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಟೌನ್ ಹಾಲ್ ಬಳಿಯ ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು.

## ಕರ್ನಾಟಕ ಜನಸೈನ್ಯ ಸಂಘಟನೆ ವತಿಯಿಂದ ಡಿವೈಎಸ್ಪಿರವರಿಗೆ ಮನವಿ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆ ಗಂಗಾವತಿ ತಾಲೂಕನಲ್ಲಿ ಕರ್ನಾಟಕ ಜನ ಸೈನ್ಯ ಸಂಘಟನೆಯ ಜಿಲ್ಲಾಧ್ಯಕ್ಷರಾದ ರಮೇಶ್ ಕಾಳಿ ಅವರ ನೇತೃತ್ವದಲ್ಲಿ ಗಂಗಾವತಿ ಪೊಲೀಸ್ ಉಪ ವಿಭಾಗ ವರಿಷ್ಠಾಧಿಕಾರಿ ಸಿದ್ದಲಿಂಗನ ಗೌಡ ಪಾಟೀಲ್.ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಸಾರ್ವಜನಿಕಪರವಾಗಿ ಗಂಗಾವತಿ ನಗರ ಹಾಗೂ ಸುತ್ತಮುತ್ತ ಗ್ರಾಮಗಳಿಂದ ಪ್ರತಿನಿತ್ಯ ನೂರಾರು ಟಿಪ್ಪರ್ ಮತ್ತು ಟ್ರ್ಯಾಕ್ಟರ್ ಕಂಕರ್, ಮರಳು, ಮರಮ್ಮು, ಡಸ್ಟ್ ಸೇರಿದಂತೆ ನೆಲ್ಲಿನ ತವಡನ್ನು ಮತ್ತು ಇಟ್ಟಂಗಿ ಸಾಗಿಸುತ್ತಿದ್ದಾರೆ. ಇವರ್ಯಾರು ರಸ್ತೆ ಸುರಕ್ಷ ನಿಯಮಗಳನ್ನು ಹಾಗೂ ಸಾಗಾಣಿಕೆ ನಿಯಮಗಳನ್ನು ಅನುಸರಿಸುತ್ತಿಲ್ಲ. ಹಾಗೂ ಓವರ್‌ಲೋಡ್ ಮಾಡಿಕೊಂಡು ಓಡಾಡುವ ವಾಹನಗಳಿಂದ ಕಂಕರ್‌ಗಳು ರಸ್ತೆಗೆ ಬಿದ್ದು ಬೈಕ್ ಸ್ಕಿಡ್ ಆಗಿ ಬಿದ್ದು ಕೈ–ಕಾಲು ಮುರಿದು ಕೊಂಡಿರುವ ಘಟನೆಗಳು ನಡೆದಿವೆ. ಮತ್ತು ಮರಂ ಡಸ್ಟ್ ಗಾಳಿಗೆ ಹಾರಿ ಬೈಕ್ ಸಾವರರ ಕಣ್ಣಿಗೆ ಬಿದ್ದು ಅಪಾಯಕ್ಕೆ ಕಾರಣವಾಗುತ್ತಿವೆ. ಈ ವಾಹನಗಳ ನಿರ್ಲಕ್ಷ್ಯದಿಂದಾಗಿ ಜನಸಾಮಾನ್ಯರು ಪ್ರಾಣ ಪಣಕ್ಕಿಟ್ಟು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅತೀ ಭಾರವಾದ ಸರಕುಗಳಿಂದಾಗಿ ರಸ್ತೆಗಳು ಸಂಪೂರ್ಣ ಹದಗೆಟ್ಟು ಹೋಗಿವೆ. ಆದ್ದರಿಂದ ಕೂಡಲೇ ಸರಕು ಸಾಗಾಣಿಕೆ ವಾಹನ ಮಾಲೀಕರ ಸಭೆ ಕರೆದು ರಸ್ತೆ ನಿಯಮ ಹಾಗೂ ಸರಕು ಸಾಗಾಣಿಕೆಯಲ್ಲಿ ಕವಚ ಹಾಕಿಕೊಳ್ಳುವಂತೆ ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಬೇಕು ಮತ್ತು ನಗರ ಹೊರ ವಲಯ ಹಾಗೂ 'ಗ್ರಾಮೀಣ ಪ್ರದೇಶದಲ್ಲಿ ನಿಧಾನವಾಗಿ ವಾಹನಗಳನ್ನು ಚಲಾಯಿಸುವಂತೆ ಸೂಚಿಸಬೇಕು ಎಂದು ಕರ್ನಾಟಕ ಜನಸೈನ್ಯ ವತಿಯಿಂದ ಗಂಗಾವತಿ ನಗರ ಡಿ.ವೈ.ಎಸ್.ಪಿ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾಧ್ಯಕ್ಷರಾದ ರಮೇಶ್ ಕಾಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ.ಗೌಸ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಆರ್.ಕೆ.ರಮೇಶ್, ಗಂಗಾವತಿ ತಾಲೂಕ ಕಾರ್ಮಿಕ ಅಧ್ಯಕ್ಷರಾದ ಎ.ಎಸ್.ಅಂಜಿನಪ್ಪ, ಕಾರಟಗಿ ತಾಲೂಕು ಅಧ್ಯಕ್ಷರಾದ ಮುರುಳಿಧರ್, ಗಂಗಾವತಿ ತಾಲೂಕು ಉಪಾಧ್ಯಕ್ಷರಾದ ಶಾಂತಕುಮಾರ್, ಪ್ರಧಾನ ಕಾರ್ಯದರ್ಶಿಯಾದ ಪರಶುರಾಮ ಕಾಳಿ, ಶಿವಕುಮಾರ್, ಸೇರಿದಂತೆ ಮಾಧ್ಯಮ ಸಲಹೆಗಾರಾರದ ನಾಗರಾಜ್ ಕೊಟ್ನೆಕಲ್ ಅವರು ಈ ಸಂದರ್ಭದಲ್ಲಿ ಉಪಸಿತರಿದ್ದರು.

### ಬೀದರ– ಕಮಲನಗರ ಹೆದ್ದಾರಿ ವೀಕ್ಷಿಸಿದ ಸಚಿವ ಸತೀಷ ಜಾರಕಿಹೊಳಿ

## ಹೊಸ ರಸ್ತೆ ನಿರ್ಮಿಸಿಕೊಡಲು ಶಾಸಕ ಪ್ರಭು ಚವ್ಹಾಣ ಮನವಿ



(ಪರಮೇಶ ರಾಂಪುರೆ)

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಶಾಸಕರಾದ ಪ್ರಭು ಬಿ.ಚವ್ಹಾಣ ಅವರ ಮನವಿಯ ಮೇರೆಗೆ ಲೋಕೋಪಯೋಗಿ ಸಚಿವರಾದ ಸತೀಷ ಜಾರಕಿಹೊಳಿ ಅವರು ಜ.7ರಂದು ಬೀದರ–ಕಮಲನಗರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ವೀಕ್ಷಿಸಿದರು.

ಬೆಳಗಾವಿ ಅಧಿವೇಶನದಲ್ಲಿ ರಾಷ್ಟ್ರೀಯ ಹೆದ್ದಾರಿ ಕಳಪೆಯಾಗಿರುವ ಬಗ್ಗೆ ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದರು. ಜನರ ಜೀವಕ್ಕೆ ಸಂಚಕಾರವಾಗಿ ಪರಿಣಮಿಸಿರುವ ರಸ್ತೆಯನ್ನು ಖುದ್ದಾಗಿ ವೀಕ್ಷಿಸಬೇಕೆಂದು ಮನವಿ ಮಾಡಿದ್ದರು. ಅದರಂತೆ ಸಚಿವರು ಕಾಮಗಾರಿಯನ್ನು ಖುದ್ದಾಗಿ ಪರಿಶೀಲಿಸಿದರು.

ರಸ್ತೆ ತುಂಬೆಲ್ಲ ಬಿರುಕುಗಳು ಬಿಟ್ಟಿರುವುದನ್ನು ಕಂಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಇಷ್ಟೊಂದು ಲೋಪಗಳಿದ್ದರೆ ಹೇಗೆ ? ಎಂದು ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. ಈ ರಸ್ತೆಯನ್ನು ತುರ್ತಾಗಿ ಸರಿಪಡಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ವೇಳೆ ಸಚಿವರಿಗೆ ಮನವಿ ಪತ್ರ ಸಲ್ಲಿಸಿದ ಶಾಸಕ ಪ್ರಭು ಚವ್ಹಾಣ ಅವರು, ನನ್ನ ಮತಕ್ಷೇತ್ರದ ಜನತೆ ಜಿಲ್ಲಾ ಕೇಂದ್ರಕ್ಕೆ ಸಂಚರಿಸಲು ಅನುಕೂಲವಾಗಬೇಕೆಂಬ ಉದ್ದೇಶದಿಂದ ಬಹಳಷ್ಟು ಶ್ರಮ ವಹಿಸಿ ಕಾಮಗಾರಿಗೆ ಅನುಮೋದನೆ ಪಡೆಯಲಾಗಿದೆ. 2018ರಲ್ಲಿ ಆರಂಭವಾದ ಈ ಕಾಮಗಾರಿಯ ಬಗ್ಗೆ ಆರಂಭದಿಂದಲೂ ದೂರುಗಳು ಬರುತ್ತಿವೆ. ಕೆಲಸ ಸಂಪೂರ್ಣ ಕಳಪೆಯಾಗಿರುವುದರಿಂದ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಇಲ್ಲಿವರೆಗೆ 300ಕ್ಕೂ ಹೆಚ್ಚು ಅಪಘಾತಗಳು ಸಂಭವಿಸಿದ್ದು, 130ಕ್ಕೂ ಹೆಚ್ಚು ಜನ ಮೃತಪಟ್ಟು 500ಕ್ಕೂ ಹೆಚ್ಚು ಜನ ಗಾಯಗೊಂಡಿರುವ ಬಗ್ಗೆ ವರದಿಗಳಾಗಿವೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಿರ್ಲಕ್ಷ್ಯತನದಿಂದಾಗಿ 54.37 ಕಿ.ಮೀ ಉದ್ದದ ರಸ್ತೆ ಆರಂಭದಿಂದ ಕೊನೆವರೆಗೆ ಸಂಪೂರ್ಣ ಕೆಟ್ಟು ಹೋಗಿದೆ.

ಒಂದೆರಡು ಕಡೆಗಳಲ್ಲಿ ಕೆಟ್ಟಿದ್ದರೆ ದುರಸ್ತಿಯಿಂದ ಸರಿಹೋಗಬಹುದಿತ್ತು. ಆದರೆ ಸಂಪೂರ್ಣ ರಸ್ತೆ ಕೆ–ಟ್ಟು ಹೋಗಿರುವುದರಿಂದ ದುರಸ್ತಿ ಕಾರ್ಯದಿಂದ ಪರಿಸ್ತಿತಿ ಸುಧಾರಿಸುವುದಿಲ್ಲ. ಹಾಗಾಗಿ ಸದರಿ ರಸ್ತೆ ಪುನಃ ಹೊಸದಾಗಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೆಯೇ ತಪ್ಪಿತಸ್ಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಮನವಿ ಮಾಡಿದರು.

## ದಿವಾಳಿಯಾದ ರಾಜ್ಯ ಸರ್ಕಾರ ಆರ್.ಅಶೋಕ್ ಕಿಡಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ, ಜ.4: ರಾಜ್ಯ ಸರ್ಕಾರ ಪಾಪರ್ ಆಗಿದೆ. ಇದು ಮನೆ ಹಾಳು ಸರ್ಕಾರ ಎಂದು

ನಗರದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಅವರು ಕಿಡಿ ಕಾರಿದರು.

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಸಪಂಚಾಯತ್‌ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಪಾತ್ರವಿದ್ದು, ಅವರನ್ನು ಸಂಪುಟದಿಂದ ಕೈಬಿಡಬೇಕೆಂದು ಒತ್ತಾಯಿಸಿ ಪ್ರಿಯಾಂಕ್ ನಿವಾಸಕ್ಕೆ ಮುತ್ತಿಗೆ ಹಾಕಲು ಬೃಹತ್ ಕಾಲ್ನಡಿಗೆ ಜಾಥಾ ನಡೆಸಲು ನಗರಕ್ಕೆ ಆಗಮಿಸಿದ ಅವರು ಮಾಧ್ಯಮದರೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ಸರಣಿ ಆತ್ಮಹತ್ಯೆ ಆಗ್ತಾ ಇದೆ. ಮತ್ತೊಂದು ಕಡೆ ರೈತರ ಆತ್ಮ ಹತ್ಯೆ ಆಗ್ತಾ ಇದೆ

ಹಣಕ್ಕಾಗಿ ರಾಜ್ಯದಲ್ಲಿ ವಸೂಲಿ ದಂಧೆ ನಡೀತಾ ಇದೆ. ಕಾಂಗ್ರೆ ನ ದುರಾಸೆಗೆ ಜನ ಸಾವನ್ನಪ್ಪುತ್ತಿದ್ದಾರೆ. ಕಾಂಟ್ರಾಕ್ಟರ್ ಬಳಿ ಸುಲಿಗೆ ಮಾಡೋದು ಮನೆ ಮಾತಾಗಿದೆ. ರಾಜ್ಯದಲ್ಲಿ ಇರೋದು ಪಸರ್‌ಂಟೇಜ್ ಸರ್ಕಾರ .ಸರ್ಕಾರಿ ಕಚೇರಿಗಳಲ್ಲಿ ಲಂಚ ಜಾಸ್ತಿ ಆಗಿದೆ ಎಂದು ಹರಿಹಾಯ್ದರು.

ಇದೆ ರೀತಿ ಮುಂದುವರೆದರೆ ಕರ್ನಾಟಕ ಬಿಹಾರ್ ತರ ಆಗುತ್ತದೆ. ಎಲ್ಲ ದರ ಹೆಚ್ಚಳ ಆಗುತ್ತಿದೆ. ಬಿಜೆಪಿ ಅವರು 10 ವರ್ಷದಿಂದ ತೆರಿಗೆ ಭಾರ ಹಾಕಿಲ್ಲ. ಸಾರಿಗೆ ಇಲಾಖೆಗೆ ನಾನು ಬಂದಾಗ ಸಾವಿರ ಕೋಟಿ ಲಾಭ ಮಾಡಿದ್ದೇನೆ. ಆದರೆ ಈಗ ಏನ್ ಆಗ್ತಿದೆ ? ಎಂದು ಪ್ರಶ್ನಿಸಿದರು.

## 9 ಜನ ಜೂಜುಕೋರರ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ, ಜ.7–ಫರಹತಾಬಾದ ಪೊಲೀಸ್ ಠಾಣೆ ವ್ಯಾಪ್ತಿಯ ಸರಡಗಿ ಸೀಮಾಂತರದ ಹೊಲದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ದಿಲೀಪಕುಮಾರ, ಸಿಬ್ಬಂದಿಗಳಾದ ಮೃತ್ಯುಂಜಯ ಹಿರೇಮಠ, ಯಲ್ಲಪ್ಪ, ಅಶೋಕ, ಶಿವಕುಮಾರ, ಫರಹತಾಬಾದ ಪೊಲೀಸ್ ಠಾಣೆಯ ಸಿಬ್ಬಂದಿ ಗಡ್ಡೆಪ್ಪ ಅವರು ದಾಳಿ ನಡೆಸಿ 9 ಜನ ಜೂಜುಕೋರರನ್ನು ಬಂಧಿಸಿದ್ದಾರೆ.

ಶಿವಪುತ್ರ ಸುತಾರ, ರುಕುಮ್ ಪಟೇಲ್, ಸಂಜುಕುಮಾರ ಪವಾರ, ಅನಿಲಕುಮಾರ ಜೀವನ, ಶಾಂತಪ್ಪ ಅಸ್ಟಗಿ, ಶಿವಕುಮಾರ ಬಾಗೇವಾಡಿ, ಮಂಜುನಾಥ ಹೊಸಗೌಡರ್, ನಂದಿಕಿಶೋರ ಪಾಟೀಲ, ನಾಗೇಶ ಕೆಂಭಾವಿ ಎಂಬುವವರನ್ನು ಬಂಧಿಸಿ 110620 ರೂ.ನಗದು ಮತ್ತು 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಾರಸುದಾರರ ಪತ್ತೆಗೆ ರೈಲ್ವೇ ಪೊಲೀಸರ ಮನವಿ

ರಾಯಚೂರು ಜ.07– ಇಲ್ಲಿನ ರೈಲ್ವೇ ಪೊಲೀಸ್ ಠಾಣೆ ವ್ಯಾಪ್ತಿಯ ಯಾದಗಿರಿ ರೈಲ್ವೇ ನಿಲ್ದಾಣದ ಪ್ಲಾಟ ಪಾರ್ಮ ನಂ.01ರಲ್ಲಿ ರೈಲ್ವೇ ಕೀ.ಮೀ ನಂ; 632/20 ಡೌನ್‌ಲೈನ್ ಹತ್ತಿರ 2024ರ ಡಿ.27ರಂದು ಸುಮಾರು 35 ವರ್ಷದ ಒಬ್ಬ ಅಪರಿಚಿತ ಗಂಡಸು ಸ್ವಾಭಾವಿಕವಾಗಿ ಮೃತಪಟ್ಟಿದ್ದು, ಯು.ಡಿ.ಆರ್ ನಂ; 77/2024 ಕಲಂ194 ಬಿ.ಎನ್.ಎಸ್.ಎಸ್‌ರಡಿ ಪ್ರಕರಣ ದಾಖಲಾಗಿದೆ. ಮೃತನ ಚಹರೆ ಪಟ್ಟಿಯ ವಿವರ; ವಯಸ್ಸು ಸುಮಾರು 35 ವರ್ಷ, ಎತ್ತರ ಸುಮಾರು 5.6 ಅಡಿ, ಕೋಲು ಮುಖ, ಉದ್ದವಾದ ಮೂಗು, ಕಪ್ಪು ಮೈಬಣ್ಣ ಸಾಧಾರಣ ಮೈಕಟ್ಟು, ತಲೆಯಲ್ಲಿ ಎರಡು ಇಂಚು ಉದ್ದದ ಕಪ್ಪು ಕೂದಲು ಮತ್ತು ಮೀಸೆ ಗಡ್ಡ ಹೊಂದಿರುತ್ತಾನೆ. **ಬಟ್ಟೆಬರೆಗಳ ವಿವರ:** ಒಂದು ಹಳದಿ ಬಣ್ಣದ ಟೀ ಶರ್ಟ್, ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಬಲಗೈಯಲ್ಲಿ ಕೆಂಪು ಬಣ್ಣದ ದಾರ ಹೊಂದಿದ್ದು, ಸದರಿ ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಮೃತನ ಹೋಲಿಕೆಯ ಗಂಡಸು ಕಾಣೆ–ಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂ.ನಂ: (08532) 231716, ಮೊ.ನಂ:9480802111, ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080–22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂತರಾಷ್ಟ್ರೀಯ ಪುಸ್ತಕ ಮೇಳ 3ನೇ ಆವೃತ್ತಿಯಲ್ಲಿ ಭಾಗವಹಿಸಿದ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಜನವರಿ 07–ಕೇರಳದ ರಾಜ್ಯದ ತಿರುವನಂತಪುರದಲ್ಲಿರುವ ವಿಧಾನಸಭೆ ಸಚಿವಾಲಯದಲ್ಲಿ ಹಮ್ಮಿಕೊಳ್ಳಲಾದ ಅಂತರಾಷ್ಟ್ರೀಯ ಪುಸ್ತಕ ಮೇಳ– 3ನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರು ಭಾಗವಹಿಸಿದರು.

ಕೇರಳ ವಿಧಾನಸಭೆಯ ಸಭಾಧ್ಯಕ್ಷರಾದ ಎ.ಎನ್.ಶಮೀರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ಕೇರಳ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪುಸ್ತಕ ಮೇಳವನ್ನು ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್, ಕೇರಳ ರಾಜ್ಯದ ಸಚಿವ ಸಂಪುಟದ ಸದಸ್ಯರಾದ ವಿ.ಶಿವನ ಕುಟ್ಟಿ, ಸಾಜಿ ಚೆರಿಯನ್, ಜಿ.ಆರ್.ಅನಿಲ್, ಲೇಖಕ ದೇವದತ್ ಪಟ್ಟನಾಯಕ್ ಅವರು ಉಪಸ್ಥಿತರಿದ್ದರು.

ಈ ಸಂದರ್ಭಲ್ಲಿ ಲೇಖಕ ಎಂ.ಮುಕುಂದನ್ ಅವರನ್ನು ಸನ್ಮಾನಿಸಲಾಯಿತು.

## ಕೋವಿಡ್ ಹಗರಣ ಮುಚ್ಚಿಹಾಕಲು ಸಚಿವ ಪ್ರಿಯಾಂಕ್ ಖರ್ಗೆ
# ತೇಜೋವಧೆಗೆ ಯತ್ನ: ಪ್ರದೀಪ್ ಜಂಜೀರೆ



ಮಲ್ಲಮನುಡಿವಾರ್ತೆಬೀದರ: ಜ. 07 : ಬಿಜೆಪಿ ಸರ್ಕಾರ ಕೋವಿಡ್ ಸಂದರ್ಭದಲ್ಲಿ ಮಾಡಿದ ಕೋಟ್ಯಾಂತರ ರೂಪಾಯಿ ಹಗರಣಗಳ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನೆ ಮಾಡಿದ್ದರಿಂದ ಅವರ ತೇಜೋವಧೆ ಮಾಡಲು ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣವನ್ನು ರಾಜಕೀಯ ದ್ವೇಷಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ದಲಿತ ಛಲವಾದಿ ಮಹಾಸಭಾ ಅಧ್ಯಕ್ಷ ಪ್ರದೀಪ್ ಜಂಜೀರೆ ಆರೋಪಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಕ–ರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಛಲವಾದಿ ನಾರಾಯಣಸ್ವಾಮಿ ಅವರನ್ನು ಬಿಜೆಪಿ ಖರ್ಗೆ ಕುಟುಂಬವನ್ನು ಟಾರ್ಗೆಟ್ ಮಾಡಲೆಂದೇ ಬಳಸಿಕೊಳ್ಳುತ್ತಿದ್ದಾರೆ. ಆದರೆ ನಾರಾಯಣಸ್ವಾಮಿ ನಿಜವಾದ ಛಲವಾದಿ ಅಲ್ಲ. ಅವರು ಚೌದ್ರಿಯಾಗಿದ್ದಾರೆ ಎಂದು ಪ್ರತಿಪಾದಿಸಿದರು. ಕೋವಿಡ್ ಹಗರಣದಲ್ಲಿ ಬಿಎಸ್‌ವೈ ಹೆಸರು ಕೇಳಿಬಂದಿರುವುದರಿಂದ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನೆ ಮಾಡಿದ್ದೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಗುತ್ತಿದೆ. ಅಲ್ಲದೇ ಸಚಿನ್ ಪಾಂಚಾಳ್ ಒಬ್ಬ ಗುತ್ತಿಗೆದಾರ ಅಹುದೋ ಇಲ್ಲವೋ ಎಂಬುದು ಗುಪ್ತವಾಗಿದೆ. ಈಗಾಗಲೇ ಸಿಐಡಿ ತನಿಖೆಯಾಗುತ್ತಿದೆ. ಆದರೆ ಇದರ ಮೇಲೆ ನಂಬಿಕೆ ಇಲ್ಲದೆ ಸಿಬಿಐಗೆ ವಹಿಸಿ ಎನ್ನುವುದು ಎಷ್ಟು ಸೂಕ್ತ? ಎಂದು ಪ್ರದೀಪ ಪ್ರಶ್ನಿಸಿದರಲ್ಲದೆ ಖರ್ಗೆ ಕುಟುಂಬದ ಆಶೀರ್ವಾದದಿಂದ ಎಲ್ಲಾ ರೀತಿಯ ಅಧಿಕಾರ ಅನುಭವಿಸಿದ ಛಲವಾದಿ ನಾರಾಯಣ ಸ್ವಾಮಿ ಅವರನ್ನು ಖರ್ಗೆ ಕುಟುಂಬದ ವಿರುದ್ಧ ಮಾತನಾಡಲೆಂದೇ ಬಳಸಿಕೊಳ್ಳುತ್ತಿರುವುದು ದುರಂತದ ಸಂಗತಿ. ಒಟ್ಟಿನಲ್ಲಿ ಕೋವಿಡ್ ಹಗರಣ ಮುಚ್ಚಿಹಾಕಲು ಪ್ರಿಯಾಂಕ್ ಹೆಸರು ಮುನ್ನಲೆಗೆ ತರುತ್ತಿರುವುದು ಖಂಡನೀಯ. ಆ.9 ರಂದು ಬೀದರ ಬಂದ್‌ಗೆ ಕರೆ ನೀಡಿರುವುದಕ್ಕೆ ನಮ್ಮ ದಲಿತ ಛಲವಾದಿ ಮಹಾಸಭೆಯ ಸಂಪೂರ್ಣ ಬೆಂಬಲವಿದೆ ಎಂದು ಪ್ರದೀಪ್ ಜಂಜಿರೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅಹಿಂದ ಒಕ್ಕೂಟದ ಜಿಲ್ಲಾಧ್ಯಕ್ಷ ತುಕಾರಾಮ ಚಿಮಕೊಡ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಚಿನ ಪಂಚಾಳ ಆತ್ಮಹತ್ಯೆ ಖಂಡಿಸಿ
# ವಿಶ್ವಕರ್ಮ ಸಮಾಜದಿಂದ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.7: ಸಚಿನ ಪಂಚಾಳ ವಿಶ್ವಕರ್ಮ ಸಮಾಜ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿತು. ನಗರದ ವಿಶ್ವಕರ್ಮ ಸಮಾಜ ಸಂಘ, ಸುವರ್ಣಕಾರ ಸಂಘ, ಗಜಾನನ ತರುಣ ಸಂಘ, ವಿದ್ಯಾ ವಿಕಾಸ ಸಂಸ್ಥೆಯ ಮಹಿಳಾ ಮಂಡಲ ಪದಾಧಿಕಾರಿಗಳು, ಸದಸ್ಯರು ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಖಿಲ ಕರ್ನಾಟಕ ವಿಶ್ವ ಬ್ರಾಹ್ಮಣ ಮಠಾಧಿಪತಿಗಳ ಹಾಗೂ ಪೀಠಾಧಿಪತಿಗಳ ಒಕ್ಕೂಟದ ರಾಜ್ಯ ಉಪಾಧ್ಯಕ್ಷರಾದ ಪೂಜ್ಯ ಜಗನ್ನಾಥ ಸ್ವಾಮೀಜಿ ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಸರಕಾರದ ನಿರ್ಲಕ್ಷವನ್ನು ಸಮಾಜ ಸಹಿಸುವುದಿಲ್ಲ, ಸಾವಿನ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಆ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಗದ್ದನಗಿರಿ ಮಠದ ಪೂಜ್ಯರಾದ ಮಳೆಯಪ್ಪಯ್ಯ ಸ್ವಾಮಿಗಳು ಮಾತನಾಡಿ, ಸಚಿನ ಸಾವಿಗೆ ನ್ಯಾಯ ಸಿಗುವರೆಗೂ ಹೋರಾಟ ನಿರಂತರವಾಗಿ ನಡೆಯಲಿದೆ. ಸಚಿನ ಪಂಚಾಳ ಆತ್ಮಹತ್ಯೆಗೆ ಕಾರಣರಾದವರನ್ನು ಬಂಧಿಸಿ ಶಿಕ್ಷೆ ವಿಧಿಸಬೇಕೆಂದರು.

ವಿಶ್ವಕರ್ಮ ಸಮಾಜದ ಅಧ್ಯಕ್ಷ ಮೌನೇಶ ಪತ್ತಾರ, ವಿಶ್ವಕರ್ಮ ವಂಶಿ ಸೇನಾ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಪತ್ತಾರ, ನಾಗೇಶ ಬರಗಿ, ಸಂಗಣ್ಣ ಹಡಗಲಿ, ಶ್ರೀಕಾಂತ ಪತ್ತಾರ, ನೀತಿನ ಪತ್ತಾರ, ಮೌನೇಶ ಪತ್ತಾರ ಕಿಡದೂರ, ಮೌನೇಶ ಬಡಿಗೇರ, ಸಿ.ಎಮ್.ಪತ್ತಾರ, ಸಂಜು ಪತ್ತಾರ, ಮೌನೇಶ ಹೆರಕಲ್, ವಿನೋದ ಸೋನಾರ, ರವಿ ಬಡಿಗೇರ ಸೇರಿದಂತೆ ಅನೇಕರು ಭಾಗವಹಿಸಿದ್ದರು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

## ಸಚಿನ್ ಪಂಚಾಳ್ ಸಾವಿನಲ್ಲಿ ಖರ್ಗೆ ಪಾತ್ರವಿಲ್ಲ ಬಿಜೆಪಿ
# ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ: ದರ್ಶನಾಪುರ್




ಮಲ್ಲಮ್ಮ ನುಡಿ ವಾರ್ತೆ

ಮಲ್ಲಿಕಾರ್ಜುನ್ ಮಳಿಕೇರಿ

ಶಹಾಪುರ:ಜ.7: ಸಚಿನ್ ಪಾಂಚಾಳ್ ಸಾವಿನ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆಗೂ ಸಂಬಂಧವೇ ಇಲ್ಲಾ. ಡೆತ್ ನೋಟಲ್ಲಿ ಅವರ ಹೆಸರಿನ ಉಲ್ಲೇಖವಿಲ್ಲ. ಅವರ ವಿರುದ್ಧ ಯಾವುದೇ ಸಾಕ್ಷಾಧಾರ ಲಭ್ಯವಾಗಿಲ್ಲ. ಸುಖಸುಮ್ಮನೆ ಬಿಜೆಪಿ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಹೀಗೆ ಮಾಡುತ್ತಿದ್ದಾರೆ ಎಂದು ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ನಗರಸಭೆ ಆವರಣದಲ್ಲಿ (ಮಂಗಳವಾರ ಜ.07) ನಡೆದ ಆಶ್ರಯ ಸಮಿತಿ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೂಡಾ ಹೆಸರಲ್ಲಿ ಸುಳ್ಳು ಆರೋಪ ಮಾಡಿದರು. ಈಗ ಅದು ಎಲ್ಲಿ ಹೋಯ್ತು. ದೇವೆಗೌಡ, ಯಡಿಯೂರಪ್ಪ ಒಬ್ಬರಿಗೊಬ್ಬರು ಆರೋಪಗಳನ್ನು ಮಾಡಿದರು ಈಗ ಇಬ್ಬರು ಸೇರಿ ಮೈತ್ರಿ ಮಾಡಿಕೊಂಡು ಚುನಾವಣೆ ಮಾಡಿದರು. 60% ಸರ್ಕಾರ ಎಂದು ಬಿಜೆಪಿ ಆರೋಪ ಮಾಡುತ್ತಿದೆ ಇನ್ನೊಂದೆಡೆ ಅಭಿವೃದ್ಧಿಗೆ ಹಣ ಇಲ್ಲ ಎನ್ನುತ್ತಾರೆ. ಅಭಿವೃದ್ಧಿಗೆ ದುಡ್ಡಿಲ್ಲ ಎಂದರೆ ಕೆಲಸಗಳು, ಭ್ರಷ್ಟಚಾರ ನಡೆಯಲು ಹೇಗೆ ಸಾಧ್ಯ. ಮೃತ ಸಚಿನ್ ಪಾಂಚಾಳ್‌ನ ಸಾವಿನಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದ್ದು ವಿಜಯೇಂದ್ರ, ಚಂದು ಪಾಟೀಲ್ ಯಾಕೆ ಮಾಡಿರಬಾರದು ಎಂದು ಪ್ರಶ್ನಿಸಿದ್ದಾರೆ. ಇದನ್ನೂ ಓದಿ: ಭದ್ರಾಮೇಲ್ದಂಡೆ ಯೋಜನೆಗೆ ಕೇಂದ್ರದ ಅನುದಾನ ಕಡಿತ ಸಂಭವನಗರದ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆರಿಗೆ ವೈದ್ಯರಿಲ್ಲದೇ ಗರ್ಭಿಣಿಯರು ಆಸ್ಪತ್ರೆಗೆ ಬರಲು ಹಿಂದೇಟು ಹಾಕುತ್ತಿದ್ದಾರೆ ಎಂದು ಪತ್ರಕರ್ತರ ಪ್ರಶ್ನೇಗೆ ಉತ್ತರಿಸಿದ ಸಚಿವರು, ಆಸ್ಪತ್ರೆಗೆ ಬರುವ ವೈದ್ಯರನ್ನೇ ಹೊಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಹಗುರವಾಗಿ ಮಾತನಾಡಿ ಜಾರಿಕೊಂಡರು.

# ವಿಮೆ ಹಣಕ್ಕಾಗಿ ಅಪ್ಪನ ಕೊಂದ ಮಗನ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.7: ವಿಮೆ ಹಣಕ್ಕಾಗಿ ಸ್ವಂತ ತಂದೆಯನ್ನು ಕೊಂದು ಅಪಘಾತದ ಕಥೆ ಹೆಣೆದು ಓಡಾಡಿಕೊಂಡಿದ್ದ ಮಗನನ್ನು ಮಾಡಬೂಳ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸತೀಶ್‌ಬಂಧಿತಆರೋಪಿಯಾಗಿದ್ದು, ಈತನೊಟ್ಟಿಗೆ ಸೇರಿ ಕೊಲೆಗೆ ಮಾಸ್ಟರ್ ಪ್ಲಾನ್ ರೂಪಿಸಿದ ಸತೀಶ್ ಗೆಳೆಯರಾದ ಅರುಣ್, ಯುವರಾಜ್ ಹಾಗೂ ರಾಕೇಶ್ ಎಂಬಾತನನ್ನು ಸಹ ಬಂಧಿಸಲಾಗಿದೆ. ಜುಲೈ 8ರಂದು ಸತೀಶ್ ತನ್ನ ತಂದೆ ಕಾಳಿಂಗರಾವ್ ಜೊತೆ ಬೈಕ್ ಮೇಲೆ ಬರುತ್ತಿದ್ದ ವೇಳೆ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಬೆಣ್ಣೂರ್ (ಬಿ) ಕ್ರಾಸ್ ಬಳಿ ಅಪಘಾತ ಸಂಭವಿಸಿ ಕಾಳಿಂಗರಾವ್ ಸಾವನ್ನಪ್ಪಿದ್ದರು. ಸಣ್ಣ ಪುಟ್ಟ ಗಾಯಗಳೊಂದಿಗೆ ಸತೀಶ್ ಪ್ರಾಣಾಪಾಯದಿಂದ ಪಾರಾಗಿದ್ದ. ಈ ಘಟನೆ ಕುರಿತು ಮಾಡಬೂಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿದ ಬಳಿಕ ಬೆಚ್ಚಿ ಬೀಳಿಸುವ ಅಂಶ ಬಯಲಿಗೆ ಬಂದಿದ್ದು, ಹೋಟೆಲ್ ಉದ್ಯಮಕ್ಕೆ ಕೈ ಹಾಕಿ ವಿಪರೀತ ಸಾಲ ಮಾಡಿಕೊಂಡಿದ್ದ ಸತೀಶ್ ತನ್ನ ತಂದೆಯನ್ನು ಅಪಘಾತದ ನೆಪದಲ್ಲಿ ಕೊಂದಿದ್ದಾದರೆ ಅವರ ಹೆಸರಿನಲ್ಲಿರುವ ವಿಮೆ ಹಣ ಬಳಸಿಕೊಂಡು ತನ್ನ ಸಾಲ ತೀರಿಸಲು ತಂತ್ರ ರೂಪಿಸಿದ್ದ ಎಂಬುದು ತನಿಖೆಯಿಂದ ಬಯಲಾಗಿದೆ. ಇಷ್ಟಕ್ಕೂ ತನ್ನ ತಂದೆಯನ್ನು ಕೊಲ್ಲುವ ದುರುದ್ದೇಶದಿಂದಲೇ ಅವರ ಹೆಸರಿನಲ್ಲಿ ಸತೀಶ್ ಎರಡು ವಿಮೆ ಮಾಡಿಸಿದ್ದ. ಅಪಘಾತದ ಬಳಿಕ ಒಂದು ವಿಮೆ ಕಂಪನಿಯಿಂದ ಅದಾಗಲೇ ರೂ.5 ಲಕ್ಷ ವಿಮೆ ಪಡೆದಿದ್ದ. ಮತ್ತೊಂದು ವಿಮೆ ಕಂಪನಿಯಿಂದ ರೂ.22 ಲಕ್ಷ ವಿಮೆ ಹಣ ಪಡೆಯಲು ಪ್ರಯತ್ನ ನಡೆಸಿದ್ದ. ಆದರೆ ತನಿಖೆ ವೇಳೆ ಸತೀಶ್ ವರ್ತನೆಯ ಕುರಿತು ಪೊಲೀಸರಿಗೆ ಸಂಶಯ ಕಾಡಿದ್ದರಿಂದ ತನಿಖೆಯ ಆಳ ಮತ್ತು ಅಗಲ ವಿಸ್ತರಿಸಿದ ಪೊಲೀಸರು ಸತೀಶ್ ತನ್ನ ಗೆಳೆಯ ಅರುಣ ನೀಡಿದ ಮಾಸ್ಟರ್ ಪ್ಲಾನ್ ಪ್ರಕಾರ ತಂದೆಯ ಕೊಲೆಗೆ ವ್ಯವಸ್ಥಿತ ಸಂಚು ರೂಪಿಸಿರುವುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ.

ಅನುಮಾನದ ಬೆನ್ನು ಹತ್ತಿದ ಪೊಲೀಸರು ಸತೀಶನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹೋಟೆಲ್ ದಂಧೆ ಕೈಕೊಟ್ಟ ಕಾರಣಕ್ಕಾಗಿ ವಿಪರೀತ ಸಾಲವಾಗಿತ್ತು. ಇದರ ಪರಿಣಾಮವಾಗಿ ಸಾಲಗಾರರ ಕಾಟ ಹೆಚ್ಚಾಗಿತ್ತು. ಹಾಗಾಗಿ ತನ್ನ ತಂದೆಯನ್ನು ಕೊಂದರೆ ಅವರ ಹೆಸರಿನಲ್ಲಿರುವ ವಿಮೆ ಹಣ ಪಡೆದು ಸಾಲ ತೀರಿಸಬಹುದು ಎಂಬ ಲೆಕ್ಕಾಚಾರದೊಂದಿಗೆ ಈ ಕೃತ್ಯ ಎಸಗಿದ್ದಾಗಿ ಆತ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

# ಮಾನವೀಯತೆ ಮೆರೆದ ಯೋಗ ಲಕ್ಷ್ಮೀ



ಮಲ್ಲಮ್ಮ ನುಡಿ ವಾರ್ತೆ

ಹೊಸಪೇಟೆ: ಇಲ್ಲಿನ ತಾಲೂಕು ಕಚೇರಿ ಮುಂದೆ ಸತತ ಮೂರು ದಿನಗಳ ಕಾಲ ಛಳಿಯಲ್ಲಿ ನರಳುತ್ತಿದ್ದ ವೃದ್ಧನೋರ್ವ ಸಾವಿಗೀಡಾಗಿದ್ದು ಹೊಸಬೆಳಕು ಸೇವಾ ಸಂಸ್ಥೆಯ ಯೋಗ ಲಕ್ಷ್ಮೀ ಅವರು ಅಂತ್ಯ ಸಂಸ್ಕಾರ ಮಾಡಿ ಮಾನವೀಯತೆ ಮೆರೆದಿದ್ದಾರೆ.

ಮೂಲತಃ ಬಳ್ಳಾರಿಯವರಾದ ತಿಮ್ಮಪ್ಪ(65) ಎನ್ನುವ ವೃದ್ಧನನ್ನು ಕಳೆದ ಒಂದು ವಾರದ ಹಿಂದೆಯೇ ಯೋಗ ಲಕ್ಷ್ಮೀ ಅವರು ಮಾತನಾಡಿಸಿದ್ದರು. ಮಾಧ್ಯಮದವರು ನೀಡಿದ ಮಾಹಿತಿ ಮೇರೆಗೆ ಯೋಗ ಲಕ್ಷ್ಮೀ ಅವರು ತಹಶೀಲ್ದಾರ್ ಕಚೇರಿ ಬಳಿ ಮಲಗಿದ್ದ ವೃದ್ಧ ತಿಮ್ಮಪ್ಪನನ್ನು ವಿಚಾರಿಸಿದಾಗ, ನಮ್ಮದು ಬಳ್ಳಾರಿ. ನನಗೆ ಮೂವರು ಮಕ್ಕಳಿದ್ದಾರೆ. ಅವರು ಇಲ್ಲಿ ಬಂದು ಬಿಟ್ಟು ಹೋದರು ಎಂದು ಹೇಳಿಕೊಂಡಿದ್ದರು.

ಚಳಿಯಿಂದ ನರಳುತ್ತಿದ್ದ ವೃದ್ಧನನ್ನು ಕೂಡಲೇ ನಗರದ ಸರ್ಕಾರಿ ನೂರು ಹಾಸಿಗೆ ಆಸ್ಪತ್ರೆಗೆ ದಾಖಲಿಸಿ ಯೋಗ ಲಕ್ಷ್ಮೀ ಅವರು ಚಿಕಿತ್ಸೆ ಕೊಡಿಸಿದ್ದಾರೆ. ಕಳೆದ 5 ದಿನಗಳಿಂದಲೂ ಆರೈಕೆ ಮಾಡಿದ್ದರೂ ವೃದ್ಧ ತಿಮ್ಮಪ್ಪ ಚಿಕಿತ್ಸೆ ಫಲಕಾರಿಯಾಗದೇ ಅಸು ನೀಗಿದ್ದರು. ಬಳಿಕ ವೈದ್ಯರು ಶವವನ್ನು ಶವಾಗಾರದಲ್ಲಿರಿಸಿ ವಾರಸುದಾರರ ಶೋಧ ಮಾಡಲಾಯಿತು. ವಾರಸುದಾರರು ಬರದೇ ಇದ್ದುದರಿಂದ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಿಸಿ ಬಳಿಕ ಅಂತ್ಯ ಸಂಸ್ಕಾರ ಮಾಡುವ ಮೂಲಕ ಹೊಸ ಬೆಳಕು ಸಂಸ್ಥೆ ಮಾನವೀಯತೆ ಮೆರೆದಿದೆ.

> ಮಕ್ಕಳು ಬೇಕೆಂದು ಹಂಬಲಿಸಿ ದೇವರಿಗೆ ಹರಕೆ ಹೊತ್ತು ಮಕ್ಕಳನ್ನು ಹೆರುತ್ತಾರೆ. ಈ ತಾತ ತಮಗೆ ಮೂವರು ಮಕ್ಕಳಿದ್ದರೆಂದು ಹೇಳಿದ್ದರು. ಕೊನೆಗೆ ಇಲ್ಲಿ ಬಂದು ಬಿಟ್ಟು ಹೋಗಿದ್ದಾರೆ. ವಾರಸುದಾರರು ಯಾರೆಂದು ಪತ್ತೆಯಾಗದ ಕಾರಣ ಮಾನೀಯತೆ ದೃಷ್ಟಿಯಿಂದ ಸಂಸ್ಕಾರ ಮಾಡಲಾಯಿತು. ರೈತರ ಮಕ್ಕಳಿಗಿಂತ ವೈದ್ಯರು ಮತ್ತು ಇಂಜಿನಿಯರ್ ವೃತ್ತಿಯಲ್ಲಿರುವ ಮಕ್ಕಳೇ ಇಂತಹ ವೃದ್ಧರನ್ನು ಈ ರೀತಿ ಬೀದಿ ಪಾಲು ಮಾಡಿ ಹೋಗುತ್ತಿರುವುದು ವಿಪರ್ಯಾಸ.
>
> – ಯೋಗ ಲಕ್ಷ್ಮೀ
> ಸಂಸ್ಥಾಪಕರು
> ಹೊಸ ಬೆಳಕು ಸಂಸ್ಥೆ, ಹೊಸಪೇಟೆ.

# ಜ. 10 ರಂದು ಬೀದರಗೆ ಅಕ್ಷರ ಜ್ಯೋತಿ ಯಾತ್ರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 07 : ಜನವರಿ 10 ರಂದು 63 ದಿವಸಗಳ ಕಾಲ ರಾಜ್ಯಾದ್ಯಂತ ಮತ್ತು ಗಡಿ ಜಿಲ್ಲೆಗಳಲ್ಲಿ ಅಕ್ಷರ ಜ್ಯೋತಿ ಯಾತ್ರೆ ಮುಗಿಸಿಕೊಂಡು ನಗರಕ್ಕೆ ಆಗಮಿಸುತ್ತಿರುವ ಪ್ರಯುಕ್ತ ಅಂದು ನಗರದ ಬಸವೇಶ್ವರ ವೃತ್ತದಿಂದ ಜಿಲ್ಲಾ ರಂಗಮಂದಿರವರೆಗೆ ಎಂಟು ಜನ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರನ್ನು ಅಲಂಕೃತ ಸಾರೋಟಿನಲ್ಲಿ ಮೆರವಣಿಗೆ ಮಾಡಲಾಗುತ್ತಿದೆ ಎಂದು ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಹುಮನಾಬಾದ ತಾಲೂಕಾಧ್ಯಕ್ಷ ಪಂಡಿತ್ ಬಾಳೂರೆ ತಿಳಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಪ್ರತಿಷ್ಠಾನದ ಅಧ್ಯಕ್ಷ ಬಸವಕುಮಾರ ಪಾಟೀಲರು ಸುಮಾರು 63 ದಿವಸಗಳ ಕಾಲ ಕರ್ನಾಟಕದ ಎಲ್ಲಾ ಜಿಲ್ಲೆಗಳು ಸೇರಿದಂತೆ ಮಹಾರಾಷ್ಟ್ರ ಮತ್ತು ತೆಲಂಗಾಣದ ಗಡಿ ಜಿಲ್ಲೆಗಳಲ್ಲಿ ಸುಮಾರು 35 ಜಿಲ್ಲೆಗಳಲ್ಲಿ ಅಕ್ಷರ ಜ್ಯೋತಿ ಯಾತ್ರೆ ಪ್ರಯುಕ್ತ ಶಾಲಾ ಕಾಲೇಜುಗಳಲ್ಲಿ ಆಕರ್ಷಕ ಉಪನ್ಯಾಸ ನೀಡುತ್ತ ವಿದ್ಯಾರ್ಥಿಗಳ ಭವಿಷ್ಯ ಬದಲಾವಣೆಯೆಡೆಗೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ಜನವರಿ 10 ರಂದು ಯಾತ್ರೆಯ ಸಮಾರೋಪ ಸಮಾರಂಭ ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಜರುಗಲಿದೆ. ಈ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಲಿದ್ದಾರೆ. ಅಲ್ಲದೇ ಜಿಲ್ಲೆಯ ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವರು, ಶಾಸಕರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು. ಖ್ಯಾತ ಅಭಿಯಂತರರು ಹಾಗೂ ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಜಿಲ್ಲಾ ಉಪಾಧ್ಯಕ್ಷ ಹಾವಶೆಟ್ಟಿ ಪಾಟೀಲ ಮಾತನಾಡಿ ರಾಜ್ಯಾದ್ಯಂತ ಒಟ್ಟು 45 ಸಾವಿರ ವಿದ್ಯಾರ್ಥಿಗಳು ಅಕ್ಷರ ಜ್ಯೋತಿ ಯಾತ್ರೆಯ ಸದುಪಯೋಗ ಪಡೆದುಕೊಂಡಿದ್ದಾರೆ. ಈ ಹಿಂದೆಯೂ ಬಸವಕುಮಾರ ಪಾಟೀಲರು ಮಕ್ಕಳ ಮಹಾಮನೆ ಮೂಲಕ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕವಾಗಿ ಅಮೂಲಾಗ್ರ ಪರಿವರ್ತನೆ ಮಾಡಿದ್ದಾರೆ. ಮಕ್ಕಳಲ್ಲಿ ಶೈಕ್ಷಣಿಕ ಮತ್ತು ಮಾನವೀಯ ಮೌಲ್ಯ, ದೇಶಭಕ್ತಿ, ರಾಷ್ಟ್ರೀಯತೆ ಬಿತ್ತಿ ಬೆಳೆಸಲು ಇದೀಗ ಅಕ್ಷರ ಜ್ಯೋತಿ ಯಾತ್ರೆ ಮೂಲಕ ರಾಜ್ಯಾದ್ಯಂತ ಶೈಕ್ಷಣಿಕ ಕ್ರಾಂತಿ ಮಾಡಿ ಸೈ ಎನಿಸಿಕೊಂಡಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದರು.

ಮೆರವಣಿಗೆ ಸಮಿತಿ ಅಧ್ಯಕ್ಷ ರಾಜೇಂದ್ರ ಮಣಗೇರಿ ಮಾತನಾಡಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮುಂಬೈನ ತುಷಾರ್ ಗಾಂಧಿ, ಮಂಗಳೂರಿನ ಹರಿಕೇಳ ಹಾಜಪ್ಪ, ಅಮಯ್ ಮಹಾಲಿಂಗನಾಯಕ್, ಬಿಹಾರದ ಸುಧಾ ವರ್ಗಿಸ್, ಮಡಿಕೇರಿಯ ರಾಶಿ ಮಾಚಪ್ಪ, ಕಾಸರಗೋಡಿನ ಸತ್ಯನಾರಾಯಣ ಮೆಲೆರಿ, ಬೀದರನ ಶಾ ಅಹ್ಮದ್ ರಶೀದ್ ಖಾದ್ರಿ, ಎಚ್‌ಡಿ ಕೋ–ಟೆಯ ಸೋಮಣ್ಣ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹುಚ್ಚಮ್ಮ ಕೊಪ್ಪಳ ಈ ಒಂಭತ್ತು ಜನರನ್ನು ಸಾರೋಟಿನಲ್ಲಿ ಮೆರವಣಿಗೆ ನಡೆಯುತ್ತಿದೆ. ಸುಮಾರು 3 ಸಾವಿರಕ್ಕೂ ಅಧಿಕ ಶಾಲಾ ಕಾಲೇಜಿನ ಮಕ್ಕಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ವೇದಿಕೆ ಮೇಲೆ ಪ್ರಮುಖರಾದ ಸಿದ್ದಯ್ಯ ಕವಡಿಮಠ, ಮಾಣಿಕಪ್ಪ ಗೋರನಾಳೆ, ಮಲ್ಲಿಕಾರ್ಜುನ ಪಂಚಾಕ್ಷರಿ, ಮನೋಜಕುಮಾರ ಬುಕ್ಕಾ ಉಪಸ್ಥಿತರಿದ್ದರು.

# ದೆಹಲಿ ವಿಧಾನಸಭೆಗೆ ಫೆ.5ಕ್ಕೆ ಮತದಾನ, ಫೆ.8ರಂದು ಮತ ಏಣಿಕೆ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಜ.7:ದೆಹಲಿ ವಿಧಾನಸಭೆಯ ಚುನಾವಣೆ ದಿನಾಂಕ ಘೋಷಣೆಯಾಗಿದ್ದು ಫೆಬ್ರವರಿ 5ರಂದು ಮತದಾನ ನಡೆಯಲಿದ್ದು ಫೆಬ್ರವರಿ 8ರಂದು ಫಲಿತಾಂಶ ಪ್ರಕಟವಾಗಲಿದೆ. ಇಂದು ಪತ್ರಿಕಾಗೋಷ್ಠಿಯನ್ನು ಆಯೋಜಿಸಿದ್ದು ಚುನಾವಣಾ ಆಯೋಗ ದೆಹಲಿ ವಿಧಾನಸಭೆ ಚುನಾವಣೆ 2025ರ ವೇಳಾಪಟ್ಟಿಯನ್ನು ಪ್ರಕಟಿಸಿದೆ. ದೆಹಲಿಯ 70 ವಿಧಾನಸಭಾ ಸ್ಥಾನಗಳಿಗೆ ಫೆಬ್ರವರಿ 5 ರಂದು ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಈ ಪತ್ರಿಕಾಗೋಷ್ಠಿಯಲ್ಲಿ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಉಪಸ್ಥಿತರಿದ್ದರು. ದೆಹಲಿ ವಿಧಾನಸಭಾ ಚುನಾವಣೆಯ ಮತದಾನದ ಜೊತೆಗೆ ಚುನಾವಣಾ ಆಯೋಗವು ಚುನಾವಣಾ ಫಲಿತಾಂಶದ ದಿನಾಂಕವನ್ನೂ ಪ್ರಕಟಿಸಿದೆ. ಚುನಾವಣಾ ಆಯೋಗದ ಪ್ರಕಾರ, ದೆಹಲಿ ವಿಧಾನಸಭಾ ಚುನಾವಣೆಯ ಮತದಾನದ ಫಲಿತಾಂಶವನ್ನು ಫೆಬ್ರವರಿ 8 ರಂದು ಅಂದರೆ ಚುನಾವಣೆಯ 3 ದಿನಗಳ ನಂತರ ಪ್ರಕಟವಾಗಲಿದೆ.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.